# ಯುಗರಶ್ಮಿ

- ಹಿಂದೂ- ಮುಸ್ಲಿಂ ಮೈತ್ರಿ
- ಸೌಹೃದ ಸಂದೇಶ
- ದೇವಾನ್ವೇಷಣೆಯ ಆವಶ್ಯಕತೆ
- ದೇವನೂ ಸೃಷ್ಟಿಯೂ
- ಸೂರ್ಯಚಂದ್ರ ಗ್ರಹಣಗಳು ಆಕಾಶದಲ್ಲಿ ದಿವ್ಯ ದೃಷ್ಟಾಂತ
- ಇಸ್ಮುಹು ಅಹ್ಮದ್

**ತ್ರೈಮಾಸಿಕ**
ಮಾರ್ಚ್ 1999
ಬೆಲೆ ರೂ. 5-00

*ಒಂದು ಜನಾಂಗದ ಶತ್ರುತ್ವ ನಿಮ್ಮನ್ನು ಅನ್ಯಾಯವಾಗಿ ವರ್ತಿಸಲು ಪ್ರೇರೇಪಿಸದಿರಲಿ. ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾಗಿದೆ.*

-ಪವಿತ್ರ ಖುರ್‌ಆನ್ (5:9)

# ಯುಗರಶ್ಮಿ

ತ್ರೈಮಾಸಿಕ

10-23-1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

ಬಿಡಿ ಪ್ರತಿ: ರೂ. 5-00 ವಾರ್ಷಿಕ ಚಂದಾ: ರೂ. 20-00 ಅಂಚೆ ಮೂಲಕ : ರೂ. 25-00

ವಿಷಯ ಸೂಚಿಕೆ: ಪುಟ


- ಹಿಂದೂ-ಮುಸ್ಲಿಂ ಮೈತ್ರಿ 1
- ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು 2
- ಸೌಹೃದ ಸಂದೇಶ 3
- ದೇವಾನ್ವೇಷಣೆಯ ಆವಶ್ಯಕತೆ 6
- ದೇವನೂ ಸೃಷ್ಟಿಯೂ 8
- ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ - 12 10
- ಸೂರ್ಯ-ಚಂದ್ರ ಗ್ರಹಣಗಳು ಆಕಾಶದಲ್ಲಿ ದಿವ್ಯ ದೃಷ್ಟಾಂತ 12
- ಮಲಯಾಳಂ ಪಂಚಾಂಗ 23
- 1894 ಎಪ್ರಿಲ್ 6ನೇ ಶುಕ್ರವಾರದ ಸೂರ್ಯಗ್ರಹಣವು 27
- Quite A Rare Event: It occured in Qadian
  FREQUENCY OF ECLIPSES IN THE MONTH OF RAMZAN 28
- ವಹಾಬಿ-ಮೌದೂದಿ-ಖುರಾಫಿ-ಕಾದಿಯಾನಿ 31
- ಇಸ್ಮುಹು ಅಹ್ಮದ್ 33
- ಅಹ್ಮದಿಯಾ ವಾರ್ತೆಗಳು 36



## statement about ownership and other particulars about the Newspaper YUGARASHMI Quarterly

[FORM IV See Rule 8]

| | | | |
|---|---|---|---|
| 1. | Place of Publication | : | Mangalore |
| 2. | Period of its publication | : | Quarterly |
| 3. | Printer's name | : | Muhammed Yusuf |
| | Whether citizen of India? | : | Yes |
| | Address | : | 10-23-1008/1, I Floor Ansari Road, Bunder, Mangalore - 575 001 |
| 4. | Publisher's name | : | Muhammad Yusuf |
| | Whether citizen of India? | : | Yes |
| | Address | : | 10-23-1008/ I Floor Ansari Road, Bunder, Mangalore - 575 001 |
| 5. | Editor's name | : | Muhammad Yusuf |
| | Whether citizen of India? | : | Yes |
| | Address | : | 10-23-1008/, I Floor, Ansari Road, Bunder, Mangalore - 575 001 |
| 6. | Name and address of individuals who own the newspaper and partners or shareholders holding more than one percent of the capital | | Jamath Ahmadiyya 10-23-1008/1, I Floor, Ansari Road, Bunder Mangalore - 575 001. |

I, Muhammad Yusuf hereby declare that the particulars given above are true to the best of my knwoledge and belief.

Sd/-
**Muhammad Yusuf**

Date: 1-3-1999

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ: ಮುಹಮ್ಮದ್ ಯೂಸುಫ್

ಆರಂಭ : 1975 ಸಂಪುಟ : 19 ಜನವರಿ - ಮಾರ್ಚ್ 1999 ಸುಲ್ಹ್ - ಅಮಾನ್ 1378 ಸಂಚಿಕೆ : 1

## ಹಿಂದೂ - ಮುಸ್ಲಿಂ ಮೈತ್ರಿ

ಐಕ್ಯ ಅಥವಾ ಮೈತ್ರಿ ಅತ್ಯಮೂಲ್ಯವಾದುದಾಗಿದೆ. ಬೇರಾವ ರೀತಿಯಿಂದಲೂ ನಿವಾರಿಸಲು ಸಾಧ್ಯವಿಲ್ಲದ ವಿಪತ್ತುಗಳನ್ನೂ ಸಂಕಷ್ಟಗಳನ್ನೂ ಐಕ್ಯದಿಂದ ದೂರೀಕರಿಸಲು ಸಾಧ್ಯವೆಂಬುದು ಸ್ಪಷ್ಟ. ಆದುದರಿಂದ ಐಕ್ಯದ ಅನುಗ್ರಹೀತ ಫಲಗಳಿಂದ ನಮ್ಮನ್ನು ನಾವೇ ದೂರಸರಿಸುವುದು ವಿವೇಕಯುತವಲ್ಲ. ಹಿಂದೂಗಳೂ ಮುಸ್ಲಿಮರೂ ಈ ರಾಷ್ಟ್ರದ ಅವಿಭಾಜ್ಯ ಘಟಕಗಳಾದ ಎರಡು ಸಮುದಾಯಗಳಾಗಿವೆ. ಇವುಗಳಲ್ಲಿ ಯಾವುದಾದರೂ ಒಂದು ಸಮುದಾಯವು ಯಾವಾಗಲಾದರೂ ಒಂದಾಗಿ ಇನ್ನೊಂದು ಸಮುದಾಯವನ್ನು (ಹಿಂದುಗಳು ಒಟ್ಟುಗೂಡಿ ಮುಸ್ಲಿಮರನ್ನೋ ಅಥವಾ ಮುಸ್ಲಿಮರು ಒಟ್ಟು ಸೇರಿ ಹಿಂದುಗಳನ್ನೋ) ಈ ರಾಷ್ಟ್ರದಿಂದ ಹೊರದಬ್ಬಲು ಆಲೋಚಿಸುವುದಾದರೆ ಅದು ಅಸಂಭವನೀಯ ಹಾಗೂ ಭ್ರಮೆ ಮಾತ್ರವಾಗಿದೆ. ಬದಲಾಗಿ, ಈ ಎರಡೂ ಸಮುದಾಯಗಳನ್ನು ಒಟ್ಟುಗೂಡಿಸುವ ಬಂಧವು ಭೇದಿಸಲಾಗದಷ್ಟು ಶಕ್ತಿಯುತವಾಗಿದೆ. ಇವರಲ್ಲಿ ಒಂದು ಸಮುದಾಯದವರಿಗೆ ಏನಾದರೊಂದು ವಿಪತ್ತು ಸಂಭವಿಸಿದರೆ ಮತ್ತೊಂದು ಸಮುದಾಯದವರಿಗೆ ಸಹ ಅದರ ಬಾಧೆ ತಟ್ಟದಿರಲಿಕ್ಕಿಲ್ಲ. ಒಂದು ಸಮುದಾಯವು ಅಹಂಭಾವದಿಂದ ಮತ್ತೊಂದು ಸಮುದಾಯವನ್ನು ನಿಂದಿಸುವುದಾದರೆ ಅಥವಾ ಅವಹೇಳನವನ್ನುಂಟು ಮಾಡುವುದಾದರೆ ಆ ಸಮುದಾಯವು ಸಹ ಅದೇ ರೀತಿಯ ನಿಂದನೆಗೂ ಅವಹೇಳನಕ್ಕೂ ಗುರಿಯಾಗುವುದು. ಒಂದು ಸಮುದಾಯವು ಇನ್ನೊಂದು ಸಮುದಾಯದೊಡನೆ ಅನುಕಂಪವನ್ನು ತೋರಿಸದಿದ್ದರೆ ಅವರಿಗೆ ಇವರ ಅನುಕಂಪ ಲಭಿಸಲಾರದು. ಒಂದು ಸಮುದಾಯದ ಒಬ್ಬ ವ್ಯಕ್ತಿ ಇನ್ನೊಂದು ಸಮುದಾಯಕ್ಕೆ ನಷ್ಟವನ್ನುಂಟು ಮಾಡಲು ನೋಡುವನಾದರೆ, ಅವನು ತಾನು ಕುಳಿತಿರುವ ಮರದ ಕೊಂಬೆಯನ್ನು ತನ್ನ ಕೈಯಿಂದಲೇ ಕಡಿಯುವವನಂತಾಗುವನು.

ಹಝ್ರತ್ ಮಿರ್ಝಾ ಗುಲಾಂ ಅಹ್ಮದ್

ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

* ತನಗೋಸ್ಕರ ಇಷ್ಟಪಡುವುದನ್ನು ತನ್ನ ಸಹೋದರನಿಗೂ ಇಷ್ಟಪಡುವ ತನಕ ನಿಮ್ಮ ಪೈಕಿ ಯಾರೂ ಸತ್ಯ ವಿಶ್ವಾಸಿಯಾಗಲಾರ.

* ಒಳಿತನ್ನು ತೋರಿಸಿಕೊಡುವವನಿಗೆ ಅದನ್ನು ಮಾಡಿದವನ ತುಲ್ಯ ಪ್ರತಿಫಲ ಲಭಿಸುವುದು.

* ಯಾರಾದರೂ ಅಲ್ಲಾಹನಲ್ಲೂ ಅಂತ್ಯದಿನದ ಬಗ್ಗೆಯೂ ವಿಶ್ವಾಸವುಳ್ಳವನಾಗಿದ್ದರೆ ಅವನು ನೆರೆಕರೆಯವರನ್ನು ಉಪದ್ರವಿಸಬಾರದು; ಅವನು ಅತಿಥಿಗಳನ್ನು ಆದರಿಸಬೇಕು; ಅವನು ಒಳಿತನ್ನು ಮಾತ್ರ ನುಡಿಯಬೇಕು ಅಥವಾ ನಿಶ್ಶಬ್ದತೆ ಪಾಲಿಸಬೇಕು.

* ವೃದ್ಧನ ಪ್ರಾಯವನ್ನು ನೋಡಿ ಆದರಿಸುವ ಯುವಕನು ತನ್ನ ವೃದ್ಧಾಪ್ಯ ಕಾಲದಲ್ಲಿ ಇತರರಿಂದ ಆದರಿಸಲ್ಪಡುವನು.

* ಐಹಿಕಾಡಂಬರಗಳನ್ನು ನೀನು ತ್ಯಜಿಸು; ಆಗ ಅಲ್ಲಾಹನು ನಿನ್ನನ್ನು ಮೆಚ್ಚುವನು. ಜನರಲ್ಲಿರುವುದನ್ನು ನೀನು ಮೋಹಿಸಬೇಡ; ಆಗ ಜನರು ನಿನ್ನನ್ನು ಮೆಚ್ಚುವರು.

* ಹೊಟ್ಟೆಯ ಮೂರರಲ್ಲಿ ಒಂದಂಶವನ್ನು ಆಹಾರಕ್ಕೂ ಮೂರರಲ್ಲಿ ಒಂದಂಶವನ್ನೂ ನೀರಿಗೂ ಮೂರರಲ್ಲಿ ಒಂದಂಶವನ್ನು ಶ್ವಾಸೋಚ್ಛ್ವಾಸಕ್ಕೂ ಇರಿಸಿಕೊಳ್ಳಲಿ.

* ಐಶ್ವರ್ಯವೆಂದರೆ ಸಂಪತ್ತಿನ ಆಧಿಕ್ಯವಲ್ಲ. ಪರಾಶ್ರಯವಿಲ್ಲದಿರುವುದೇ ಐಶ್ವರ್ಯ.

* ತಾನು ದುಡಿದು ತಿನ್ನುವುದಕ್ಕಿಂತ ಉತ್ತಮವಾದ ಆಹಾರ ಬೇರೊಂದಿಲ್ಲ.

* ದಾನವು ಧನವನ್ನು ಕಡಿಮೆ ಮಾಡಲಾರದು. ಸಹಿಷ್ಣುತೆ ನಿಮಿತ್ತ ಅಲ್ಲಾಹನು ಗೌರವವನ್ನು ಹೆಚ್ಚಿಸುವನು. ವಿನಯ ತೋರಿಸುವವನನ್ನು ಅಲ್ಲಾಹನು ಮೇಲೆತ್ತುವನು.

* ಪುನರುತ್ಥಾನ ದಿನದಂದು ಸತ್ಯ ವಿಶ್ವಾಸಿಯ ತಕ್ಕಡಿಯಲ್ಲಿ ಸತ್‌ಸ್ವಭಾವಕ್ಕಿಂತ ಭಾರವಾದುದು ಬೇರೇನೂ ಇಲ್ಲ. ಖಂಡಿತ, ನೀಚ ಮಾತುಗಳನ್ನಾಡುವ ದುಸ್ವಭಾವಿಯೊಡನೆ ಅಲ್ಲಾಹನು ಕೋಪಿಸುವನು.

# ಸೌಹೃದ ಸಂದೇಶ

**ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅವರು 1908ನೇ ಇಸವಿಯಲ್ಲಿ ತನ್ನ ಮರಣಕ್ಕೆ ಎರಡು ದಿವಸ ಮೊದಲು ಭಾರತೀಯರಿಗೆ ನೀಡಿದ ಅಂತ್ಯ ಸಂದೇಶದ ಕೆಲವು ಭಾಗಗಳು.**

ಸ್ನೇಹಿತರೇ, ಹಿಂದುಗಳೋ, ಮುಸ್ಲಿಮರೋ ಆದ ನಾವೆಲ್ಲರೂ ನೂರಾರು ವಿಶ್ವಾಸಾಭಿಪ್ರಾಯ ವೈಪರೀತ್ಯಗಳಿಂದ ಕೂಡಿದವರಾಗಿದ್ದರೂ ಈ ಪ್ರಪಂಚದ ಸೃಷ್ಟಿಕರ್ತನೂ ಪ್ರಭುವೂ ಆದ ಪರಮಾತ್ಮನಲ್ಲಿ ವಿಶ್ವಾಸವಿಡುವ ವಿಷಯದಲ್ಲಿ ಒಂದಾಗುತ್ತೇವೆ. ಹಾಗೆಯೇ ನಾವೆಲ್ಲರೂ ಮನುಷ್ಯರೆಂದು ಮಾತ್ರವಲ್ಲ ಒಂದೇ ದೇಶದಲ್ಲಿ ವಾಸಿಸುವುದರಿಂದಲೂ ಪರಸ್ಪರ ನೆರೆಕರೆಯವರೆಂಬ ನೆಲೆಯಲ್ಲಿಯೂ ಸಾಮೂಹಿಕವಾಗಿ ಅಭಿವೃದ್ಧಿಗಳಿಗಾಗಿ ಒಂದಾಗುತ್ತೇವೆ. ಆದುದರಿಂದ ನಾವು ಆತ್ಮೀಯತೆಯಿಂದಲೂ ನಿಷ್ಕಳಂಕತೆಯಿಂದಲೂ ಪರಸ್ಪರ ಮಿತ್ರರಂತೆ ವರ್ತಿಸಿ, ಧಾರ್ಮಿಕವೂ ಲೌಕಿಕವೂ ಆದ ಎಲ್ಲ ಸಂಕಷ್ಟಗಳಲ್ಲಿ ಅನ್ಯೋನ್ಯ ಸಹಾನುಭೂತಿಯನ್ನು ಪ್ರಕಟಿಸಿ, ಒಂದೇ ಶರೀರದ ಅವಯವಗಳಂತೆ ಪರಸ್ಪರ ಸಹಕರಿಸಬೇಕಾದುದು ನಮ್ಮ ಕರ್ತವ್ಯವಾಗಿದೆ.

ಪ್ರಿಯ ದೇಶಬಾಂಧವರೇ, ಸಹಾನುಭೂತಿಯ ಉಪದೇಶವನ್ನೀಯದ ಧರ್ಮವು ಯಥಾರ್ಥ ಧರ್ಮವಲ್ಲ. ಹಾಗೆಯೇ ಸಹಾನುಭೂತಿಯನ್ನು ತೋರಿಸದ ಮನುಷ್ಯನು ಮನುಷ್ಯನೆಂದು ಕರೆಯಲ್ಪಡಲು ಅರ್ಹನಲ್ಲ. ಪರಮಾತ್ಮನು ತನ್ನ ಅನುಗ್ರಹವನ್ನು ಯಾವೊಂದು ಜಾತಿಯವರಿಗೂ ನೀಡದಿರಲಿಲ್ಲ. ಆರ್ಯಾವರ್ತದ ಪೂರ್ವಿಕರಿಗೆ ಅವನು ಏನೆಲ್ಲ ಶಕ್ತಿಗಳನ್ನೂ ಬೋಧನೆಗಳನ್ನೂ ಇತ್ತಿದ್ದನೋ ಅಂಥ ಶಕ್ತಿಗಳನ್ನೂ ಬೋಧನೆಗಳನ್ನೂ ಅವನು ಅರಬಿಯರಿಗೂ ಪಾರ್ಸಿಯರಿಗೂ ಸಿರಿಯಾದವರಿಗೂ ಚೀನೀಯರಿಗೂ ಜಪಾನಿಯರಿಗೂ ಯುರೋಪ್ಯನರಿಗೂ ಅಮೇರಿಕನರಿಗೂ ಇತ್ತಿರುವನು. ಸಕಲ ಜನಾಂಗಗಳಿಗೂ ದೇವನ ಭೂಮಿಯು ಒಂದು ವಿಶಾಲವಾದ ಪ್ರಾಂಗಣದಂತಿದೆ. ಹಾಗೆಯೇ ಎಲ್ಲರಿಗೂ ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು ಪ್ರಕಾಶವನ್ನು ಕೊಡುತ್ತವಲ್ಲದೆ ಅವುಗಳಿಗೆ ದೇವನು ನಿಶ್ಚಯಿಸಿದ ಮತ್ತಿತರ ಕಾರ್ಯಗಳನ್ನು ಸಹ ಅವು ನಿರ್ವಹಿಸುತ್ತವೆ. ಎಲ್ಲ ಜಾತಿಯವರೂ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ವಾಯು, ನೀರು, ಬೆಂಕಿ, ಮಣ್ಣು ಎಂಬಿತ್ಯಾದಿಗಳಿಂದ ಪ್ರಯೋಜನವನ್ನು ಪಡೆಯುತ್ತಾರೆ. ಹಾಗೆಯೇ ಭೂಮಿಯ ಉತ್ಪತ್ತಿಗಳಾದ ಧಾನ್ಯಗಳನ್ನೂ ಮೂಲಿಕೆಗಳನ್ನೂ ಫಲಪುಷ್ಪಾದಿಗಳನ್ನೂ ತಮ್ಮ ಪ್ರಯೋಜನಕ್ಕಾಗಿ ಉಪಯೋಗಿಸುತ್ತಾರೆ. ಪರಮಾತ್ಮನ ಈ ವಿಶಾಲವಾದ ಉದಾರತೆಯು ನಮಗೆ ಕಲಿಸಿಕೊಡುವುದೇನೆಂದರೆ ನಾವು ಸಹ ಮನುಷ್ಯ ಕುಲಕ್ಕೆ ಒಳಿತನ್ನುಂಟುಮಾಡಬೇಕು ಹಾಗೂ ಸಂಕುಚಿತ ಮನೋಭಾವವಾಗಲಿ ಅಸಹಾನುಭೂತಿಯಾಗಲಿ ನಮ್ಮಲ್ಲಿ ಇರಬಾರದು.

ಸ್ನೇಹಿತರೇ, ನಮ್ಮಲ್ಲಿ ಯಾವುದಾದರೊಂದು ಸಮುದಾಯದವರು ಪರಮಾತ್ಮನ ಈ ದಿವ್ಯ ಮಾದರಿಯನ್ನು ಗೌರವಿಸದೆಯೂ ಅವನ ಪಾವನ ಗುಣಗಳನ್ನನುಸರಿಸಿ ತಮ್ಮ ನಡವಳಿಕೆಗಳನ್ನು ರೂಪಿಸದೆಯೂ ಇದ್ದರೆ ಅವರು ಬೇಗನೇ ನಾಶವಾಗುವರು. ಈ ಉಲ್ಲಂಘನೆಯ ದುಷ್ಪರಿಣಾಮಗಳು ಅವರ ಮೇಲೆ ಮಾತ್ರವಲ್ಲ, ಅವರ ಭಾವಿ ಸಂತಾನಗಳ ಮೇಲೆಯೂ ಉಂಟಾಗುವುದು. ಪರಮಾತ್ಮನ ಗುಣ ವಿಶೇಷಗಳನ್ನು ಗ್ರಹಣ ಮಾಡಿ ತನ್ನ ಜೀವಿತದಲ್ಲಿ ಪ್ರತಿಬಿಂಬಿಸುವುದರ ಮೂಲಕ ಮನುಷ್ಯನ ಅಸ್ತಿತ್ವ ಬಾಕಿಯಾಗುವುದು. ಸಮಸ್ತ ಶಾಂತಿಯ ಮೂಲವಾದ ದೈವಿಕ ಗುಣಗಳಿಗನುಸಾರವಾಗಿ ಜೀವನ ಕ್ರಮವನ್ನು ಅಳವಡಿಸುವುದರಲ್ಲಿ ಮನುಷ್ಯನ ಭೌತಿಕ ಮತ್ತು ಆಧ್ಯಾತ್ಮಿಕ ಜೀವನ ಅವಲಂಬಿಸಿದೆ. ಲೋಕಾರಂಭ ಮೊದಲ್ಗೊಂಡು ಎಲ್ಲ ರಾಜ್ಯಗಳ ಸತ್ಯಸಂಧರಾದ ದೇವದಾಸರು ಇದನ್ನೇ ಸಾಕ್ಷಿಗೊಳಿಸಿರುವರು.

ಈ ವಿಶಾಲವಾದ ತತ್ವವನ್ನು ಪ್ರಬೋಧಿಸುವ ಒಂದು ವಾಕ್ಯದಿಂದ ಪರಮಾತ್ಮನು ಪವಿತ್ರ ಖುರ್‌ಆನಿನ "ಫಾತಿಹ" ಎಂಬ ಪ್ರಥಮ ಅಧ್ಯಾಯವನ್ನು ಆರಂಭಿಸಿರುವನು. ನೋಡಿರಿ: "ಅಲ್‌ಹಮ್ದು ಲಿಲ್ಲಾಹಿ ರಬ್ಬಿಲ್ ಆಲಮೀನ್" ಅಂದರೆ **"ಎಲ್ಲಸ್ತೋತ್ರಗಳು ಸರ್ವಲೋಕಗಳ ಸೃಷ್ಟಿಕರ್ತನೂ ರಕ್ಷಕನೂ ಆದ ದೇವನಿಗೆ ಸಲ್ಲುವುವು."** ಇಲ್ಲಿ "ಲೋಕಗಳು" ಎಂಬ ಪದದಲ್ಲಿ ಎಲ್ಲ ಜನಾಂಗದವರೂ ವಿವಿಧ ಕಾಲದವರೂ ವಿವಿಧ ರಾಜ್ಯದವರೂ ಒಳಪಡುತ್ತಾರೆ. ದೇವಾನುಗ್ರಹಗಳು ತಮಗೆ ಮಾತ್ರ ಲಭಿಸಿರುವುದೆಂದೋ, ಇತರ ಜನಾಂಗದವರು ಮನುಷ್ಯ ವರ್ಗದಲ್ಲಿ ಒಳಪಟ್ಟವರಲ್ಲವೆಂದೋ ದೇವರು ಅವರನ್ನು ಸೃಷ್ಟಿಸಿದ ನಂತರ ಅವರನ್ನು ಮರೆತಿರುವನೆಂದೋ ಕೈಬಿಟ್ಟಿರುವನೆಂದೋ ಅವರು ಅವನ ಸೃಷ್ಟಿಗಳೇ ಅಲ್ಲವೆಂಬ ರೀತಿಯಲ್ಲಿ ದೇವರ ಅನುಗ್ರಹಗಳಲ್ಲಿ ಅವರಿಗೆ ಯಾವ ಸಹಭಾಗಿತ್ವ ಕೂಡ ಇಲ್ಲವೆಂದೋ ಭಾವಿಸಿ, ದೇವರ ಸರ್ವವ್ಯಾಪಕವಾದ ಕೃಪಾಕಟಾಕ್ಷವನ್ನು ಅವಗಣಿಸುವ ಎಲ್ಲ ಜಾತಿಯವರಿಗೂ ಈ ಖುರ್‌ಆನ್ ವಾಕ್ಯ ಒಂದು ಖಂಡನೆಯಾಗಿದೆ. ಸರ್ವ ಲೋಕಗಳ ರಕ್ಷಕನೂ ಪರಿಪಾಲಕನೂ ಆದ ಪರಮಾತ್ಮನು ಪಕ್ಷಪಾತವನ್ನು ತೋರಿಸುವ ರೀತಿಯಲ್ಲಿ ಒಂದು ಪ್ರತ್ಯೇಕ ಜನಾಂಗದವರಲ್ಲಿ ಮಾತ್ರ ಶ್ರದ್ಧೆಯಿಟ್ಟಿದ್ದಾನೆಂಬುದು ತುಂಬಾ ಅಸಂಗತವಾಗಿದೆ. ಇಂಥ ಅಸಂಬಧ ಸಿದ್ಧಾಂತಗಳನ್ನು ಖಂಡಿಸುವುದಕ್ಕಾಗಿ "ಎಲ್ಲಸ್ತೋತ್ರಗಳು ಸರ್ವ ಲೋಕಗಳ ಸೃಷ್ಟಿಕರ್ತನೂ ರಕ್ಷಕನೂ ಆದ ದೇವನಿಗೆ ಸಲ್ಲುವುವು" ಎಂಬ ವಚನದಿಂದ ಪವಿತ್ರ ಖುರ್‌ಆನ್ ಪ್ರಾರಂಭವಾಗುತ್ತದೆ.

ಪರಮಾತ್ಮನು ಯಾವುದಾದರೊಂದು ಪ್ರತ್ಯೇಕ ಜನಾಂಗದವರಲ್ಲಿ ಅಥವಾ ಪ್ರತ್ಯೇಕ ದೇಶದಲ್ಲಿ ಮಾತ್ರ ಪ್ರವಾದಿಗಳನ್ನು ನಿಯೋಜಿಸಿರುವನೆಂಬ ವಿಶ್ವಾಸವು ತಪ್ಪೆಂದು ಪವಿತ್ರ ಖುರ್‌ಆನಿನಲ್ಲಿ ಹಲವು ಸ್ಥಳಗಳಲ್ಲಿ ಅಲ್ಲಾಹನು ನುಡಿದಿರುವನು. ಆಧ್ಯಾತ್ಮಿಕ ಜ್ಞಾನವನ್ನು ನೀಡುವುದರಲ್ಲಿ ಯಾವ ಗೋತ್ರದವರನ್ನಾಗಲಿ ದೇಶದವರನ್ನಾಗಲಿ ಅವರು ಮರೆಯಲಿಲ್ಲ. ಈ ಸಂಗತಿಯನ್ನು ಪವಿತ್ರ ಖುರ್‌ಆನಿನಲ್ಲಿ ಹಲವೆಡೆಗಳಲ್ಲಿ ಉಪಯುಕ್ತ ಉದಾಹರಣೆಗಳಿಂದಲೂ ದೃಷ್ಟಾಂತಗಳಿಂದಲೂ ಸ್ಪಷ್ಟಪಡಿಸಲಾಗಿದೆ. ಸರ್ವಶಕ್ತನಾದ ಪರಮಾತ್ಮನು ಎಲ್ಲ ಸಮುದಾಯಗಳಿಗೂ ದೇಶದವರಿಗೂ ಅವರ ಭೌತಿಕಾವಶ್ಯಕತೆಗಳನ್ನು ಪೂರೈಸಲು ಸಕಲ ವಿಧದ ಸೌಕರ್ಯಗಳನ್ನು ಒದಗಿಸಿಕೊಟ್ಟಿರುವ ಹಾಗೆಯೇ ಎಲ್ಲ ಜನಾಂಗದವರ ಮತ್ತು ಎಲ್ಲ ದೇಶದವರ

ಆಧ್ಯಾತ್ಮಿಕ ಆವಶ್ಯಕತೆಗಳಿಗಾಗಿಯೂ ಎಲ್ಲ ಏರ್ಪಾಡುಗಳನ್ನು ಮಾಡಿರುವನು. ಇದರ ಕುರಿತು ಪವಿತ್ರ ಖುರ್‌ಆನಿನ ಒಂದೆಡೆಯಲ್ಲಿ ಹೀಗೆ ಹೇಳಲಾಗಿದೆ: **"ವ ಇನ್ ಮಿನ್ ಉಮ್ಮತಿನ್ ಇಲ್ಲಾ ಖಲಾ ಫೀಹಾ ನದೀರ್" ಅಂದರೆ "ಒಬ್ಬ ಮುನ್ನೆಚ್ಚರಿಕೆಯನ್ನೀಯುವವನು (ಉಪದೇಶಕನು) ಬಂದಿರದ ಒಂದು ಸಮುದಾಯವಾಗಲಿ ಇಲ್ಲ." (35:25)**

ಆದುದರಿಂದ ನಾವೆಲ್ಲರೂ ವಿಶ್ವಾಸವಿಡಬೇಕಾದ ಸಕಲ ಸಂಪೂರ್ಣನೂ ಸತ್ಯ ಸ್ವರೂಪನೂ ಆದ ಪರಮಾತ್ಮನು ಸರ್ವಲೋಕಗಳ ಸೃಷ್ಟಿಕರ್ತನೂ ಪಾಲಕನೂ ಆಗಿದ್ದಾನೆಂಬುದು ಅವಿತರ್ಕ್ಯವಾಗಿದೆ. ಅವನ ಪರಿಪಾಲನೆಯು ಯಾವುದಾದರೊಂದು ಪ್ರತ್ಯೇಕ ಜಾತಿಗೋ ಪ್ರತ್ಯೇಕ ಕಾಲಕ್ಕೋ ಪ್ರತ್ಯೇಕ ರಾಜ್ಯಕ್ಕೋ ಸೀಮಿತವಾದುದಲ್ಲ. ಅವನು ಎಲ್ಲ ಜಾತಿಯವರ ಎಲ್ಲ ಕಾಲಗಳ ಎಲ್ಲ ರಾಜ್ಯಗಳ ಪಾಲಕನಾಗಿದ್ದಾನೆ. ಭೌತಿಕವೂ ಆಧ್ಯಾತ್ಮಿಕವೂ ಆದ ಸರ್ವಶಕ್ತಿಗಳ ಆರಂಭ ಅವನಿಂದಾಗಿದೆ. ಎಲ್ಲ ಸೃಷ್ಟಿಗಳನ್ನು ಸಾಕಿ ಸಲಹುವವನು ಅವನೇ ಆಗಿದ್ದಾನೆ. ಎಲ್ಲ ವಸ್ತುಗಳು ಅವನನ್ನೇ ಆಶ್ರಯಿಸಿಕೊಂಡಿವೆ. ಅವನ ಅನುಗ್ರಹವು ಸಕಲ ಜಾತಿಗಳಲ್ಲಿಯೂ ಸಕಲ ರಾಜ್ಯಗಳಲ್ಲಿಯೂ ಸಕಲ ಯುಗಗಳಲ್ಲಿಯೂ ಸರ್ವ ವ್ಯಾಪಕವಾಗಿದೆ. ಇದು ಹೀಗೆ ಇರುವುದೇಕೆಂದರೆ ಅವನ ಕೃಪೆಗೆ ಸಂಬಂಧಿಸಿ ಯಾವುದೇ ಜನತೆಯೂ ಆರೋಪಿಸುವ ಸಂದರ್ಭ ಬರಬಾರದೆಂಬುದಕ್ಕಾಗಿದೆ. ಪರಮಾತ್ಮನು ಅವನ ಅನುಗ್ರಹಗಳನ್ನು ಇತರರಿಗಲ್ಲದೆ ತಮಗೆ ಕರುಣಿಸಲಿಲ್ಲವೆಂದೋ ಪರಮಾತ್ಮನು ತನ್ನ ವಚನ, ಪ್ರಕಟಣೆ ಹಾಗೂ ದೃಷ್ಟಾಂತಗಳ ಮುಖಾಂತರ ಹಿಂದಿನ ಕಾಲದಲ್ಲಿ ಅಲ್ಲದೆ ತಮ್ಮ ಕಾಲದಲ್ಲಿ ಪ್ರತ್ಯಕ್ಷನಾಗಲಿಲ್ಲವೆಂದೋ ಯಾವುದೇ ಜನಾಂಗಕ್ಕೂ ಹೇಳುವರೆ ಅವನು ಎಡೆಗೊಡಲಿಲ್ಲ. ಹಾಗೆ ಆ ಸರ್ವವಲ್ಲಭನು ತನ್ನ ಭೌತಿಕವೂ ಆಧ್ಯಾತ್ಮಿಕವೂ ಆದ ಅನುಗ್ರಹಗಳಿಂದ ಒಂದು ಸಮುದಾಯವನ್ನಾಗಲಿ ಒಂದು ಕಾಲವನ್ನಾಗಲಿ ಬಿಡದೆ ತನ್ನ ಕೃಪಾ ವಿತರಣೆಯನ್ನು ಸರ್ವವ್ಯಾಪಕವನ್ನಾಗಿಯೂ ನಿತ್ಯವನ್ನಾಗಿಯೂ ಮಾಡಿರುವನು.

ಹೀಗೆ ಪರಮಾತ್ಮನ ಅನುಗ್ರಹ ನಿಸ್ಸೀಮವೂ ಸರ್ವವ್ಯಾಪಕವೂ ಆಗಿರುವಾಗ ಅವನ ದಿವ್ಯಗುಣಗಳನ್ನು ನಾವು ನಮ್ಮ ಜೀವನಕ್ರಮದಲ್ಲಿ ತಂದು, ಅದಕ್ಕನುಸಾರವಾಗಿ ನಮ್ಮ ಸ್ವಭಾವಗಳನ್ನು ಕ್ರಮಪಡಿಸಬೇಕಾದುದು ಅತ್ಯಾವಶ್ಯಕವಾಗಿದೆ. ಎಲೈ ದೇಶಬಾಂಧವರೇ, ಈ ವಿಶಾಲವಾದ ಮನೋಭಾವದೆಡೆಗೆ ನಿಮ್ಮನ್ನು ಆಮಂತ್ರಿಸಲಿಕ್ಕಾಗಿ ಈ ವಿಜ್ಞಾಪನೆಯನ್ನು ನಿಮ್ಮ ಸಮಕ್ಷಮ ಸಮರ್ಪಿಸುವೆನು. ಸ್ನೇಹ ಭಾವದ ಈ ಆಮಂತ್ರಣದ ಮರೆಯಲ್ಲಿ ನನಗೆ ಸ್ವಾರ್ಥಪರವಾದ ಉದ್ದೇಶವೇನಾದರೂ ಉಂಟೆಂದು ನೀವು ಭಾವಿಸದಿರಲಿಕ್ಕಾಗಿ, ಸರ್ವಶಕ್ತನಾದ ಪರಮಾತ್ಮನೇ ನಿಮ್ಮ ಹೃದಯಗಳಲ್ಲಿ ಸತ್ಯವನ್ನು ಪ್ರಕಟಿಸಲಿಯೆಂದೂ ನಿಮ್ಮ ಕ್ಷೇಮಾಭಿವೃದ್ಧಿಗಳಿಗಾಗಿ ನನ್ನ ಹೃದಯದಲ್ಲಿರುವ ಆ ಇಚ್ಛೆಯ ರಹಸ್ಯವನ್ನು ಅವನೇ ನಿಮಗೆ ಮನಗಾಣಿಸಲಿಯೆಂದೂ ನಾನು ಸಹೃದಯತೆಯಿಂದ ಪ್ರಾರ್ಥಿಸುತ್ತೇನೆ.

ಪ್ರಿಯ ಸಹೃದಯರೇ, ಒಂದು ಸಮುದಾಯವು ಅನ್ಯ ಸಮುದಾಯಗಳ ಪ್ರವಾದಿಗಳನ್ನು ನಿಂದಿಸುವುದೂ ಆಕ್ಷೇಪಿಸುವುದೂ ಕಾಲಾಂತರದಲ್ಲಿ ದೇಹಕ್ಕೆ ಮಾತ್ರವಲ್ಲ ಆತ್ಮಕ್ಕೆ ಸಹ ನಾಶವನ್ನುಂಟು ಮಾಡಿ ಧಾರ್ಮಿಕವೂ ಲೌಕಿಕವೂ ಆದ ಜೀವಿತಕ್ಕೇನೇ ಹಾನಿಯನ್ನುಂಟು ಮಾಡುವ ಒಂದು ಭಯಂಕರ ವಿಷವೆಂದು ದೀರ್ಘಕಾಲದ ಅನುಭವಗಳೂ ಆಗಿಂದಾಗ್ಗೆ ಸಂಭವಿಸುತ್ತಿರುವ ಪರೀಕ್ಷಾ ಸಂಭವಗಳೂ ನಮಗೆ ರುಜುಪಡಿಸಿಕೊಡುತ್ತವೆ. ಯಾವ ರಾಜ್ಯ ನಿವಾಸಿಗಳು ಅನ್ಯೋನ್ಯ ಮತಾಚಾರ್ಯರನ್ನು ಅವಹೇಳಿಸುತ್ತಾರೋ ಅವರಿಗೆ ಸಮಾಧಾನದ ಜೀವಿತ ಸಾಧ್ಯವಲ್ಲ. ಒಂದು ಸಮುದಾಯವು ಮತ್ತೊಂದು ಸಮುದಾಯದ ಪ್ರವಾದಿಗಳನ್ನು ಅಥವಾ ಎರಡು ಸಮುದಾಯಗಳೂ ಅನ್ಯೋನ್ಯ ಪ್ರವಾದಿಗಳನ್ನೂ ಋಷಿಗಳನ್ನೂ ಅವತಾರ ಪುರುಷರನ್ನೂ ಆಕ್ಷೇಪಿಸುವುದಾದರೆ, ದೂಷಿಸುವುದಾದರೆ ಆ ಸಮುದಾಯಗಳೆಡೆಯಲ್ಲಿ ಎಂದಿಗೂ ಪರಸ್ಪರ ಯಥಾರ್ಥ ಐಕ್ಯ ಮತ್ತು ಮೈತ್ರಿಯೇರ್ಪಡಲಾರದು. ತಾನು ನಂಬಿ ಆದರಿಸುವ ಪ್ರವಾದಿಯನ್ನೋ ಮತಾಚಾರ್ಯನನ್ನೋ ಇನ್ನೊಬ್ಬನು ನಿಂದಿಸುವುದನ್ನು ಕೇಳಿದಾಗ ಯಾರಿಗೆ ತಾನೆ ರೋಷವುಂಟಾಗಲಾರದು? ಮುಸ್ಲಿಮರು ತಮ್ಮ ಪ್ರವಾದಿಯನ್ನು ದೇವನೆಂದೋ, ದೇವಪುತ್ರನೆಂದೋ ಭಾವಿಸುವುದಿಲ್ಲವಾದರೂ ಅವರು ಆ ಪುಣ್ಯಾತ್ಮರನ್ನು ಭೂಜಾತರಾದ ಸಕಲ ಮಹಾತ್ಮರಿಗಿಂತ ಶ್ರೇಷ್ಠನೆಂದು ನಂಬುವ ಕಾರಣ ಆ ಮಹಾತ್ಮರಿಗೆ ಸಂಬಂಧಿಸಿ ಮಾತನಾಡುವಾಗ ಗೌರವವಾದರಗಳಿಂದ ಕೂಡಿರದ ಪಕ್ಷದಲ್ಲಿ ಒಬ್ಬ ಯಥಾರ್ಥ ಮುಸ್ಲಿಮನೊಡನೆ ಸ್ನೇಹ ಸಂಬಂಧವನ್ನು ಸ್ಥಾಪಿಸಲು ಒಬ್ಬ ಮುಸ್ಲಿಮೇತರನಿಗೆ ಎಂದಿಗೂ ಸಾಧ್ಯವಿಲ್ಲ.

ನಾವು ಇತರ ಸಮುದಾಯಗಳ ಪ್ರವಾದಿಗಳನ್ನು ಎಂದಿಗೂ ನಿಂದಿಸುವುದಿಲ್ಲ. ತದ್ವಿರುದ್ಧವಾಗಿ, ಪ್ರಪಂಚದಲ್ಲಿ ಹಲವು ಕಾಲಘಟ್ಟಗಳಲ್ಲಿ ವಿವಿಧ ಜಾತಿಗಳೆಡೆಯಲ್ಲಿ ಆಗಮಿಸಿದ ಎಲ್ಲ ಪ್ರವಾದಿಗಳನ್ನೂ ನಂಬಿ ಆದರಿಸುತ್ತೇವೆ. ಆ ಮಹಾತ್ಮರನ್ನು ಕೋಟಿಗಟ್ಟಲೆ ಜನರು ನಂಬಿ, ಅವರ ಹೆಸರಿನಲ್ಲಿ ಲೋಕದ ಯಾವುದಾದರೊಂದು ಕಡೆಯಲ್ಲಿರುವ ಒಂದು ಜನಾಂಗ ಅನೇಕ ವರ್ಷಗಳಿಂದ ಸ್ನೇಹಾದರಗಳನ್ನು ಅರ್ಪಿಸುತ್ತಾ ಬರುತ್ತಿರುವುದೇ ಆ ಮಹಾತ್ಮರ ಸತ್ಯತೆಗೆ ತಕ್ಕುದಾದ ಸಾಕ್ಷ್ಯವಾಗಿದೆ. ಅವರು ದೇವ ನಿಯುಕ್ತರಾದ ಸತ್ಯಪುರುಷರಲ್ಲವಾಗಿದ್ದರೆ ಅವರ ಹೆಸರಿನಲ್ಲಿ ಕೋಟಿಗಟ್ಟಲೆ ಜನರ ಹೃದಯಗಳಲ್ಲಿ ಸ್ಥಾಯಿಯಾದ ಭಕ್ತಿ ವಿಶ್ವಾಸಗಳು ನೆಲೆಗೊಂಡಿರಲು ಸಾಧ್ಯವಿಲ್ಲ. ಪರಮಾತ್ಮನು ನಿಯೋಜಿಸಿ ಕಳುಹಿಸುವ ಮಹಾತ್ಮರಿಗೆ ಲಭಿಸುವ ರೀತಿಯ ಗೌರವಾದರಗಳು ಅನ್ಯರಿಗೆ ಲಭಿಸುವರೆ ಆ ಭಕ್ತವತ್ಸಲನು ಎಂದಿಗೂ ಎಡೆಗೊಡಲಾರನು. ಒಬ್ಬ ಮಿಥ್ಯವಾದಿ ಸತ್ಯ ಪ್ರವಾದಿಯಂತೆ ಅಭಿನಯಿಸಿ ಅವರ ಸ್ಥಾನವನ್ನು ಸ್ವಾಧೀನಪಡಿಸಲು ಬಯಸುವನಾದರೆ ಅವನು ಹೆಚ್ಚು ವಿಳಂಬವಾಗದೆ ನಾಶಹೊಂದುವನು. ಇದೇ ಆಧಾರದಿಂದ ನಾವು ವೇದಗಳನ್ನು ದೈವಿಕವೆಂದು ನಂಬಿ ವೈದಿಕ ಋಷಿಗಳನ್ನು ಮಹಾತ್ಮರೆಂದು ಗೌರವಿಸುತ್ತೇವೆ. ವೇದ ಸಾವಿರಗಟ್ಟಲೆ ವರ್ಷ ಹಳೆಯದಾದುದರಿಂದ ಹಲವು ಕಾಲಘಟ್ಟಗಳಲ್ಲಿ ಭಾಷ್ಯಕಾರರಲ್ಲಿ ಕೆಲವರು ಅದರಲ್ಲಿ ಅನೇಕ ಮಾರ್ಪಾಟುಗಳನ್ನೂ ಕೂಡಿಕೆಗಳನ್ನೂ ಮಾಡಿರಬಹುದು. ಆದರೂ ಆರ್ಯಾವರ್ತದ ಕೋಟ್ಯಾನುಕೋಟಿ ಜನರು ಸಹಸ್ರಾರು ವರ್ಷಗಳಿಂದ ವೇದವನ್ನು ದೇವಪ್ರೋಕ್ತವೆಂದು ನಂಬುತ್ತಾರೆಂಬುದೇ ಅದರ ಸತ್ಯತೆಗೆ ನಮಗಿರುವ ತಕ್ಕುದಾದ ಸಾಕ್ಷ್ಯವಾಗಿದೆ. ವೇದಕ್ಕೆ ಸಿದ್ಧಿಸಿರುವ ರೀತಿಯ ಗೌರವಾದರಗಳು ಒಬ್ಬ ವ್ಯಾಜವಾದಿಯ ವಚನಕ್ಕೆ ಲಭಿಸುವುದು ಎಂದಿಗೂ ಸಂಭವನೀಯವಲ್ಲ. ಕೇವಲ ಪರಮಾತ್ಮನ ಭಯದಿಂದ ವೇದವನ್ನು ನಾವು ದೇವಪ್ರೋಕ್ತವೆಂದು ಅಂಗೀಕರಿಸಿ, ಅದರ ಉಪದೇಶ ನಿರ್ದೇಶನಗಳಲ್ಲಿ ಕಂಡು ಬರುವ ಲೋಪದೋಷಗಳು ಅದರ ಭಾಷ್ಯಕಾರರಿಂದುಂಟಾದುವುಗಳೆಂದು ಭಾವಿಸುವಾಗ, ಪವಿತ್ರ ಖುರ್‌ಆನಿಗೆದುರಾಗಿ ಮರ್ಯಾದೆಗೆಟ್ಟ ರೀತಿಯ ದೋಷಾರೋಪಣೆಗಳನ್ನು ಮಾಡುವುದು ನ್ಯಾಯವೇ? ಹಾಗೆಯೇ ರಾಜ್ಯದಲ್ಲೆಲ್ಲ ವಿರೋಧ ಹಾಗೂ ವಿದ್ವೇಷದ ಬೀಜ ಬಿತ್ತುವುದೇತಕ್ಕೆ? ಇದರಲ್ಲಿ ಏನಾದರೂ ಒಳಿತಂಟಾಗುವುದೆಂದು ಆಶಿಸುತ್ತೀರಾ?

ಪ್ರಿಯ ಜನರೇ, ಮೈತ್ರಿಯಷ್ಟು ಅತ್ಯಾವಶ್ಯಕವಾದುದು ಬೇರೊಂದಿಲ್ಲ. ಬನ್ನಿರಿ, ನಾವು ಎರಡು ಪಕ್ಷದವರೂ ಉಭಯ ಸಮ್ಮತದಿಂದ ಒಂದಾಗೋಣ; ಒಂದು ಜನಾಂಗವಾಗೋಣ. ಪರಸ್ಪರ ಪ್ರವಾದಿಗಳನ್ನೂ ಧರ್ಮ ಗ್ರಂಥಗಳನ್ನೂ ಆಕ್ಷೇಪಿಸುವ ಕಾರಣದಿಂದ ಎಷ್ಟು ಛಿದ್ರತೆಯೂ ಗೊಂದಲವೂ ಉಂಟಾಗುವುದೆಂದೂ ರಾಜ್ಯಕ್ಕೆ ಎಷ್ಟು ನಷ್ಟಗಳನ್ನು ಹೊರಬೇಕಾಗುವುದೆಂದೂ ನೀವು ಕಾಣುತ್ತಿದ್ದೀರಷ್ಟೇ. ಬನ್ನಿರಿ, ಇನ್ನು ಅನ್ಯೋನ್ಯ ಮತ ಸಹಿಷ್ಣುತೆಯ ಅನುಗ್ರಹ ಫಲಗಳನ್ನು ಒಮ್ಮೆ ಪರೀಕ್ಷಿಸಿರಿ. ಇದು ಪರಸ್ಪರ ಸಂಧಾನವನ್ನುಂಟುಮಾಡಲೂ ಮೈತ್ರಿಭಾವವನ್ನು ಹೆಚ್ಚಿಸಲೂ ಉತ್ತಮ ಮಾರ್ಗವಾಗಿದೆ. ಇದರಲ್ಲದೆ ಬೇರೆ ಯಾವುದಾದರೂ ರೀತಿಯಲ್ಲಿ ಮೈತ್ರಿ ಸ್ಥಾಪಿಸಲು ಯತ್ನಿಸುವುದಾದರೆ, ಅದು ದುರ್ಗಂಧವೂ ಕೀವೂ ತುಂಬಿರುವ ಕುರುವನ್ನು ಅದರ ಬಾಹ್ಯವಾದ ಶುದ್ಧತೆಯನ್ನೂ ಹೊಳಪನ್ನೂ ಕಂಡು ಸಂತೋಷಪಟ್ಟು ಹಾಗೆಯೇ ಬಿಟ್ಟು ಬಿಡುವುದಕ್ಕೆ ಸಮಾನವಾಗಿದೆ.

ಎಲೈ ಮುಸ್ಲಿಮರೇ, ನಿಮಗೂ ಹಿಂದುಗಳಿಗೂ ನಡುವೆ ಯಥಾರ್ಥ ಹಾಗೂ ಸುಸ್ಥಿರವಾದ ಸೌಹಾರ್ದ ಭಾವನೆಯನ್ನುಂಟು ಮಾಡುವುದು ಹೇಗೆ? ಉಭಯ ಪಕ್ಷದವರು ಸಹ ಪರಸ್ಪರ ಕಾಪಟ್ಯದಿಂದ ಕೂಡಿದ ಒಂದು ತಾತ್ಕಾಲಿಕ ಮೈತ್ರಿಯನ್ನುಂಟುಮಾಡಲೂಬಹುದು. ಆದರೆ ಯಥಾರ್ಥ ಮೈತ್ರಿಯೆಂದು ಹೇಳಲಾಗುವ ಭಾವೈಕ್ಯ ಉಂಟಾಗುವುದು ನೀವು ವೇದವನ್ನೂ ಋಷಿಗಳನ್ನೂ ಹೃತ್ಪೂರ್ವಕವಾಗಿ ಗೌರವಿಸುವುದರಿಂದಲೂ ಹಾಗೆಯೇ ಹಿಂದುಗಳು ಅವರ ಸಂಕುಚಿತ ಮನೋಭಾವಗಳನ್ನು ಬಿಟ್ಟು ನಮ್ಮ ಪ್ರವಾದಿಶ್ರೇಷ್ಠರಾದ ಮುಹಮ್ಮದ್ ಮುಸ್ತಫಾರವರ ಸತ್ಯತೆಯನ್ನು ಒಪ್ಪುವುದರಿಂದಲೂ ಆಗಿದೆ. ನಿಮ್ಮ ಹಾಗೂ ಹಿಂದುಗಳ ಎಡೆಯಲ್ಲಿ ಯಥಾರ್ಥವಾದ ಐಕ್ಯ ಹಾಗೂ ಸೌಹಾರ್ದ ಉಂಟಾಗಲು ಇದು ಏಕಮಾತ್ರ ಮಾರ್ಗವೆಂದೂ ಹೃದಯರೋಗಗಳನ್ನು ಗುಣಪಡಿಸುವ ಒಂದು ರಸಾಯನವೆಂದೂ ತಿಳಿಯಿರಿ. ಬೇರ್ಪಟ್ಟಿರುವ ಈ ಎರಡು ಸಮುದಾಯಗಳೆಡೆ ಸಂಧಾನವೇರ್ಪಡುವ ಸಂದರ್ಭವೊಂದಗಿದರೆ ಯಾವುದಕ್ಕಾಗಿ ಪರಮಾತ್ಮನು ನಮ್ಮ ಹೃದಯಗಳನ್ನು ತೆರೆದು ಕೊಟ್ಟಿರುವನೋ ಅದಕ್ಕಾಗಿ ಅವನು ಇವರ ಹೃದಯಗಳನ್ನು ಸಹ ತೆರೆದುಕೊಡುವನು.

* * *

ಐಕ್ಯ ಅಥವಾ ಮೈತ್ರಿ ಅತ್ಯಮೂಲ್ಯವಾದುದಾಗಿದೆ. ಬೇರಾವ ರೀತಿಯಿಂದಲೂ ನಿವಾರಿಸಲು ಸಾಧ್ಯವಿಲ್ಲದ ವಿಪತ್ತುಗಳನ್ನೂ ಸಂಕಷ್ಟಗಳನ್ನೂ ಐಕ್ಯದಿಂದ ದೂರೀಕರಿಸಲು ಸಾಧ್ಯವೆಂಬುದು ಸ್ಪಷ್ಟ. ಆದುದರಿಂದ ಐಕ್ಯದ ಅನುಗ್ರಹೀತ ಫಲಗಳಿಂದ ನಮ್ಮನ್ನು ನಾವೇ ದೂರ ಸರಿಸುವುದು ವಿವೇಕಯುತವಲ್ಲ. ಹಿಂದೂಗಳೂ ಮುಸ್ಲಿಮರೂ ಈ ರಾಷ್ಟ್ರದ ಅವಿಭಾಜ್ಯ ಘಟಕಗಳಾದ ಎರಡು ಸಮುದಾಯಗಳಾಗಿವೆ. ಇವುಗಳಲ್ಲಿ ಯಾವುದಾದರೂ ಒಂದು ಸಮುದಾಯವು ಯಾವಾಗಲಾದರೂ ಒಂದಾಗಿ ಇನ್ನೊಂದು ಸಮುದಾಯವನ್ನು (ಹಿಂದುಗಳು ಒಟ್ಟುಗೂಡಿ ಮುಸ್ಲಿಮರನ್ನೋ ಅಥವಾ ಮುಸ್ಲಿಮರೂ ಒಟ್ಟು ಸೇರಿ ಹಿಂದುಗಳನ್ನೋ) ಈ ರಾಷ್ಟ್ರದಿಂದ ಹೊರದಬ್ಬಲು ಆಲೋಚಿಸುವುದಾದರೆ ಅದು ಅಸಂಭವನೀಯ ಹಾಗೂ ಭ್ರಮೆಮಾತ್ರವಾಗಿದೆ. ಬದಲಾಗಿ, ಈ ಎರಡೂ ಸಮುದಾಯಗಳನ್ನು ಒಟ್ಟುಗೂಡಿಸುವ ಬಂಧವು ಭೇದಿಸಲಾಗದಷ್ಟು ಶಕ್ತಿಯುತವಾಗಿದೆ. ಇವರಲ್ಲಿ ಒಂದು ಸಮುದಾಯದವರಿಗೆ ಏನಾದರೊಂದು ವಿಪತ್ತು ಸಂಭವಿಸಿದರೆ ಮತ್ತೊಂದು ಸಮುದಾಯದವರಿಗೆ ಸಹ ಅದರ ಬಾಧೆ ತಟ್ಟದಿರಲಿಕ್ಕಿಲ್ಲ. ಒಂದು ಸಮುದಾಯವು ಅಹಂಭಾವದಿಂದ ಮತ್ತೊಂದು ಸಮುದಾಯವನ್ನು ನಿಂದಿಸುವುದಾದರೆ ಅಥವಾ ಅವಹೇಳನವನ್ನುಂಟು ಮಾಡುವುದಾದರೆ ಆ ಸಮುದಾಯವು ಸಹ ಅದೇ ರೀತಿಯ ನಿಂದನೆಗೂ ಅವಹೇಳನಕ್ಕೂ ಗುರಿಯಾಗುವುದು. ಒಂದು ಸಮುದಾಯವು ಇನ್ನೊಂದು ಸಮುದಾಯದೊಡನೆ ಅನುಕಂಪವನ್ನು ತೋರಿಸದಿದ್ದರೆ ಅವರಿಗೆ ಇವರ ಅನುಕಂಪ ಲಭಿಸಲಾರದು. ಒಂದು ಸಮುದಾಯದ ಒಬ್ಬ ವ್ಯಕ್ತಿ ಇನ್ನೊಂದು ಸಮುದಾಯಕ್ಕೆ ನಷ್ಟವನ್ನುಂಟುಮಾಡಲು ನೋಡುವನಾದರೆ, ಅವನು ತಾನು ಕುಳಿತಿರುವ ಮರದ ಕೊಂಬೆಯನ್ನು ತನ್ನ ಕೈಯಿಂದಲೇ ಕಡಿಯುವವನಂತಾಗುವನು.

ಮಿತ್ರರೇ, ದೇವಾನುಗ್ರಹದಿಂದ ನೀವೀಗ ವಿದ್ಯಾಸಂಪನ್ನರಾಗಿದ್ದೀರಿ. ಈ ಘಟ್ಟದಲ್ಲಿ ನೀವು ಎಲ್ಲ ವಿಧದ ಹಗೆ, ದ್ವೇಷಗಳನ್ನು ನಿಮ್ಮ ಹೃದಯಗಳಿಂದ ದೂರೀಕರಿಸಿ, ಪರಸ್ಪರ ಮೈತ್ರಿಯಿಂದಲೂ ಕ್ಷೇಮಾಕಾಂಕ್ಷೆಯಿಂದಲೂ ಮುನ್ನಡೆಯುವುದು ಅತ್ಯಾವಶ್ಯಕವಾಗಿದೆ. ನಿರ್ದಾಕ್ಷಿಣ್ಯತೆಯನ್ನು ಬಿಟ್ಟು ಅನುಕಂಪ ಭಾವವನ್ನು ಕೈಗೊಳ್ಳಬೇಕಾದ ಸಮಯವು ಸನ್ನಿಹಿತವಾಗಿದೆ. ಐಹಿಕ ಜೀವಿತ ಯಾತ್ರೆಯು ಕಠಿಣವಾದ ಬಿಸಿಲಿನಲ್ಲಿ ಮರುಭೂಮಿಯಲ್ಲಿ ಸಂಚರಿಸುವುದಕ್ಕೆ ತುಲ್ಯವಾಗಿದೆ. ಆದ್ದರಿಂದ ದುರ್ಗಮ ಪಥದ ಈ ಯಾತ್ರೆಯ ಬಿಸಿಲನ್ನು ತಣಿಸಲಿಕ್ಕೂ ಆಯಾಸದ ಉಪಶಮನಕ್ಕೂ ಮೈತ್ರಿಯೆಂಬ ಶೀತಲ ಜಲ ನಿಮಗೆ ಅತ್ಯಾವಶ್ಯಕವಾಗಿದೆ.

ನಿಮಗೆ ಎರಡು ಪಕ್ಷಗಳಿಗೂ ಸಮಾಧಾನವೂ ಶಾಂತಿಯೂ ಅತ್ಯಂತ ಆವಶ್ಯಕವಾಗಿರುವ ಕಾಲಘಟ್ಟದಲ್ಲೇ ನಾನು ನಿಮ್ಮನ್ನು ಮೈತ್ರಿಗಾಗಿ ಆಮಂತ್ರಿಸುತ್ತಿದ್ದೇನೆ. ಲೋಕದಲ್ಲಿ ಹಲವಿಧ ಆಪತ್ತುಗಳು ಸಂಭವಿಸುತ್ತಿವೆ. ಭೂಕಂಪಗಳೂ ಕ್ಷಾಮಗಳೂ ಉಂಟಾಗುತ್ತಿವೆ. ಪ್ಲೇಗು ನಮ್ಮನ್ನು ಇನ್ನೂ ಬಿಟ್ಟು ಹೋಗಿಲ್ಲ.

ಪರಮಾತ್ಮನು ನನಗೆ ತಿಳಿಸಿರುವನು: ಮನುಷ್ಯರು ಅವರ ದುಷ್ಕೃತ್ಯಗಳನ್ನು ತ್ಯಜಿಸಿ ತಮ್ಮ ಅಕೃತ್ಯಗಳ ಕುರಿತು ಪಶ್ಚಾತ್ತಾಪಪಟ್ಟು ಪರಮಾತ್ಮನೊಡನೆ ಕ್ಷಮೆಯಾಚಿಸದೆ ಇದ್ದರೆ ಲೋಕದಲ್ಲೆಲ್ಲ ಭಯಂಕರವಾದ ವಿಪತ್ತುಗಳೂ ನಾಶ ನಷ್ಟಗಳೂ ಸಂಭವಿಸುವುವು. ಒಂದು ಆಪತ್ತು ಮುಕ್ತಾಯವಾಗುವ ಮೊದಲೇ ಇನ್ನೊಂದು ಭಯಂಕರವಾದ ನಾಶವು ಸನ್ನಿಹಿತವಾಗುವುದು. ಈ ವಿಪತ್ತುಗಳಿಂದಾಗಿ ಮನುಷ್ಯರು ದಿಗ್ಭ್ರಾಂತರಾಗಿ ಇನ್ನೇನು ಸಂಭವಿಸಲಿದೆಯೆಂದು ಪ್ರಶ್ನಿಸಲಾರಂಭಿಸುವರು. ಅನೇಕರು ವಿವಿಧ ಆಪತ್ತುಗಳಿಗೆ ಗುರಿಯಾಗಿ ಭ್ರಾಂತರಾಗುವರು. ಆದುದರಿಂದ ಎಲೈ ನನ್ನ ದೇಶ ಬಾಂಧವರೇ, ಆ ದಿನಗಳು ಬರುವ ಮೊದಲೇ ನೀವು ಜಾಗರೂಕರಾಗಿರಿ. ಹಿಂದುಗಳೂ ಮುಸ್ಲಿಮರೂ ಪರಸ್ಪರ ಸಂಧಾನವನ್ನುಂಟು ಮಾಡಲಿ. ಐಕ್ಯ ಭಂಗವಾಗುವ ರೀತಿಯಲ್ಲಿ ಅಕ್ರಮವಾಗಿ ವರ್ತಿಸಿದ ಸಮುದಾಯವು ಆ ಅನ್ಯಾಯಗಳನ್ನು ತ್ಯಜಿಸಲಿ. ಇಲ್ಲವಾದರೆ ಅನ್ಯೋನ್ಯ ಶತ್ರುತ್ವದ ಎಲ್ಲ ಪಾಪವು ಆ ಅನ್ಯಾಯವಾಗಿ ವರ್ತಿಸಿದ ಸಮುದಾಯದ ಕೊರಳಿಗೆ ಉರುಳಾಗಿ ಪರಿಣಮಿಸುವುದು.

**"LOVE FOR ALL HATRED FOR NONE."**

**"ಎಲ್ಲರೊಡನೆಯೂ ಪ್ರೀತಿ, ಯಾರೊಡನೆಯೂ ದ್ವೇಷವಿಲ್ಲ."**

# ದೇವಾನ್ವೇಷಣೆಯ ಆವಶ್ಯಕತೆ

ಮಿರ್ಝಾ ಬಶೀರ್ ಅಹ್ಮದ್, M.A.

ದೇವರ ಕುರಿತು ನಾವೇಕೆ ಅನ್ವೇಷಣೆ ಮಾಡಬೇಕು? ದೇವರು ಇರಲಿ, ಇಲ್ಲದಿರಲಿ, ನಾವೇಕೆ ಸುಮ್ಮನೆ ಸಮಯವನ್ನು ವ್ಯರ್ಥ ಮಾಡಬೇಕು? ತನ್ನ ಅಮೂಲ್ಯವಾದ ಸಮಯವನ್ನೂ ಬುದ್ಧಿಯನ್ನೂ ದೇವನಿದ್ದಾನೆಯೇ ಇಲ್ಲವೇ ಎಂಬ ಅನ್ವೇಷಣೆಯಲ್ಲಿ ಅನಾವಶ್ಯಕವಾಗಿ ವ್ಯಯಿಸುವುದರ ಅಗತ್ಯವೇನು? ಎಂಬ ವಿಚಾರ ದೇವ ವಿಶ್ವಾಸಿಯಲ್ಲದ ಒಬ್ಬನ ಹೃದಯದಲ್ಲಿ ಹುಟ್ಟುವುದು ಸ್ವಾಭಾವಿಕ. ಆದ್ದರಿಂದ ಈ ಪ್ರಶ್ನೆ ಮೊದಲು ಉತ್ತರಿಸಲ್ಪಡಬೇಕು.

ಯಾವುದಾದರೊಂದು ವಸ್ತು ಅವಶ್ಯವಿದೆಯೇ ಇಲ್ಲವೇ ಎಂಬುದರ ಕುರಿತುಳ್ಳ ತೀರ್ಮಾನ ಉಂಟಾಗುವುದು ಸಾಮಾನ್ಯ ಎರಡೇ ಎರಡು ರೀತಿಯಲ್ಲಾಗಿದೆ. ಮೊದಲನೆಯದಾಗಿ, ಒಂದು ವಸ್ತುವನ್ನು ಸ್ವೀಕರಿಸುವುದರಿಂದ ಅಥವಾ ಒಂದು ಕೆಲಸ ಮಾಡುವುದರಿಂದ ಏನಾದರೂ ಪ್ರಯೋಜನ ನಮಗಿದೆಯೇ ಎಂದು ಮೊದಲು ನೋಡಲಾಗುತ್ತದೆ. ಪ್ರಯೋಜನವಾಗುವುದೆಂದು ನಿರೀಕ್ಷೆ ಇದ್ದರೆ ಅದನ್ನು ಸ್ವೀಕರಿಸಲಾಗುತ್ತದೆ. ಇಲ್ಲವಾದರೆ ಅದು ತಿರಸ್ಕರಿಸಲ್ಪಡುತ್ತದೆ.. ಎರಡನೆಯದಾಗಿ, ಯಾವುದಾದರೂ ವಸ್ತು ಅಥವಾ ಕೆಲಸ ತ್ಯಜಿಸಲ್ಪಡುವುದರಿಂದ ನಷ್ಟ ಉಂಟಾಗಬಹುದೇ ಎಂದು ನೋಡಲಾಗುತ್ತದೆ. ನಷ್ಟವೇನೂ ಉಂಟಾಗದೆಂದು ಖಾತ್ರಿಯಿದ್ದರೆ ಅದನ್ನು ಸ್ವೀಕರಿಸಬೇಕಾದ ಅಗತ್ಯವಿಲ್ಲವೆಂದು ತಿಳಿಯಲ್ಪಡುತ್ತದೆ. ನಷ್ಟ ಉಂಟಾಗುವ ಸಂದೇಹವಿದ್ದರೆ ಅದು ಸ್ವೀಕರಿಸಲ್ಪಡುತ್ತದೆ. ಒಂದು ಸಂಗತಿಯನ್ನು ಸ್ವೀಕರಿಸುವುದರಿಂದ ತುಂಬಾ ಪ್ರಯೋಜನ, ತಿರಸ್ಕರಿಸುವುದರಿಂದ ದೊಡ್ಡ ನಷ್ಟ ಉಂಟಾಗುವುದೆಂದು ಕಂಡರೆ ಯಾವನೇ ಬುದ್ಧಿವಂತನೂ ಆಗ ಹೊರಡಿಸುವ ವಿಧಿ, ಅದನ್ನು ಸ್ವೀಕರಿಸುವುದು ಅತ್ಯಾವಶ್ಯಕವೆಂದಾಗಿರಬಹುದು. ಈ ತತ್ವದ ಆಧಾರದಲ್ಲಿ ನಮ್ಮ ಪ್ರಧಾನ ವಿಷಯದ ಕುರಿತು ಸಹ ತೀರ್ಮಾನಿಸಬಹುದಾಗಿದೆ. ಅಂದರೆ ಯಾವುದಾದರೂ ವಿಚಾರವನ್ನು ಸ್ವೀಕರಿಸುವುದರಿಂದ ನಮಗೆ ತುಂಬಾ ಪ್ರಯೋಜನವಾಗುವುದೆಂಬ ಪ್ರತೀಕ್ಷೆ ಇದ್ದರೆ ಅದನ್ನು ಸ್ವೀಕರಿಸುವುದು ನಮಗೆ ಆವಶ್ಯಕವಾಗಿದೆ. ಹಾಗೆಯೇ ಅದನ್ನು ತಿರಸ್ಕರಿಸಿದರೆ ಬಹಳ ದೊಡ್ಡ ನಷ್ಟ ಉಂಟಾಗುವುದೆಂದು ಸಂದೇಹವಿದ್ದರೆ ಅದನ್ನು ತಿರಸ್ಕರಿಸದಿರುವುದು ಅಗತ್ಯವಾಗಿದೆ.

ಈ ತತ್ವದ ಆಧಾರದಲ್ಲಿ ನಮ್ಮ ಚರ್ಚಾ ವಿಷಯದ ಪ್ರಶ್ನೆಯನ್ನು ವೀಕ್ಷಿಸೋಣ. ದೇವಾನ್ವೇಷಣೆಯ ಆವಶ್ಯಕತೆ ನಮಗೆ ಇದೆಯೇ 'ಇಲ್ಲವೇ? -ಇದು ಪ್ರಧಾನ ಪ್ರಶ್ನೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ನಮಗೊಬ್ಬ ದೇವನಿದ್ದಾನೆಂದು ಸಾಬೀತಾದರೆ, ಅವನನ್ನು ನಂಬುವುದರಿಂದ ನಮಗೇನಾದರೂ ಪ್ರಯೋಜನವಿದೆಯೇ, ಇಲ್ಲವೇ? ಅಥವಾ ಅವನನ್ನು ತಿರಸ್ಕರಿಸಿದರೆ ನಮಗೇನಾದರೂ ನಷ್ಟ ಸಂಭವಿಸಬಹುದೇ, ಇಲ್ಲವೇ? ಈ ವಿಚಾರದಲ್ಲಿ ಒಂದು ತೀರ್ಮಾನಕ್ಕೆ ಬರಬೇಕಾದರೆ ದೇವರ ಕುರಿತು ನಮ್ಮ ಮುಂದೆ ಬರುವ ಪ್ರಶ್ನೆಗಳ ವಿಶಿಷ್ಟ ರೀತಿಯ ಬಗ್ಗೆ ಚಿಂತನೆ ಮಾಡಬೇಕಾಗಿದೆ. ದೇವರನ್ನು ನಂಬುವುದೂ ನಂಬದಿರುವುದೂ ಸಮಾನವೆಂದೂ ಜೀವಿತದಲ್ಲಿ ಅದರಿಂದ ಯಾವುದೇ ಬದಲಾವಣೆ ಉಂಟಾಗುವುದಿಲ್ಲವೆಂದೂ ಬದಲಿಗೆ, ಇದೊಂದು ಕೇವಲ ಜ್ಞಾನಪರವಾದ ಪ್ರಶ್ನೆಯಾಗಿದೆ ಎಂಬ ರೀತಿಯಲ್ಲಿ ನಮ್ಮ ಮುಂದೆ ದೇವಾಸ್ತಿತ್ವವನ್ನು ಪ್ರಸ್ತುತಪಡಿಸುವುದಾದರೆ, ಜ್ಞಾನಪರವಾದ ವಿಚಾರಗಳಲ್ಲಿ ಅಭಿರುಚಿ ಇರುವವರೂ ಜ್ಞಾನಾರ್ಜನೆಗೋಸ್ಕರ ಮಾತ್ರ ಯಾವುದಾದರೂ ಸಮಸ್ಯೆಯ ಬಗ್ಗೆ ಚಿಂತಿಸುವವರೂ ಹೊರತು, ಇತರ ಎಲ್ಲರಿಗೂ ದೇವಾನ್ವೇಷಣೆಯನ್ನು ನಿರಾಕರಿಸಲಿಕ್ಕೂ ತಮ್ಮ ಗಮನವನ್ನೆಲ್ಲ ಅವರ ಜೀವಿತದ ಲಾಭ-ನಷ್ಟಗಳಲ್ಲಿ ನೇರವಾಗಿ ಪ್ರಭಾವ ಬೀರುವ ವಿಚಾರಗಳಲ್ಲಿ ಮಾತ್ರ ಸೀಮಿತಗೊಳಿಸಲಿಕ್ಕೂ ಅವಕಾಶವಿರುತ್ತದೆ. ಉದಾಹರಣೆಗೆ, ತಾನೊಂದು ಹೊಸ ನಕ್ಷತ್ರವನ್ನು ಕಂಡು ಹಿಡಿದಿದ್ದೇನೆ; ಅದು ಭೂಮಿಯಿಂದ ಇಷ್ಟು ಕೋಟಿ ಮೈಲಿನಾಚೆ ಇದೆ; ಅದಕ್ಕೆ ನಮ್ಮ ಸೌರವ್ಯೂಹದೊಂದಿಗೆ ವಿಶಿಷ್ಟವಾದ ಸಂಬಧವಿಲ್ಲವೇನೂ ಇಲ್ಲ; ನಮ್ಮ ಭೂಮಿಯ ಮೇಲೆ ಅದರ ಪ್ರಭಾವವೇನೂ ಇರುವುದಿಲ್ಲ ಎಂದು ಯಾರಾದರೂ ಹೇಳಿದರೆ, ಖಗೋಳ ಶಾಸ್ತ್ರದಲ್ಲಿ ಅಭಿರುಚಿ ಇರುವವರು ಹೊರತು ಬೇರೆ ಯಾರೂ ಆ ನಕ್ಷತ್ರದ ಸ್ಥಿತಿಗತಿಗಳ ಬಗ್ಗೆ ಗಮನಿಸಲಿಕ್ಕಿಲ್ಲ. ಆದರೆ ಶರೀರಕ್ಕೆ ಶಕ್ತಿನೀಡಿ ಆಯುಷ್ಯವನ್ನು ವೃದ್ಧಿಗೊಳಿಸುವ ಒಂದು ವಸ್ತುವನ್ನು ತಾನು ಕಂಡುಹಿಡಿದಿದ್ದೇನೆ; ಅದನ್ನು ಸೇವಿಸಿದರೆ ವೃದ್ಧಾಪ್ಯದ ಲಕ್ಷಣಗಳು ಬಹಳ ತಡವಾಗಿ ಕಾಣಿಸುವುವು; ಅದು ಯೌವನವನ್ನು ನೀಡುವುದು; ಅದರ ಸೇವನೆಯಿಂದ ನೂರು, ನೂರೈವತ್ತು, ಇನ್ನೂರು ವರ್ಷಗಳ ಕಾಲ ಸುಖವಾಗಿ ಬಾಳಬಹುದು ಎಂದು ಯಾರಾದರೂ ವಾದಿಸಿದರೆಂದು ಊಹಿಸಿರಿ. ಆ ವ್ಯಕ್ತಿ ಠಕ್ಕನೂ ಮೋಸಗಾರನೂ ಅಲ್ಲವೆಂದಾದರೆ ಜನರೆಲ್ಲರೂ ಉತ್ಸಾಹದಿಂದ ಆತನೆಡೆಗೆ ಧಾವಿಸಲಾರಂಭಿಸುವರು. ಕಾರಣವೇನೆಂದರೆ, ಅದು ಸರಿಯೆಂದು ಸಾಬೀತಾದರೆ ಅದು ಪ್ರತಿಯೊಬ್ಬ ಮನುಷ್ಯನ ಬದುಕಿನಲ್ಲಿ ಬಹಳವಾಗಿ ಪ್ರಭಾವ ಬೀರುವ ಸಂಶೋಧನೆಯಾಗುತ್ತದೆ. ನಾವು ದೇವರ ಬಗ್ಗೆ ಆಲೋಚಿಸುವಾಗ ಈ ಪ್ರಶ್ನೆ ಮೂರು ವಿವಿಧ ದಿಶೆಗಳಿಂದ ನಮ್ಮ ಮುಂದೆ ಬರುತ್ತದೆ. ಒಂದನೆಯದಾಗಿ ಮನುಷ್ಯ ಪ್ರಕೃತಿ, ಎರಡನೆಯದಾಗಿ ಬುದ್ಧಿ, ಮೂರನೆಯದಾಗಿ ಧರ್ಮ. ಈ ಮೂರು ರೀತಿಯ ಗವೇಷಣೆ ನಡೆಸದೆ ನಿರ್ವಾಹವಿಲ್ಲ ಎಂಬ ರೀತಿಯಲ್ಲಿ ಆ ಪ್ರಶ್ನೆ ನಮ್ಮ ಮುಂದೆ ಬರುತ್ತದೆ.

ಮೊದಲಾಗಿ ನಾನು ಮನುಷ್ಯ ಪ್ರಕೃತಿಯ ಬಗ್ಗೆ ಪ್ರತಿಪಾದಿಸುತ್ತೇನೆ. ಪ್ರತಿಯೊಬ್ಬ ಬುದ್ಧಿಶಾಲಿ – ಕೆಟ್ಟ ಶಿಕ್ಷಣವು ಅವನ ಸಹಜಗುಣದ ಮೇಲೆ ಅಂಧಕಾರ ಮತ್ತು ಅಜ್ಞಾನದ ಪರದೆಯನ್ನು ಹಾಕಿರದಿದ್ದರೆ – ತನ್ನ

ಅಂತರಂಗದಲ್ಲಿ, ತನ್ನನ್ನು ಸೃಷ್ಟಿಸಿದ ಮತ್ತು ಈ ಪ್ರಪಂಚವನ್ನು ನಿಯಂತ್ರಿಸುವ ಒಬ್ಬ ದೇವನು ಇರಬೇಕಲ್ಲವೇ ಎಂಬ ಪ್ರಶ್ನೆ ಮೆಲ್ಲ ಮೆಲ್ಲನೆ ಮೂಡುತ್ತಲೇ ಇರುವುದನ್ನು ಅನುಭವಿಸುವನು. ಅದರೊಂದಿಗೆಯೇ, ಯಾರಾದರೂ ನಮ್ಮನ್ನು ಸೃಷ್ಟಿಸಿದರೆ ಹಾಗೂ ನಾವು ನಮ್ಮಷ್ಟಕ್ಕೆ ಈ ಲೋಕಕ್ಕೆ ಬಂದಿರದಿದ್ದರೆ, ಖಂಡಿತವಾಗಿಯೂ ನಮ್ಮ ಸೃಷ್ಟಿಕರ್ತನ ಈ ಕೃತ್ಯದಲ್ಲಿ ಏನಾದರೂ ವಿಶಿಷ್ಟವಾದ ಉದ್ದೇಶವಿರಬೇಕಲ್ಲವೇ? ಅವನು ನಮ್ಮ ಬದುಕಿಗೆ ಏನಾದರೂ ಉದ್ದೇಶವನ್ನು ನಿಶ್ಚಯಿಸಿರಬೇಕಲ್ಲವೇ? ಮುಂತಾದ ಪ್ರಶ್ನೆಗಳು ನಮ್ಮ ಅಂತರಂಗದಲ್ಲಿ ಸ್ವಾಭಾವಿಕವಾಗಿ ಮೂಡುತ್ತವೆ. ಪ್ರತಿಯೊಬ್ಬ ಮನುಷ್ಯನ ಪ್ರಕೃತಿ ಇಂತಹ ಪ್ರಶ್ನೆಗಳಿಗೆ ಜನ್ಮ ನೀಡುತ್ತಲೇ ಇರುತ್ತದೆ. ಇಲ್ಲಿ ಪ್ರಕೃತಿಯೇ ಇದಕ್ಕುತ್ತರ ನೀಡುತ್ತದೆಯೇ, ಇಲ್ಲವೇ ಎಂಬುದರ ಬಗ್ಗೆ ನಾನು ಸದ್ಯ ಚರ್ಚೆ ಮಾಡುವುದಿಲ್ಲ. ಅದು ಮತ್ತೆ ಬರುವುದು. ಆದರೆ, ಹೇಗಿದ್ದರೂ ಮನುಷ್ಯ ಪ್ರಕೃತಿಯು ಇಂತಹ ಪ್ರಶ್ನೆಗಳನ್ನು ನಮ್ಮ ಅಂತರಂಗದಲ್ಲಿ ಹುಟ್ಟು ಹಾಕುತ್ತದೆಂಬುದು ಖಂಡಿತ. ನಮಗೆ ಸಂಬಂಧಿಸಿದುದಲ್ಲವೆಂದು ಹೇಳಿ ದೇವರನ್ನು ಅವಗಣಿಸಲಾಗದ ತರದಲ್ಲಿ ಆ ಪ್ರಶ್ನೆ ಉದ್ಭವವಾಗುತ್ತದೆ. ಅನ್ವೇಷಣೆಯ ಬಳಿಕ, ಮನುಷ್ಯ ಪ್ರಕೃತಿಯ ಈ ಪ್ರಶ್ನೆ ಆಧಾರ ರಹಿತವೆಂದೂ ಒಬ್ಬ ದೇವನಿಲ್ಲವೆಂದೂ ಬದಲು, ಈ ಪ್ರಪಂಚ ಸ್ವಯಂಭೂ. ಅದು ತನ್ನಷ್ಟಕ್ಕೆ ಚಲಿಸುತ್ತಿದೆ ಎಂದೆಲ್ಲ ಹೇಳಲು ನಮಗೆ ಸಾಧ್ಯವಿದೆ. ಆದರೆ ನಮ್ಮ ಮನಸ್ಸಿನಲ್ಲಿ ಈ ಪ್ರಶ್ನೆ ಉದ್ಭವಿಸಿದ ನಂತರ ದೇವರ ಬಗ್ಗೆ ಅನ್ವೇಷಣೆ ಮಾಡದೆ ಅದನ್ನು ತೀರಾ ನಿರ್ಲಕ್ಷಿಸುವುದು ನ್ಯಾಯವೇ ಎಂದು ಯೋಚಿಸಿರಿ.

ಮನುಷ್ಯ ಬುದ್ಧಿಯ ಸ್ಥಿತಿ ಸಹ ಇದೇ ಆಗಿದೆ. ಅನ್ವೇಷಣೆ ಮಾಡಿ ಫಲವೇನೂ ಕಾಣದಿದ್ದರೆ ದೇವರಿಲ್ಲವೆಂದು ಬುದ್ಧಿಯಿಂದ ತೀರ್ಮಾನಿಸಬಹುದು. ಆದರೆ, ದೇವರಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಮನುಷ್ಯ ಪ್ರಕೃತಿಗಿಂತ ಮನುಷ್ಯ ಬುದ್ಧಿಯು ಬಹಳ ಶಕ್ತಿಯುತವಾಗಿಯೂ ಸ್ಪಷ್ಟವಾಗಿಯೂ ನಮ್ಮ ಮುಂದಿಡುತ್ತದೆ. ಅದು ಪದೇ ಪದೇ ನಮ್ಮನ್ನು ಜಾಗೃತಗೊಳಿಸಿ, ನೋಡು, ಯೋಚಿಸು ಎಂದು ಹೇಳುತ್ತದೆ. ನಿಮಗೊಬ್ಬ ದೇವನಿದ್ದಾನೆ, ಅವನು ವಿಶಿಷ್ಟವಾದ ಉದ್ದೇಶದಿಂದ ನಿಮ್ಮನ್ನು ಈ ಲೋಕಕ್ಕೆ ಕಳುಹಿಸಿದ್ದಾನೆ. ನೀವು ಆ ದೇವನನ್ನು ಮತ್ತು ಜೀವಿತೋದ್ದೇಶವನ್ನು ನಿರ್ಲಕ್ಷಿಸಿ, ಆ ದುಸ್ಥಿತಿಯಲ್ಲಿ ಮೃತ್ಯುವನ್ನಪ್ಪುವ ಅವಸ್ಥೆ ಉಂಟಾಗಲು ಎಡೆಯಾಗಬಾರದು. ಎದ್ದೇಳಿರಿ! ದೇವನಿದ್ದರೆ ಅವನನ್ನು ಹುಡುಕಿರಿ. ಈ ಲೋಕಕ್ಕೆ ನಿಮ್ಮ ಆಗಮನ ತಿನ್ನಲಿಕ್ಕೂ ಕುಡಿಯಲಿಕ್ಕೂ ದೇಹೇಚ್ಛೆಗಳನ್ನು ಪೂರೈಸುವ ಯೋಚನೆಯಲ್ಲಿ ಮಗ್ನರಾಗಲಿಕ್ಕೂ ಮರಣದ ಕಾಲ ಬಂದಾಗ ಮೃತ್ಯುವನ್ನಪ್ಪಲೂ ಸಂತಾನಗಳನ್ನು ಲೋಕದಲ್ಲಿ ಅಗಲಿಹೋಗಲಿಕ್ಕೂ ಅವರು ಇಂತಹ ಲೌಕಿಕ ನಾಟಕವನ್ನು ಪುನರಾವರ್ತಿಸಲಿಕ್ಕೂ ಮಾತ್ರವಿರುವುದೇ ಎಂಬುದನ್ನು ಚಿಂತನೆ ಮಾಡಿರಿ, ಆಲೋಚನೆ ಮಾಡಿರಿ. ನೀವು ತನ್ನಿಂತಾನೇ ಹುಟ್ಟಿ ಬಂದವರೇ ಎಂದು ನೋಡಿರಿ. ನಿಮ್ಮ ಶರೀರದ ರಚನೆ ಮತ್ತು ವಿವೇಕಪೂರ್ಣವಾದ ವ್ಯವಸ್ಥೆಯ ಸೃಷ್ಟಿಕರ್ತ ನೀವೇನು? ಈ ಪ್ರಪಂಚದಲ್ಲಿ ಎಲ್ಲವೂ ಬಹಳ ಕ್ರಮಬದ್ಧವಾಗಿರುವುದಾಗಿ ನೀವು ಕಾಣುತ್ತೀರಿ. ಇದು ಯಾದೃಚ್ಛಿಕವಾಗಿ ಉಂಟಾದುದೇ? ಹಾಗಲ್ಲವಾದರೆ, ಬದಲು, ಇವೆಲ್ಲಾ ಯಾವುದಾದರೂ ಉತ್ಕೃಷ್ಟವೂ ಶಕ್ತಿಯುತವೂ ಆದ ಅಸ್ತಿತ್ವದ ಅದ್ಭುತ ಕೈವಾಡವೆಂದಾದರೆ, ಆ ಅಸ್ತಿತ್ವ ಇವನ್ನೆಲ್ಲ ಒಂದು ಆಟಿಕೆಯಂತೆ ಸೃಷ್ಟಿಸಿದೆಯೇ? ಆನಂದವನ್ನು ಆಸ್ವಾದಿಸಿದ ಅವನ ಕಣ್ಣುಗಳು ತನ್ನ ಶಕ್ತಿ ಪ್ರಭಾವದ ದೃಶ್ಯಗಳನ್ನು ಕಂಡು ಸಂತೋಷಪಟ್ಟು ತೃಪ್ತಿ ಹೊಂದಿ, ಅನಂತರ ವಿಶಾಲವಾದ ಈ ಜಗತ್ತನ್ನು ತನ್ನ ಕೈಯಿಂದ ಒಂದೇ ಪೆಟ್ಟಿಗೆ ನಿರ್ನಾಮ ಮಾಡಿ ಪುನಃ ಹೊಸ ಒಂದು ಆಟಿಕೆಯನ್ನು ತಯಾರಿಸಲು ತೊಡಗುವುದು, ಹಾಗೆ ಅದು ಮುಂದುವರಿಯುತ್ತಲೇ ಇರುವುದರ ಹೊರತು ಬೇರೆ ಯಾವುದೇ ಉದ್ದೇಶ ಇದಕ್ಕಿಲ್ಲವೇ? ಮನುಷ್ಯನ ಜೀವಿತಕ್ಕೆ ಏನಾದರೂ ಉದ್ದೇಶವಿಲ್ಲವೇ? ತನ್ನ ಇಹಲೋಕ ಕರ್ಮಗಳ ಕುರಿತು ಎಂದಾದರೂ ಯಾರ ಮುಂದೆಯಾದರೂ ಉತ್ತರ ಹೇಳಲಿಕ್ಕಿಲ್ಲವೇ? ಮುಂತಾದ ಪ್ರಶ್ನೆಗಳು ವಿಚಾರ ಹೀನವೇ? ಇವು ಸ್ವಸ್ಥ ಮನಸ್ಸಿನ ಪ್ರತಿಯೊಬ್ಬ ಮನುಷ್ಯನ ಬುದ್ಧಿ ಪದೇ ಪದೇ ಅವನ ಮುಂದಿಡುವ ಪ್ರಶ್ನೆಗಳಾಗಿವೆ. ಯೋಚಿಸಿರಿ, ಇವು ಅಸಂಬಂಧ ಹಾಗೂ ಅನಾವಶ್ಯಕ ಪ್ರಶ್ನೆಗಳೆಂದು ಹೇಳಿ ಮೌನ ವಹಿಸಲು ಸಾಧ್ಯವೇ? ಈ ಪ್ರಶ್ನೆಗಳಿಗೆ ಇಂಥಿಂಥ ರೀತಿಯಲ್ಲಿ ಉತ್ತರ ನೀಡಬೇಕೆಂದು ನಾನು ಹೇಳುವುದಿಲ್ಲ. ಕಾರಣವೇನೆಂದರೆ, ಉತ್ತರ ಹೇಳಬೇಕಾದುದು ಪ್ರತಿಯೊಬ್ಬನು ತನ್ನ ಅನ್ವೇಷಣೆಯ ಫಲದ ಆಧಾರದಿಂದಾಗಿದೆ. ಆ ಫಲವೇನಾಗಿರಬಹುದೆಂದು ಅನ್ವೇಷಕನಿಗೆ ಕೂಡ ಮುಂಚಿತವಾಗಿ ಹೇಳಲು ಸಾಧ್ಯವಾಗದು. ಆದರೆ, ನನಗೆ ಒತ್ತಿ ಹೇಳಲಿಕ್ಕಿರುವುದೇನೆಂದರೆ, ಇಂತಹ ಪ್ರಶ್ನೆ ನಿಮ್ಮ ಮುಂದೆ ಬರುವಾಗ, ನೀವು ಪೂರ್ಣ ಶ್ರದ್ಧೆ ವಹಿಸಿ ಈ ಸಮಸ್ಯೆಯ ಪರಿಹಾರದಲ್ಲಿ ಮಗ್ನರಾಗಿ ಸ್ವತಂತ್ರವೂ ನೀತಿಯುತವೂ ಆದ ನಿಮ್ಮ ಅನ್ವೇಷಣೆ ಒಂದು ತೀರ್ಮಾನಕ್ಕೆ ಬರುವ ವರೆಗೆ ಅದನ್ನು ಮುಂದುವರಿಸ ಬೇಕು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಮನುಷ್ಯನ ಪ್ರಕೃತಿ ಮತ್ತು ಬುದ್ಧಿ ದೇವಾಸ್ತಿತ್ವ ಎಂಬ ವಿಷಯವನ್ನು, ಆ ಬಗ್ಗೆ ನಾವು ಅನ್ವೇಷಣೆ ಮಾಡದಿರಲು ಅಸಾಧ್ಯವಾದ ರೀತಿಯಲ್ಲಿ ನಮ್ಮ ಮುಂದಿಡುತ್ತದೆ. ಹಾಗಾದರೆ, ನಮಗೊಬ್ಬ ಸೃಷ್ಟಿಕರ್ತನಿದ್ದಾನೆಯೇ? ಸೃಷ್ಟಿಕರ್ತನಿದ್ದರೆ ಯಾರು? ಅವನು ಎಲ್ಲಿದ್ದಾನೆ? ಅವನ ಗುಣ ಮಹಾತ್ಮೆಗಳೇನು? ಅವನು ನಮ್ಮನ್ನು ಸೃಷ್ಟಿಸಿದುದರ ಉದ್ದೇಶವೇನು? ನಮ್ಮ ಹುಟ್ಟಿಗೆ ಏನಾದರೂ ಉದ್ದೇಶವಿದ್ದರೆ ಅದನ್ನು ಸಾಧಿಸಲು ನಮಗೆ ಸಾಧ್ಯವೇ? ಎಂಬಿತ್ಯಾದಿ ಪ್ರಶ್ನೆಗಳು ಹೇಗೆ ನಿರರ್ಥಕವಾಗುತ್ತವೆ? ಈ ಪ್ರಶ್ನೆಗಳು ಅಸಂಬಂಧವಲ್ಲ. ಈ ಸ್ಥಿತಿಯಲ್ಲಿ ಯಾವ ಬುದ್ಧಿವಂತನಿಗೆ ಈ ಅನ್ವೇಷಣೆಯನ್ನು ನಿರಾಕರಿಸಲು ಸಾಧ್ಯ?

ಮೂರನೆಯದು ಧರ್ಮದ ಪಾತ್ರವಾಗಿದೆ. ಲೋಕದಲ್ಲಿರುವ ಎಲ್ಲ ಮತ-ಧರ್ಮಗಳು ದೇವಾಸ್ತಿತ್ವವೆಂಬ ವಿಷಯವನ್ನು ನಮ್ಮ ಮುಂದಿಡುತ್ತವೆ. ಅಷ್ಟೇ ಅಲ್ಲ, ಅವುಗಳ ಅಧ್ಯಾಪನದ ಕೇಂದ್ರ ಬಿಂದುವೇ ದೇವರ ವಿಶಿಷ್ಟ ಮಾಹಾತ್ಮ್ಯಗಳಾಗಿವೆ. ಜಗತ್ತಿನಲ್ಲಿ ಸ್ಥಾಪಿತವಾದ ಲಕ್ಷಗಟ್ಟಲೆ ಜನರ ಸ್ವೀಕೃತಿಯನ್ನು ಪಡೆದ ಎಲ್ಲ ಧರ್ಮಗಳ ಮೂಲಾಧಾರ ದೇವನಾಗಿದ್ದಾನೆ. ವಿವಿಧ ಭಾಷೆಗಳಲ್ಲಿ ಅವತೀರ್ಣವಾಗಿ ಲೋಕವನ್ನು ಪ್ರಕಾಶಮಾನಗೊಳಿಸುತ್ತಿದ್ದ ದೈವೀಪ್ರಕಾಶನಗಳೇ ಅವುಗಳ ಅಡಿಪಾಯ. ಆದ್ದರಿಂದ ಆ ಧರ್ಮಗಳ ಅಧ್ಯಾಪನಗಳಲ್ಲಿ ಕಾಲಕ್ರಮೇಣ ಮನುಷ್ಯನ ಹಸ್ತಕ್ಷೇಪದಿಂದ ಹೆಚ್ಚುಕಮ್ಮಿ ಆಗಿದ್ದರೂ ಅವುಗಳ ಯಥಾರ್ಥ ಬುನಾದಿ ದೇವಚನವಾಗಿರುವುದರಿಂದ ಅವುಗಳಲ್ಲಿ ದೇವಾಸ್ತಿತ್ವದ ಬಗ್ಗೆ, ಮನುಷ್ಯ ಪ್ರಕೃತಿ ಮತ್ತು ಬುದ್ಧಿಯ ಸೂಚನೆಗಳಿಗಿಂತ ಹೆಚ್ಚಿನ ವಿವರಣೆ, ವ್ಯಾಖ್ಯಾನ ಮತ್ತು ಕ್ಲಪ್ತತೆಯನ್ನು ಕಾಣಬಹುದು. ಬುದ್ಧಿ ಮತ್ತು ಪ್ರಕೃತಿಯ

(27ನೇ ಪುಟಕ್ಕೆ)

# ದೇವನೂ ಸೃಷ್ಟಿಯೂ

ಎಂ. ಮುಹಮ್ಮದ್ ಯೂಸುಫ್ M.A., B.L.

(ಮುಂದುವರಿದುದು)

## ದೇವನ ಏಕತೆ

ದೇವನ ಇತರೆಲ್ಲ ವೈಶಿಷ್ಟ್ಯಗಳಿಗಿಂತ, ಪ್ರಧಾನವಾಗಿ ತಿಳಿಯಲ್ಪಡುವ ದೇವನ 'ಏಕತೆ' ಎಂಬ ವೈಶಿಷ್ಟ್ಯದ ಬಗ್ಗೆ ಪರ್ಯಾಲೋಚಿಸೋಣ. ದೇವನ ವೈಶಿಷ್ಟ್ಯಗಳ ಬಗ್ಗೆ ಪರಾಮರ್ಶಿಸುವಾಗ ಈ ವೈಶಿಷ್ಟ್ಯವನ್ನು ಖುರ್‌ಆನ್ ಪುನರಾವರ್ತಿಸಿ ಪ್ರಸ್ತಾಪಿಸುತ್ತಿರುವುದನ್ನು ಕಾಣಬಹುದು. ಈ ದೈವಿಕ ಗುಣವನ್ನು ಪವಿತ್ರ ಖುರ್‌ಆನ್ ಸಂಕ್ಷಿಪ್ತವಾಗಿ ಒಂದು ಅಧ್ಯಾಯದಲ್ಲಿ ಪ್ರಕಟಗೊಳಿಸಿದೆ. ಅದು ಹೀಗಿದೆ :

> **"ಅವನು ದೇವನು. ಏಕನೂ ಎಲ್ಲಕ್ಕೂ ಅವಲಂಬನಾಗಿರುವ ಅಧಿನಾಥನು. ಪುತ್ರನಿಲ್ಲದವನು ಮತ್ತು ಪುತ್ರನಲ್ಲದವನು. ಅವನಿಗೆ ಸಮಾನವಾಗಿ ಯಾರೂ ಇಲ್ಲ." (112 : 1-5)**

ದೇವನ ಗುಣದ ವ್ಯಾಖ್ಯೆಯಲ್ಲಿ ಯಾವುದೇ ರೀತಿಯ ಬಹುತ್ವವನ್ನು ಇಸ್ಲಾಂ ಅಂಗೀಕರಿಸುವುದಿಲ್ಲ. ಬಹುದೇವ ವಿಶ್ವಾಸದ ಎಳ್ಳಷ್ಟಾದರೂ ಇಸ್ಲಾಂ ಅಂಗೀಕರಿಸದೆ ಕೇವಲ ಏಕತ್ವವನ್ನು ದೇವನ ವ್ಯಾಖ್ಯೆಯಲ್ಲಿ ಅದು ನೀಡಿರುತ್ತದೆ. ಏಕದೇವ ವಿಶ್ವಾಸಕ್ಕೆ ಇಸ್ಲಾಂ ನೀಡಿರುವ ಪ್ರಾಧಾನ್ಯವನ್ನು ಮನಗಾಣುವಾಗ, ಅದಕ್ಕೆ ವಿರುದ್ಧವಾಗಿರುವ ಅಲ್ಪಮಟ್ಟದ ಚಿಂತನೆಗೆ ಕೂಡ ಎಡೆಗೊಡದ ರೀತಿಯಲ್ಲಿ, ಅಷ್ಟು ನಿಷ್ಕೃಷ್ಟವಾದ ರೀತಿಯಲ್ಲಿ ದೇವನ ಏಕತ್ವ ಪವಿತ್ರ ಖುರ್‌ಆನ್ ಪ್ರತಿಪಾದಿಸಿರುವುದನ್ನು ಕಾಣಬಹುದು.

ಕೆಲವು ಪುಣ್ಯಾತ್ಮರಾಗಲಿ ಮಹಾತ್ಮರಾಗಲಿ ನೈಸರ್ಗಿಕ ದೌರ್ಬಲ್ಯಗಳಿಂದೆಲ್ಲ ಅತೀತರೆಂದೋ, ತನ್ಮೂಲಕ ಅವರು ಇತರರಿಂದ ಅಂಧವಾಗಿ ಅನುಸರಿಸಲ್ಪಡುವವರೆಂದೋ ಇರುವ ನಂಬಿಕೆಯನ್ನು ಇಸ್ಲಾಂ ಅಂಗೀಕರಿಸುವುದಿಲ್ಲ. ಇಸ್ಲಾಮಿನ ಅಧ್ಯಾಪನಾನುಸಾರ ದೇವನು ಮಾತ್ರ ನಿಷ್ಕಳಂಕನು. ಅವನ ದಿವ್ಯವಾದ ವಿವಿಧ ಗುಣಗಳನ್ನು ಇಸ್ಲಾಂ ಸಮಗ್ರವಾಗಿ ವಿಶದೀಕರಿಸಿ, ಆ ಗುಣಗಳು ಮನುಷ್ಯನ ದೈನಂದಿನ ಜೀವಿತದಲ್ಲಿ ಉಂಟು ಮಾಡುವ ಪರಿಣಾಮಗಳನ್ನು ಪರಾಮರ್ಶಿಸಿದೆ. ಆದ್ದರಿಂದ ಒಬ್ಬ ಮುಸ್ಲಿಂ, ದೇವನ ಏಕತ್ವದಲ್ಲಿ ನಂಬುತ್ತಾನೆಂದು ಹೇಳುವಾಗ ಅದರ ಅರ್ಥ, ಏಕನಾಗಿ ಪ್ರಭಾವ ಸಹಿತನಾಗಿ ಪ್ರಪಂಚವನ್ನು ನಿಯಂತ್ರಿಸುವ ದೇವನ ಹೊರತು ಬೇರೆ ಯಾವುದೇ ಶಕ್ತಿಗೆ ಅವನು ವಿಧೇಯನಾಗುವುದಿಲ್ಲವೆಂದೂ ಇತರ ಶಕ್ತಿಗಳಲ್ಲಿ ಯಾವುದನ್ನೂ ಅವಲಂಬಿಸುವುದಿಲ್ಲವೆಂದೂ ಆಗಿದೆ. ಮಾತ್ರವಲ್ಲ, ಒಬ್ಬ ಮುಸ್ಲಿಂ, ದೇವನ ಯಾವುದೇ ಗುಣ ಕರ್ಮ ಸ್ವಭಾವವು ಬೇರೆ ಯಾವುದರಲ್ಲಾದರೂ ಇದೆಯೆಂದು ಭಾವಿಸದೆ, ಸರ್ವ ಮಹತ್ವಗಳೂ ಶ್ರೇಷ್ಠತೆಗಳೂ ಸಾಕ್ಷಾತ್ತಾಗಿ ದೇವನಿಗಿದೆಯೆಂದು ತಿಳಿದುಕೊಳ್ಳುತ್ತಾನೆ. ಹೀಗೆ, ಭೌತಿಕವಾದ ಯಾವುದೇ ಸಂಬಂಧ ದೇವನಲ್ಲಿ ಕಲ್ಪಿಸದೆ ನಿರ್ಮಲವೂ ಪಾವನವೂ ಆದ ಒಂದು ದೇವ ವ್ಯಾಖ್ಯೆಯನ್ನು ಆಧಾರವಾಗಿಟ್ಟುಕೊಂಡು, ದೇವನು ಮನುಷ್ಯನಾಗಿ ಈ ಲೋಕದಲ್ಲಿ ಅವತರಿಸುವುದರಿಂದ ಅತೀತವಾದ ಒಂದು ಶಕ್ತಿ ಎಂದು ಒಬ್ಬ ಮುಸ್ಲಿಂ ನಂಬುತ್ತಾನೆ. ಅವನು ಮರಣಕ್ಕೆ ತುತ್ತಾಗುವನೆಂದಾಗಲಿ ಹಸಿವೆ ದಾಹಗಳಿಗೆ ಗುರಿಯಾಗುವನೆಂದಾಗಲಿ ಒಬ್ಬ ಮುಸ್ಲಿಂ ಎಂದಿಗೂ ನಿರೂಪಿಸಲಾರ. ಅಷ್ಟೇ ಅಲ್ಲ, ಆ ಸರ್ವ ಶಕ್ತನ ಮುಂದೆ ಹೊರತು ಬೇರೆ ಯಾವುದೇ ಶಕ್ತಿಯ ಮುಂದೆ ಮುಸ್ಲಿಮನು ಶಿರಬಾಗಲಾರನು. ಪ್ರಾರ್ಥನೆಯ ವೇಳೆಯಲ್ಲಿ ಆತನು ದೇವನೊಡನೆ ಹೊರತು ಬೇರೆ ಯಾರಿಂದಲೂ ಅಭಯ ಯಾಚಿಸದೆ, ಸಹಾಯ ಬೇಡಿಕೊಳ್ಳದೆ ಏಕನಾದ ಆ ಸರ್ವಾಂತರ್ಯಾಮಿಯೊಡನೆ ಸಂಬಂಧ ಸ್ಥಾಪಿಸುತ್ತಾನೆ. ಆತನು ದೇವರ ಪ್ರವಾದಿಗಳನ್ನು ಮತ್ತು ಸಿದ್ಧ ಪುರುಷರನ್ನು ಗೌರವಿಸುತ್ತಾನೆ. ಆದರೆ ಅವರಲ್ಲಿ ಯಾರನ್ನೂ ಅತಿಮಾನುಷರೆಂದು ಭಾವಿಸುವುದಿಲ್ಲ. ಯಾರನ್ನೂ ಅತುಲ ಗುಣಗಳಿಂದ ಕೂಡಿದ ದೇವನ ಏಕತ್ವದಲ್ಲಿ ಸಹಭಾಗಿಯನ್ನಾಗಿ ಮಾಡುವುದಿಲ್ಲ.

### ದೇವನು ಮನುಷ್ಯನಾಗಿ ಅವತರಿಸುವುದಿಲ್ಲ

ದೇವದರ್ಶನ, ದೈವೀಪ್ರಕಾಶನ ಮತ್ತು ಆಧ್ಯಾತ್ಮಿಕಾನುಭೂತಿಗಳು ದೇವಾಸ್ತಿತ್ವವನ್ನು ರುಜುಪಡಿಸುವ ಮಾರ್ಗಗಳೆಂದು ಇಸ್ಲಾಂ ಪರಿಗಣಿಸುತ್ತದೆ. ಆದರೆ ದೇವರು ನರರೂಪತಾಳಿ ಮನುಷ್ಯರೆಡೆಯಲ್ಲಿ ಅವತರಿಸುತ್ತಾನೆಂಬ ಸಿದ್ಧಾಂತವನ್ನು ಇಸ್ಲಾಂ ಒಪ್ಪುವುದಿಲ್ಲ. ದೈವೀ ಪ್ರಕಟಣೆಗಳಲ್ಲಿರುವ ವಿಶ್ವಾಸವನ್ನು ಇಸ್ಲಾಂ ಅಂಗೀಕರಿಸುತ್ತದೆ. ದೇವನೊಡನೆ ಸಂಬಂಧವೇರ್ಪಡಿಸುವುದೇ ಧರ್ಮದ ಪರಮೋದ್ದೇಶವೆಂಬ ವಿಚಾರ ಸರ್ವ ಸಾಮಾನ್ಯವಾಗಿ ಅಂಗೀಕೃತವಷ್ಟೇ. ಇಸ್ಲಾಮಿನ ಪರಿಶುದ್ಧವಾದ ವಿಶ್ವಾಸವನ್ನನುಸರಿಸಿ ಈ ಉದ್ದೇಶಸಿದ್ಧಿಗಾಗಿ ದೇವರನ್ನು ಮನುಷ್ಯ ರೂಪದಲ್ಲಿ ಕೆಳಗಿಳಿಸಿಕೊಂಡು ಯಾವುದಾದರೊಂದು ಅವತಾರವಾಗಿ ಅಂಗೀಕರಿಸಲಾಗುವುದಿಲ್ಲ. ಬದಲಿಗೆ, ಮನುಷ್ಯನ ಆಧ್ಯಾತ್ಮಿಕವಾದ ಉನ್ನತಿಯನ್ನು ಇಸ್ಲಾಂ ಅಂಗೀಕರಿಸುತ್ತದೆ. ಅಂದರೆ, ಆಧ್ಯಾತ್ಮಿಕವಾಗಿ ಮನುಷ್ಯನು ಹಂತ ಹಂತವಾಗಿ ಉನ್ನತಿಗೇರುತ್ತಾನೆಂದೂ ಹಾಗೆ ಕ್ರಮಾನುಕ್ರಮವಾಗಿ ಮೇಲೇರುತ್ತಾ, ಪರಿಶುದ್ಧವಾದ ಜೀವಿತದ ಮತ್ತು ನೈತಿಕವಾದ ನೆಲೆಯ ಅಡಿಗಟ್ಟಿನಲ್ಲಿ ಆಧ್ಯಾತ್ಮಿಕವಾದೊಂದು ಸ್ಥಿತಿಯನ್ನು ಪಡೆದು ದೈವಿಕ ಮನುಷ್ಯನಾಗಿ ಪರಿವರ್ತಿತನಾಗುತ್ತಾನೆಂದೂ ಇಸ್ಲಾಂ ಕಲಿಸುತ್ತದೆ. ದೇವನ ಪಾವನ ಮುಖವನ್ನು ತೋರ್ಪಡಿಸುವ ಪರಿಪೂರ್ಣವಾದ ಒಬ್ಬ ಮನುಷ್ಯನು ಅಥವಾ ಪುಣ್ಯ ಪುರುಷನು ಮನುಷ್ಯ ರೂಪದಲ್ಲಿರುವ ದೇವನಾಗುವುದಿಲ್ಲ. ಬದಲಿಗೆ, ದೇವರ ಗುಣಗಳನ್ನು ತನ್ನಲ್ಲಿ ಬೆಳೆಸಿ ಅವುಗಳ ಒಂದು ಪ್ರತೀಕವಾಗಿ ಮಾರ್ಪಡುತ್ತಾನೆ. ಅಂದರೆ, ಆ ಮನುಷ್ಯನು ದೈವಿಕ ಗುಣಗಳ ಪ್ರತಿಬಿಂಬವಾಗುತ್ತಾನೆ. ಈ ಆಧ್ಯಾತ್ಮಿಕ ಸ್ಥಿತಿಯನ್ನು ಇಸ್ಲಾಂ ಅಂಗೀಕರಿಸುತ್ತದೆ.

ಈ ರೀತಿಯಲ್ಲಿ ಉನ್ನತಿಗೇರಿದ ದೈವಿಕ ಮನುಷ್ಯ ದೇವಾನುರಾಗದಲ್ಲಿ ಲೀನನಾಗುತ್ತಾನೆ. ಆತನ ಮಾದರಿ ಇತರರಿಗೆ ಒಳಿತು ಮಾಡಲು ಪ್ರೇರಣೆ ನೀಡುತ್ತದೆ ಹಾಗೂ ಜನರು ಆತನನ್ನು ಆದರಿಸುತ್ತಾರೆ ಮತ್ತು ಅನುಸರಿಸುತ್ತಾರೆ.

ಇಂತಹ ಮಹಾಪುರುಷ ತನ್ನ ಸ್ವಂತ ಮಾದರಿ ಮೂಲಕ, ತನ್ನಂಥ ಒಬ್ಬ ಸಾಮಾನ್ಯ ಮನುಷ್ಯನಿಗೆ ದೈವಿಕ ಮನುಷ್ಯನಾಗಿ ಮಾರ್ಪಡಲು ಹೇಗೆ ಸಾಧ್ಯವಾಗುವುದೆಂದು ಬದುಕಿನಲ್ಲಿ ತೋರಿಸಿಕೊಡುತ್ತಾನೆ.

ದೇವನೊಡನೆ ಸಂಬಂಧವನ್ನು ಸ್ಥಾಪಿಸಲಿಕ್ಕೂ, ಅವನ ಅನುಗ್ರಹಗಳನ್ನು ಗಳಿಸಲಿಕ್ಕೂ ಎಲ್ಲರಿಗೂ ಸಂದರ್ಭ ಸಿಗುತ್ತದೆ. ದೇವರು ಯಾರಿಗೂ ಅದನ್ನು ಕೊಡದಿರುವುದಿಲ್ಲ. ಇಸ್ಲಾಮಿನ ಅಧ್ಯಾಪನೆಯಿಂದ ಇದೇ ಮನವರಿಕೆಯಾಗುತ್ತದೆ. ದೇವ ಸಾಮೀಪ್ಯ, ದೈವಿಕ ಸಂಬಂಧ, ದೈವೀ ಪ್ರಕಾಶನ ಇವೆಲ್ಲ ಸಜ್ಜನರಾದ ಯಥಾರ್ಥ ಭಕ್ತರಿಗೆ ಲಭಿಸುತ್ತವೆಯೆಂದೂ, ಈ ಅನುಗ್ರಹಗಳೆಲ್ಲ ಪವಿತ್ರ ಖುರ್‌ಆನನ್ನು ಅನುಸರಿಸುವವರಿಗೆ ಖಂಡಿತವಾಗಿಯೂ ಸಿದ್ಧಿಸುತ್ತವೆಂದೂ ಇಸ್ಲಾಂ ಬೋಧಿಸುತ್ತದೆ. ಹೀಗೆ ಇಸ್ಲಾಂ ಸಂಪೂರ್ಣವೂ ಶ್ರೇಷ್ಠವೂ ಆದ ಒಂದು ದೈವನಿರ್ವಚನವನ್ನು ಮನುಷ್ಯ ಕುಲದ ಮುಂದಿಟ್ಟಿದೆ.

### ಜನ್ಮಪಾಪ ಎಂಬುದಿಲ್ಲ

ಪಾಪದ ಯಥಾರ್ಥವಾದ ಸ್ಥಿತಿಯ ಕುರಿತು ಇಸ್ಲಾಂ ಸರಿಯಾದ ಬೆಳಕು ಚೆಲ್ಲುತ್ತದೆ. ಈ ವಿಷಯದ ಬಗ್ಗೆ ಇಸ್ಲಾಮಿನ ಅಧ್ಯಾಪನವೇನೆಂದು ಪರ್ಯಾಲೋಚಿಸೋಣ. ಪಾಪಕ್ಕೆ ಸ್ವಂತವಾದ ಅಥವಾ ಸ್ವತಂತ್ರವಾದೊಂದು ಅಸ್ತಿತ್ವವಿದೆಯೆಂದು ಇಸ್ಲಾಂ ಒಪ್ಪುವುದಿಲ್ಲ. ನೈತಿಕ ಅಥವಾ ಆಧ್ಯಾತ್ಮಿಕವಾದ ನಿಯಮವನ್ನು ಉಲ್ಲಂಘಿಸುವುದರಿಂದಾಗಿ ಪಾಪದ ದಾರಿ ತೆರೆಯಲ್ಪಡುತ್ತದೆಂದು ಇಸ್ಲಾಂ ಕಲಿಸುತ್ತದೆ. ಪ್ರಕೃತಿ ನಿಯಮಗಳನ್ನಾಗಲಿ, ನೈತಿಕ ನಿಯಮಗಳನ್ನಾಗಲಿ ಆಧ್ಯಾತ್ಮಿಕ ನಿಯಮಗಳನ್ನಾಗಲಿ ಉಲ್ಲಂಘಿಸುವುದರಿಂದ ಪಾಪವುಂಟಾಗುತ್ತದೆ. ಇದು ಎರಡು ರೀತಿಯಲ್ಲಿ ಘಟಿಸುತ್ತದೆ. ಒಂದೋ, ಒಂದು ಕಾರ್ಯ ಮಾಡುವುದರಲ್ಲಿ ಲೋಪವಾಗುವಾಗ ಅಥವಾ ಅಮಿತವಾಗುವಾಗ ಪಾಪ ಉಂಟಾಗುತ್ತದೆಂದು ವೈಜ್ಞಾನಿಕವಾಗಿ ಆ ವಿಷಯವನ್ನು ವಿಶ್ಲೇಷಿಸಿ ಅಧ್ಯಯನ ಮಾಡುವಾಗ ಮನವರಿಕೆಯಾಗುತ್ತದೆ. ನೈತಿಕ ಜೀವಿತದ ಅಭಾವ ಮನುಷ್ಯನನ್ನು ಪಾಪಕೃತ್ಯಗಳೆಡೆಗೆ ಸೆಳೆಯಲು ಪ್ರೇರಕವಾಗುತ್ತದೆ. ಅವನ ಕಾರ್ಯಲೋಪದಿಂದ ಅಥವಾ ದೇವಾನುಗ್ರಹಗಳನ್ನು ಅವನು ದುರುಪಯೋಗಪಡಿಸುವಾಗ ಪಾಪವುಂಟಾಗುತ್ತದೆ. ಇತರರ ನ್ಯಾಯೋಚಿತವಾದ ಹಕ್ಕುಗಳನ್ನು ಅಲ್ಲಗಳೆಯುವಾಗಲೂ ಅವನು ಪಾಪ ಮಾಡುವವನಾಗುತ್ತಾನೆ.

ಈ ವಿಷಯದಲ್ಲಿ ಪವಿತ್ರ ಖುರ್‌ಆನ್ ಮನುಷ್ಯ ಕುಲಕ್ಕೆ ನೀಡಿದ ಮಹತ್ತಾದ ಅನುಗ್ರಹವನ್ನು ಪರಾಮರ್ಶಿಸುವುದು ಸಂದರ್ಭೋಚಿತವಾಗಿರಬಹುದೆಂದು ನಾನು ಭಾವಿಸುತ್ತೇನೆ. ಮನುಷ್ಯನ ಮಾನಸಿಕ ಸ್ಥಿತಿಯನ್ನು ಮೇಲೆತ್ತಿ ಆಧ್ಯಾತ್ಮಿಕಾನುಭೂತಿಯ ಉತ್ತುಂಗ ಪಥಕ್ಕೆ ತಲುಪಿಸುವುದಕ್ಕೆ ಪವಿತ್ರ ಖುರ್‌ಆನ್ ನೀಡಿರುವ ನಿರ್ದೇಶನಗಳು ಅಸಾಧಾರಣವಾಗಿವೆ. ಮನುಷ್ಯ ವರ್ಗಕ್ಕೆ ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರಿಗಿಂತ ಶ್ರೇಷ್ಠನಾದ ಒಬ್ಬ ಮಾನವ ಸ್ನೇಹಿಯನ್ನು ಕಾಣಲು ಅಸಾಧ್ಯ. ಮನುಷ್ಯನ ಯಥಾರ್ಥವಾದ ಜೀವಿತೋದ್ದೇಶವನ್ನು ಸಾಧಿಸಲಿಕ್ಕೂ ಆಧ್ಯಾತ್ಮಿಕಾನುಭೂತಿ ಗಳಿಸಲಿಕ್ಕಿರುವ ಶಕ್ತಿಗಳನ್ನು ವಿಪುಲಗೊಳಿಸಲಿಕ್ಕೂ ಹಝ್ರತ್ ಮುಹಮ್ಮದ್ ಪೈಗಂಬರ್ ಮನುಷ್ಯ ಕುಲಕ್ಕೆ ಉಪಕಾರವಾಗಿರುವಂತೆ ಬೇರೊಬ್ಬ ದಿವ್ಯ ಪುರುಷನೂ ಉಪಕಾರವಾಗಲಿಲ್ಲ. ಅಂಥ ಉದಾಹರಣೆಯನ್ನು ಬೇರೊಬ್ಬ ಮಹಾಪುರುಷನಲ್ಲಿ ಬೊಟ್ಟು ಮಾಡಿ ತೋರಿಸಲಿಕ್ಕೆ ಲೋಕಕ್ಕೆ ಸಾಧ್ಯವೂ ಇಲ್ಲ.

ಪಾಪವು ಮನುಷ್ಯನಲ್ಲಿ ಜನ್ಮತಃ ಅಥವಾ ಪ್ರಾಕೃತಿಕವಾಗಿ ಲೀನವಾಗಿರುವುದೆಂಬ ವಾದವನ್ನು ಖುರ್‌ಆನ್ ಒಪ್ಪುವುದಿಲ್ಲ. ನಮ್ಮ ಸ್ವಂತ ಪ್ರಯತ್ನದಿಂದ ಪಾಪ ವಿಮೋಚಿತರಾಗಲು ಸಾಧ್ಯವಿಲ್ಲವೆಂಬ ಕೆಲವು ಧರ್ಮದವರ ವಾದವನ್ನು ಖುರ್‌ಆನ್ ಅಂಗೀಕರಿಸುವುದು ಕೂಡ ಇಲ್ಲ. ಬಹಳ ಪರಿಶುದ್ಧವೂ ನಿರ್ಮಲವೂ ಆದ ಸ್ವಭಾವದಿಂದ ಕೂಡಿದವನಾಗಿ ಮನುಷ್ಯನು ಈ ಲೋಕದಲ್ಲಿ ಪ್ರವೇಶಿಸುತ್ತಾನೆಂದು ಖುರ್‌ಆನ್ ಹೇಳುತ್ತದೆ. ಅನುಸ್ಯೂತವೂ ಅನಂತವೂ ಆದ ಅಭಿವೃದ್ಧಿಗೆ ಆ ಪವಿತ್ರ ಗ್ರಂಥ ಮನುಷ್ಯನಿಗೆ ನೆರವಾಗುತ್ತದೆ. ಕೆಲವು ನಿಯಮಗಳಿಗೆ ವಿಧೇಯವಾಗಿ ಮನುಷ್ಯನು ವರ್ತಿಸಿದರೆ ಅವನಿಗೆ ಆಧ್ಯಾತ್ಮಿಕ ಸ್ಥಿತಿಯ ಔನ್ನತ್ಯಕ್ಕೆ ತಲಪಿ ದೇವಸಾಯುಜ್ಯ ಪಡೆಯಲು ಸಾಧ್ಯವೆಂದೂ ಅದಕ್ಕೋಸ್ಕರ ಅವನು ಜಾಗರೂಕತೆಯಿಂದ ವರ್ತಿಸಿದರೆ ಅನುಗ್ರಹ ಪದವಿಯ ಅತಿ ಎತ್ತರಕ್ಕೆ ತಲುಪಲು ಅವನಿಗೆ ಸಾಧ್ಯವಾಗುವುದೆಂದೂ ಪವಿತ್ರ ಖುರ್‌ಆನ್ ಹೇಳುತ್ತದೆ. ಮನುಷ್ಯನು ಜನ್ಮತಃ ಯಾವುದೇ ತರದ ಪಾಪಕ್ಕೆ ಜವಾಬ್ದಾರನಲ್ಲವೆಂದೂ ಖುರ್‌ಆನ್ ಸಾರುತ್ತದೆ. ಆ ಪವಿತ್ರ ಗ್ರಂಥದಲ್ಲಿ ದೇವನು ಹೀಗೆ ನುಡಿಯುತ್ತಾನೆ :

> "ಅತ್ಯುತ್ತಮವಾದ ಸ್ಥಿತಿಯಲ್ಲಿ ಮತ್ತು ಉತ್ಕೃಷ್ಟವಾದ ಸಾಮರ್ಥ್ಯಗಳ ಸಹಿತ ಮನುಷ್ಯನನ್ನು ನಾವು ಸೃಷ್ಟಿಸಿದ್ದೇವೆ. ಅವನು ಸತ್ಯ ವಿಶ್ವಾಸಿಯೂ ಸತ್ಕರ್ಮಿಯೂ ಆಗಿಬಿಟ್ಟರೆ ಅವನಿಗೆ ಅಂತ್ಯವಿಲ್ಲದ ಪ್ರತಿಫಲವನ್ನು ಪಡೆಯಲು ಸಾಧ್ಯ. ಆದರೆ ಅವನು ಸತ್ಯದಿಂದ ವ್ಯತಿಕ್ರಮಿಸಿದರೆ, ಕೆಲವು ಪರಮ ಸತ್ಯಗಳನ್ನು ಕಡೆಗಣಿಸಿದರೆ, ಅವನು ಅಧಃಪತನ ಮತ್ತು ಅಧಮತ್ವದ ಆಳದಲ್ಲಿ ಹೂತು ಹೋಗುವನು" (95 : 5-7)

ಪುರೋಗತಿ ಮತ್ತು ವಿಜಯದೆಡೆಗೆ ಮನುಷ್ಯರನ್ನು ಮುನ್ನಡೆಸಲು ಮೇಲಿನ ಸೂಕ್ತದಲ್ಲಿರುವ ಪ್ರೇರಣೆಗಿಂತ ಉತ್ತಮವಾದ ಬೇರೊಂದು ಉತ್ತೇಜನವಿಲ್ಲ. ಅಧಃಪತನದಿಂದ ಮನುಷ್ಯರನ್ನು ಪಾರು ಮಾಡಲು ಸಹ ಮೇಲಿನ ಸೂಕ್ತ ಪ್ರಚೋದನೆಯನ್ನೂ ಆವೇಶವನ್ನೂ ನೀಡುತ್ತದೆ. ಪಾಪವು ಮನುಷ್ಯನಲ್ಲಿ ಜನ್ಮಸಿದ್ಧವೆಂದು ಭಾವಿಸಿದರೆ ನಮ್ಮ ಎಲ್ಲ ಸನ್ಮಾರ್ಗಕ್ಕಿರುವ ಪ್ರಯತ್ನಗಳು ವ್ಯರ್ಥವಾಗುತ್ತವೆಯಷ್ಟೆ? ಕೆಡುಕಿನಿಂದ ವಿಮುಕ್ತವಾಗಲಿಕ್ಕಿರುವ ನಮ್ಮ ಪರಿಶ್ರಮಗಳು ಸಫಲವಾಗದಿರುವುದು ಜನ್ಮ ಪಾಪದ ಕಾರಣದಿಂದಾದರೆ, ಸತ್ಪಥದೆಡೆಗಿರುವ ನಮ್ಮ ಪ್ರಯತ್ನಗಳಿಗೆ ಏನೂ ಅರ್ಥವಿಲ್ಲದಾಗುತ್ತದೆ. ನಮ್ಮ ಎಲ್ಲ ಸಾಮರ್ಥ್ಯಗಳು ಕುಗ್ಗಿ ಕರ್ಮಧೀರತೆ ನಾಶವಾಗುವುವು. ಅಪಾರವಾದ ಭೌತಿಕ ಗಳಿಕೆಗಳಿಗೆ ನಾವು ಹಕ್ಕುದಾರರಾದರೂ ನಮಗೆ ಯಾವುದೇ ತರದ ಆಧ್ಯಾತ್ಮಿಕಾಭಿವೃದ್ಧಿ ಸಾಧ್ಯವಾಗಲಾರದೆಂಬುದು ದೊಡ್ಡ ವಿರೋಧಾಭಾಸವಾಗಿದೆ. ನಮ್ಮ ಆಧ್ಯಾತ್ಮಿಕ ಸ್ಥಿತಿಯ ಕುರಿತು ಮತ್ತು ಚಿಂತನೆಯ ಕುರಿತು ಬಹಳ ಕೀಳ್ಮಟ್ಟದ ಒಂದು ಅಭಿಪ್ರಾಯವನ್ನು ನಾವು ಹೊಂದುವುದು ತುಂಬಾ ಆಕ್ಷೇಪಾರ್ಹವಾಗಿದೆ. ಮನುಷ್ಯನು ಪಾಪವನ್ನು ವಹಿಸಿಕೊಂಡು ಈ ಲೋಕಕ್ಕೆ ಬರುತ್ತಾನೆಂಬ ಸಿದ್ಧಾಂತವನ್ನು ಮುಹಮ್ಮದ್ ಪೈಗಂಬರ್ (ಸ) ಬಲವಾಗಿ ಖಂಡಿಸಿದ್ದಾರೆ. ಜನ್ಮ ಪಾಪವನ್ನು ಪೈಗಂಬರರು ಒಪ್ಪುವುದೇ ಇಲ್ಲ. ಬಹಳ ಪರಿಶುದ್ಧವಾದ ಸ್ವಭಾವದೊಂದಿಗೆ ಮನುಷ್ಯನು ಲೋಕದಲ್ಲಿ ಜನ್ಮತಾಳುತ್ತಾನೆಂದು ಪೈಗಂಬರರು ಕಲಿಸುತ್ತಾರೆ. ನಿಯಮವನ್ನು ಅನುಸರಿಸುವ ಗುಣದೊಂದಿಗೆ ಮನುಷ್ಯನು ಹುಟ್ಟುತ್ತಾನೆಂದು ಪೈಗಂಬರರು ಹೇಳಿರುತ್ತಾರೆ. ಈ ಅನುಸರಣೆಯ ಸ್ವಭಾವ ಮನುಷ್ಯನಲ್ಲಿ ನಿಕ್ಷಿಪ್ತವಾಗಿರುವುದರಿಂದ ಮನುಷ್ಯನು ಜನ್ಮತಃ ಪಾಪರಹಿತನು. ನಿಯಮೋಲ್ಲಂಘನೆ ಮೂಲಕ ಉಂಟಾಗುವ ದೋಷವು ಪಾಪವೆಂದು ಹೇಳಲ್ಪಡುತ್ತದೆ. ನಿಯಮಕ್ಕೆ ವಿಧೇಯನಾಗಿ ಸಾತ್ವಿಕ ಜೀವನ ನಡೆಸುವ

(32ನೇ ಪುಟಕ್ಕೆ)

# ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ -12

ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್
ಕನ್ನಡಕ್ಕೆ : M.P.I.

## ಮಸ್ಜಿದ್ ನಬವಿಯ ನಿರ್ಮಾಣ

ಹಿಜ್‌ರತ್‌ನ ಕೆಲವು ಸಮಯದ ನಂತರ ಪೈಗಂಬರರು ತಮ್ಮ ಕುಟುಂಬದ ಸದಸ್ಯರನ್ನು ಹಾಗೂ ಇತರ ಬಂಧುಗಳನ್ನು ಕರೆತರಲು ಝೈದ್‌ರನ್ನು ಮಕ್ಕಕ್ಕೆ ಕಳುಹಿಸಿದರು. ಅತ್ತ ಮಕ್ಕದಲ್ಲಿ, ಪೈಗಂಬರರ ಅಚಾನಕವಾದ ಹಿಜ್‌ರತ್‌ನಿಂದ ಗಾಬರಿಗೊಂಡ ಮಕ್ಕದ ಜನರು ಮುಸ್ಲಿಮರ ಮೇಲಿನ ತಮ್ಮ ದೌರ್ಜನ್ಯದ ಕೃತ್ಯಗಳನ್ನು ಸ್ವಲ್ಪ ಮಟ್ಟಿಗೆ ನಿಲ್ಲಿಸಿದ್ದರು. ಬಹುಶಃ ಈ ಗಾಬರಿಯ ಕಾರಣದಿಂದಲೇ ಅವರು ಹಝ್ರತ್ ಪೈಗಂಬರ್ (ಸ)ರ ಮತ್ತು ಹ| ಅಬೂಬಕರ್ (ರ) ರವರ ಮನೆಯವರನ್ನೂ ಕುಟುಂಬ ದವರನ್ನೂ ಮಕ್ಕದಿಂದ ಮದೀನಕ್ಕೆ ಹೋಗುವಲ್ಲಿ ಅಡ್ಡಿಪಡಿಸಲಿಲ್ಲ. ಹಾಗೆ ಅವರೆಲ್ಲ ಸುರಕ್ಷಿತವಾಗಿ ಮದೀನಕ್ಕೆ ತಲುಪಿದರು. ಪೈಗಂಬರರು ಖರೀದಿಸಿದ ಜಮೀನಿನಲ್ಲಿ ಮೊತ್ತಮೊದಲಾಗಿ ಮಸ್ಜಿದ್ ನಿರ್ಮಾಣ ಕಾರ್ಯ ಆರಂಭ ವಾಯಿತು. ನಂತರ ಪೈಗಂಬರರಿಗೂ ಸಂಗಡಿಗರಿಗೂ ಉಳಕೊಳ್ಳಲು ಮನೆ ಗಳನ್ನು ನಿರ್ಮಿಸಲಾಯಿತು. ಈ ಎಲ್ಲ ಕಾರ್ಯಕ್ಕಾಗಿ ಹೆಚ್ಚು ಕಡಿಮೆ ಏಳು ತಿಂಗಳ ಕಾಲ ತಗಲಿತು.

## ಮದೀನದ ಬಹುದೇವಾರಾಧಕರು ಇಸ್ಲಾಂ ಧರ್ಮಕ್ಕೆ

ಪೈಗಂಬರರು ಮದೀನಕ್ಕೆ ಆಗಮಿಸಿದ ಕೆಲವೇ ಸಮಯದಲ್ಲಿ ಅಲ್ಲಿನ ಬಹುದೇವಾರಾಧಕ ಸಮುದಾಯದ ಹಲವರು ಇಸ್ಲಾಂ ಧರ್ಮ ಸ್ವೀಕರಿಸಿದರು. ಆದರೆ ಇವರಲ್ಲಿ ಕೆಲವರು ಇಸ್ಲಾಂ ಧರ್ಮ ತತ್ವಗಳಲ್ಲಿ ನಂಬಿಕೆಯಿದ್ದು ಸತ್ಯ ವಿಶ್ವಾಸ ಸ್ವೀಕರಿಸಿದವರಲ್ಲ; ಕೇವಲ ತೋರಿಕೆಗೆ ಮಾತ್ರ ಇಸ್ಲಾಂ ಧರ್ಮ ಸ್ವೀಕರಿಸಿದ 'ಮುನಾಫಿಕ್' (ಕಪಟ ವಿಶ್ವಾಸಿ)ಗಳಾಗಿದ್ದರು. ಹೀಗೆ, ಪ್ರಪ್ರಥಮವಾಗಿ ಮುಸ್ಲಿಮರೆಡೆಯಲ್ಲಿ ಕಪಟ ವಿಶ್ವಾಸಿಗಳ ಒಂದು ಗುಂಪು ರೂಪುಗೊಂಡಿತು. ಈ ಕಪಟ ವಿಶ್ವಾಸಿಗಳಲ್ಲಿ ಕೆಲವರು ನಂತರದ ಕಾಲದಲ್ಲಿ ನಿಜವಾದ ವಿಶ್ವಾಸಿಗಳಾಗಿ ಮಾರ್ಪಟ್ಟರೆ, ಇನ್ನು ಕೆಲವರು ಕೊನೆಯ ವರೆಗೂ ಕಪಟಿಗಳಾಗಿಯೇ ಉಳಿದು, ಮುಸ್ಲಿಂ ಸಮುದಾಯದ ವಿರುದ್ಧ ಒಂದಲ್ಲ ಒಂದು ರೀತಿಯ ಕುತಂತ್ರ ಹೂಡುತ್ತಲೇ ಇದ್ದರು.

ಮದೀನದಲ್ಲಿ ಬಹು ದೇವಾರಾಧಕರ ಪೈಕಿ ಇನ್ನು ಕೆಲವರು ಇಸ್ಲಾಂ ಧರ್ಮ ಸ್ವೀಕರಿಸಲೇ ಇಲ್ಲ. ಈ ಹೊಸ ಧರ್ಮಕ್ಕೆ ಲಭಿಸುತ್ತಿರುವ ಮನ್ನಣೆಯನ್ನೂ ಪ್ರವಾದಿವರ್ಯರ ವಿಜಯವನ್ನೂ ಕಂಡು ಸಹಿಸಲಾರದೆ ಅವರಲ್ಲಿ ಕೆಲವರು ಮದೀನ ಬಿಟ್ಟು ಮಕ್ಕಕ್ಕೆ ವಲಸೆ ಹೋದರು. ಹಾಗೆ, ಮದೀನದಲ್ಲಿ ಅತಿ ಅಲ್ಪ ಸಂಖ್ಯೆಯ ಬಹು ದೇವಾರಾಧಕರನ್ನೂ ಕೆಲವು ಯೆಹೂದ್ಯ ಗೋತ್ರದವರನ್ನೂ ಹೊರತುಪಡಿಸಿದರೆ, ಈಗ ಮದೀನವು ಒಂದು ಮುಸ್ಲಿಂ ಪಟ್ಟಣವಾಗಿ ಮಾರ್ಪಟ್ಟಿತ್ತು. ಏಕದೇವಾರಾಧನೆ ಸಮಗ್ರವಾಗಿ ನೆಲೆಗೊಂಡ ಪ್ರಪಂಚದ ಮೊತ್ತ ಮೊದಲಿನ ಪಟ್ಟಣ. ಸಂಪೂರ್ಣವಾಗಿ ಏಕದೇವಾರಾಧನೆ ಮಾಡುತ್ತಿದ್ದ ಬೇರೆ ಯಾವುದಾದರೂ ಪಟ್ಟಣವಾಗಲಿ ಹಳ್ಳಿಯಾಗಲಿ ಆ ಕಾಲದ ಭೂಪಟದಲ್ಲಿರಲಿಲ್ಲ. ಪೈಗಂಬರರಿಗೂ ಅವರ ಸಂಗಡಿಗರಿಗೂ ಇದು ಅತ್ಯಂತ ಹರ್ಷದ ಸಂಗತಿಯಾಗಿತ್ತು. ಎಷ್ಟು ಮಹತ್ತರವಾದ ವಿಜಯ! ಪೈಗಂಬರರು ಮದೀನದಲ್ಲಿ ನೆಲೆಸಿದ ಕೆಲವೇ ಸಮಯದಲ್ಲಿ ಇಡೀ ನಗರ ಮುಸ್ಲಿಮರ ಸ್ವಾಧೀನಕ್ಕೆ ಬಂದು, ಅಲ್ಲಿ ವ್ಯಾಪಿಸಿದ್ದ ವಿಗ್ರಹಾರಾಧನೆ ಸಂಪೂರ್ಣ ಅಪ್ರತ್ಯಕ್ಷವಾಗುವುದು - ಏಕದೇವಾರಾಧನೆ ಸರ್ವತ್ರ ಅನುಷ್ಠಾನಗೊಳ್ಳುವುದು - ಮುಸ್ಲಿಮರ ಪಾಲಿಗೆ ಇದೊಂದು ಮಹತ್ವಪೂರ್ಣ ದೃಷ್ಟಾಂತವೇ ಆಗಿತ್ತು.

ಆದರೆ, ಈ ಮಾರ್ಪಾಟಿನಿಂದಾಗಿ ಮುಸಲ್ಮಾನರಿಗೆ ನೆಮ್ಮದಿ ಲಭಿಸಿತೆಂದು ತಿಳಿಯಬಾರದು. ಮದೀನದ ಅರಬಿಯರಲ್ಲೇ ಕಪಟ ವಿಶ್ವಾಸಿಗಳಾದ ಕೆಲವರು ಪೈಗಂಬರರನ್ನು ಮುಗಿಸಿಬಿಡಲು ಸಮಯ ಕಾಯುತ್ತಿದ್ದರು. ಯೆಹೂದ್ಯರು ಸಹ ಅವರಿಗೆದುರಾಗಿ ಗೂಢಾಲೋಚನೆ ನಡೆಸುತ್ತಿದ್ದರು. ಈ ಅಪಾಯವನ್ನು ಅರಿತುಕೊಂಡು ಪೈಗಂಬರರು ಸದಾ ಬಹಳ ಎಚ್ಚರಿಕೆಯಿಂದಿರುತ್ತಿದ್ದರು. ಅಂತೆಯೇ ತನ್ನ ಸಂಗಡಿಗರನ್ನು ಕೂಡ ಜಾಗ್ರತೆಯಿಂದಿರುವಂತೆ ಉಪದೇಶಿಸುತ್ತಿದ್ದರು. ಮೊದ ಮೊದಲು ಪೈಗಂಬರರು ರಾತ್ರಿ ವೇಳೆಯೆಲ್ಲ ಎಚ್ಚರದಿಂದ ಇರುತ್ತಿದ್ದರು. ಒಮ್ಮೆ ಅವರು ಈ ರೀತಿ ನಿದ್ದೆ ಬಿಟ್ಟು ಕಾವಲು ಕಾಯುತ್ತಿದ್ದಾಗ ಬಹಳ ದಣಿವುಂಟಾಗಿ, "ಯಾರಾದರೂ ಪ್ರಾಮಾಣಿಕ ವ್ಯಕ್ತಿ ಕಾವಲು ನಿಲ್ಲುವನಾದರೆ ನಾನು ಸ್ವಲ್ಪ ನಿದ್ರಿಸುತ್ತಿದ್ದೆ" ಎಂದು ಹೇಳಿದರು. ಸ್ವಲ್ಪ ಸಮಯದಲ್ಲೇ ಶಸ್ತ್ರ ಸನ್ನದ್ಧನಾಗಿ ಯಾರೋ ಬರುವ ಸಪ್ಪಳ ಕೇಳಿಸಿತು. ಪೈಗಂಬರರು "ಅದು ಯಾರು?" ಎಂದು ಕೇಳಿದರು. "ಪೈಗಂಬರರೇ, ನಾನು -ಸಅದುಬ್ನು ಖಾಸ್- ತಮಗೆ ರಕ್ಷಣೆ ನೀಡಲು ಹಾಗೂ ಪಹರೆ ಕಾಯಲು ಸಿದ್ಧನಾಗಿದ್ದೇನೆ" ಎಂದು ಉತ್ತರ ಬಂತು. ನಂತರ ಪೈಗಂಬರರು ನಿದ್ರಿಸಿದರು.

ಪೈಗಂಬರರ ಸಂರಕ್ಷಣೆಯ ಹೊಣೆಗಾರಿಕೆ ಮದೀನದ ಅನ್ಸಾರ್‌ಗಳ ಮೇಲಿತ್ತು. ಅವರು ತಾವೇ ಆಮಂತ್ರಣ ನೀಡಿ ಮಕ್ಕದಿಂದ ಮದೀನಕ್ಕೆ ಕರೆತಂದ ಪೈಗಂಬರರನ್ನು ಎಲ್ಲ ರೀತಿಯಲ್ಲೂ ಸಂರಕ್ಷಿಸಬೇಕಾದುದು ಅವರ ಹೊಣೆಗಾರಿಕೆಯಾಗಿತ್ತು. ಅದಕ್ಕಾಗಿ ಅವರು ಯಾವ ತ್ಯಾಗಕ್ಕೂ ಸಿದ್ಧರಾಗಿದ್ದರು ಕೂಡ. ಮದೀನದ ಈ ಅಪಾಯದ ಸನ್ನಿವೇಶವನ್ನು ಮನಗಂಡ ಅವರು ಪೈಗಂಬರರ ಸುರಕ್ಷತೆಗೆ ಯೋಜನಾಬದ್ಧವಾದೊಂದು ವ್ಯವಸ್ಥೆ ಮಾಡಿದರು. ಪ್ರತಿ ಮನೆತನದವರಿಗೂ ಬೇರೆ ಬೇರೆ ಸಮಯ ನಿಗದಿಗೊಳಿಸಿ, ಆ ಮನೆತನದಿಂದ ಕೆಲವು ವ್ಯಕ್ತಿಗಳು ತಮಗೆ ನಿಗದಿಪಡಿಸಲಾದ ದಿನಗಳಂದು ಪೈಗಂಬರರ ಮನೆಯನ್ನು ಪಹರೆ ಕಾಯುವುದಾಗಿ ಅವರು ನಿರ್ಣಯಿಸಿದರು. ಕೆಲ ಕಾಲ ಹೀಗೆಯೇ ಮುಂದುವರಿಯಿತು. ಏನಿದ್ದರೂ ಮುಸಲ್ಮಾನರಿಗೆ ಮಕ್ಕ ಮತ್ತು ಮದೀನ ಜೀವಿತದಲ್ಲಿ ಹೇಳತಕ್ಕ ವ್ಯತ್ಯಾಸವೆಂದರೆ, ಅವರು ಈಗ ತಮ್ಮದೇ ಮಸ್ಜಿದ್‌ನಲ್ಲಿ ನಿರ್ಭೀತರಾಗಿ ಐದು ಹೊತ್ತು ನಮಾಜು (ಪ್ರಾರ್ಥನೆ) ಮಾಡಬಹುದಾಗಿತ್ತು ಎಂಬುದು ಮಾತ್ರ.

## ಮದೀನದಲ್ಲಿ ಅರಕ್ಷಿತಾವಸ್ಥೆ

ಎರಡು ಮೂರು ತಿಂಗಳು ಕಳೆಯಿತು. ತಲ್ಲಣಗೊಂಡಿದ್ದ ಮಕ್ಕದವರ ಭಯ ಭೀತಿ ಸ್ವಲ್ಪ ಮಟ್ಟಿಗೆ ನೀಗುತ್ತಾ ಬಂತು. ಅವರು ಪುನಃ ಮುಸಲ್ಮಾನರಿಗೆ ತೊಂದರೆ ಕೊಡುವ ಉಪಾಯಗಳನ್ನು ಯೋಚಿಸತೊಡಗಿದರು. ಚರ್ಚೆಗಳೂ ಆಲೋಚನಾ ಸಭೆಗಳು ನಡೆದವು. ಕೇವಲ ಮಕ್ಕದಲ್ಲಿ ಉಳಿದಿರುವ ಮುಸಲ್ಮಾನರನ್ನೂ ಅವರ ಸುತ್ತಮುತ್ತ ಇರುವವರನ್ನೂ ಮಾತ್ರ ಪೀಡಿಸುವುದರಿಂದ ಈಗ ಪ್ರಯೋಜನವಿಲ್ಲ. ಇಸ್ಲಾಂ ಧರ್ಮ ಮದೀನದಲ್ಲಿ ಬೇರೂರಿ ಬೆಳೆಯುತ್ತಿದೆ. ಮುಹಮ್ಮದ್ ಪೈಗಂಬರರು ಆಶ್ರಯ ಪಡೆದಿರುವ ಮದೀನದಿಂದ ಅವರನ್ನು ಹೊರದಬ್ಬುವಂತೆ ಮಾಡಬೇಕು. ಅಲ್ಲಿ ಅವರಿಗೆ ನೆಲೆಯಿಲ್ಲದಂತೆ ಮಾಡಿದರೆ ಮಾತ್ರ ಇಸ್ಲಾಂ ಧರ್ಮವನ್ನು ನಿರ್ಮೂಲನ ಮಾಡಲು ಸಾಧ್ಯ ಎಂದು ಅವರು ಮನಗಂಡರು. ಹಾಗೆ ಅವರು ಮದೀನದ ಓರ್ವ ನೇತಾರ - ಪೈಗಂಬರರು ಮದೀನಕ್ಕೆ ಆಗಮಿಸುವಾಗ ಮೊದಲು ಮದೀನದ ಜನರು ತಮ್ಮ ಅರಸನಾಗಿ ಒಪ್ಪಿಕೊಂಡ ವ್ಯಕ್ತಿ - ಅಬ್ದುಲ್ಲಾಹಿಬ್ನು ಉಬಯ್ಯಿಬ್ನು ಸುಲೂಲ್ ಎಂಬವರಿಗೆ ಒಂದು ಸಂದೇಶವನ್ನು ಕಳುಹಿಸಿದರು.

ಮುಹಮ್ಮದ್ (ಪೈಗಂಬರ್-ಸ-) ಮದೀನಕ್ಕೆ ತಲುಪಿರುವ ಸಂಗತಿ ತಿಳಿದು ಮಕ್ಕದವರು ಅತ್ಯಂತ ಕಳವಳಗೊಂಡಿದ್ದಾರೆಂದೂ ಅವರಿಗೂ ಅವರ ಸಂಗಡಿಗರಿಗೂ ಮದೀನದವರು ಅಲ್ಲಿ ಆಶ್ರಯ ನೀಡಿರುವುದು ಖಂಡಿತವಾಗಿಯೂ ಉಚಿತವಾದ ಕ್ರಮವಲ್ಲವೆಂದೂ ಅವರು ತಮ್ಮ ಸಂದೇಶದಲ್ಲಿ ತಿಳಿಸಿದರು. ಆ ಪತ್ರವನ್ನು ರೀತಿ ಮುಕ್ತಾಯಗೊಳಿಸಲಾಗಿತ್ತು:

"ಇದೀಗ ನೀವು ನಮ್ಮ ವೈರಿಯೊಬ್ಬನಿಗೆ [ಮುಹಮ್ಮದ್ (ಸ)ರಿಗೆ] ನಿಮ್ಮ ಮನೆಯಲ್ಲಿ ಆಶ್ರಯ ನೀಡಿರುವಿರಿ. ನಾವು ದೇವರ ಮೇಲೆ ಆಣೆ ಹಾಕಿ ಹೇಳುತ್ತೇವೆ - ನೀವು ಮದೀನದ ಜನರು ಒಂದೋ ಆತನೊಡನೆ ಯುದ್ಧ ಸಾರಬೇಕು. ಅಥವಾ ಆತನನ್ನು ನಿಮ್ಮ ಊರಿನಿಂದ ಹೊರ ಹಾಕಬೇಕು. ಇಲ್ಲವಾದರೆ ಮಕ್ಕ ನಿವಾಸಿಗಳಾದ ನಾವೆಲ್ಲ ಸೇರಿ ಮದೀನದ ಮೇಲೆ ಆಕ್ರಮಣ ಮಾಡಬೇಕಾಗುತ್ತದೆ. ಆಗ ನಾವು ನಿಮ್ಮಲ್ಲಿನ ಗಟ್ಟಿಮುಟ್ಟಾದ ಎಲ್ಲ ಪುರುಷರನ್ನು ಕೊಂದು ಹಾಕುವುದಲ್ಲದೆ ನಿಮ್ಮ ಸ್ತ್ರೀಯರನ್ನು ದಾಸಿಯರನ್ನಾಗಿ ಮಾಡುವೆವು." (ಅಬೂದಾವೂದ್).

ಈ ಪತ್ರ ತಲುಪುತ್ತಲೇ ಅಬ್ದುಲ್ಲಾಹಿಬ್ನು ಉಬಯ್ಯಿಬ್ನು ಸುಲೂಲ್‌ನ ದುರ್ಬುದ್ಧಿಗೆ ಸ್ವಲ್ಪ ತೀಕ್ಷ್ಣತೆ ಲಭಿಸಿದಂತಾಯಿತು. ಆತ ಇತರ ಮುನಾಫಿಕ್ (ಕಪಟ ವಿಶ್ವಾಸಿ) ಗಳೊಂದಿಗೆ ಚರ್ಚೆ ನಡೆಸಿದ. ನಾವೇನಾದರೂ ಈಗಲೂ ಸುಮ್ಮನಿದ್ದು ಮುಹಮ್ಮದ್‌ರನ್ನು ಹೀಗೇ ಬಿಟ್ಟು ಬಿಡುವುದಾದರೆ ನಮಗೆ ಗಂಡಾಂತರ ತಪ್ಪಿದ್ದಲ್ಲ. ಆದ್ದರಿಂದ ಮಕ್ಕದವರನ್ನು ಸಂತುಷ್ಟಗೊಳಿಸಲಿಕ್ಕಾಗಿ ನಾವೀಗ ಒಟ್ಟಾಗಿ ಮುಹಮ್ಮದರೊಡನೆ ಹೋರಾಡಬೇಕಾಗಿದೆ. ಈ ರೀತಿಯಾಗಿ ಹೇಳಿ ಕಪಟ ವಿಶ್ವಾಸಿಗಳನ್ನೆಲ್ಲ ಆತ ಅಣಿಗೊಳಿಸಿದ. ಇವರ ಈ ಗೂಢಾಲೋಚನೆಯ ಕುರಿತು ಹ| ಪೈಗಂಬರ್ (ಸ)ರಿಗೆ ವರ್ತಮಾನ ಲಭಿಸಿತು. ಅವರು ನೇರವಾಗಿ ಅಬ್ದುಲ್ಲಾಹಿಬ್ನು ಉಬಯ್ಯ್‌ನ ಬಳಿಗೆ ಹೋಗಿ ಆತನನ್ನು ಉಪದೇಶಿಸಿ ಸರಿದಾರಿಗೆ ತರಲು ಪ್ರಯತ್ನಿಸಿದರು. ಸಂಗತಿಗಳನ್ನೆಲ್ಲ ಅಬ್ದುಲ್ಲಾಹನಿಗೆ ವಿವರವಾಗಿ ತಿಳಿಸಿದ ಪ್ರವಾದಿಯವರು ಆತನೊಡನೆ ಈ ರೀತಿ ಹೇಳಿದರು: "ನಿಮ್ಮ ಯೋಜನೆ ಖಂಡಿತವಾಗಿಯೂ ನಿಮಗೇ ದೋಷವನ್ನುಂಟು ಮಾಡುವುದು. ಮದೀನದ ಹೆಚ್ಚಿನಂಶ ಜನರು ಈಗ ಇಸ್ಲಾಂ ಧರ್ಮ ಸ್ವೀಕರಿಸಿದ್ದಾರೆ. ಇಸ್ಲಾಮಿಗಾಗಿ ಅವರು ತಮ್ಮ ಪ್ರಾಣವನ್ನು ಸಹ ನೀಡಲು ಸಿದ್ಧರಿದ್ದಾರೆ. ಒಂದು ವೇಳೆ ಸಂಘರ್ಷವೇನಾದರೂ ಉಂಟಾದಲ್ಲಿ ಮದೀನದ ಬಹು ಸಂಖ್ಯಾತ ಜನರು ನಮ್ಮೊಂದಿಗೆ ಸೇರಿ ನಿಮ್ಮ ವಿರುದ್ಧ ಹೋರಾಡುವರು. ನೀವು ಸಂಪೂರ್ಣ ನಿರಾಶೆಯೊಂದಿಗೆ ಪರಾಭವಗೊಂಡು ನಾಶ ಹೊಂದುವಿರಿ."

ಪೈಗಂಬರರ ಈ ಮಾತುಗಳು ಸರಿಯೆಂದು ಆತನಿಗೆ ಮನವರಿಕೆಯಾಯಿತು. ತನ್ನ ತಪ್ಪನ್ನು ತಿದ್ದಿಕೊಳ್ಳುವುದಾಗಿ ಒಪ್ಪಿಕೊಂಡು ಅಬ್ದುಲ್ಲಾಹ್ ತನ್ನ ಇರಾದೆಯನ್ನು ಬದಲಿಸಿದ.

ಇದೇ ವೇಳೆ ಹಝ್ರತ್ ಮುಹಮ್ಮದ್ ಪೈಗಂಬರ್(ಸ)ರು ಇಸ್ಲಾಮಿನ ಸಾಮಾಜಿಕ ಭದ್ರತೆಗಾಗಿ ಹೊಸ ಒಂದು ಯೋಜನೆಯನ್ನು ಕೈಗೊಂಡರು. ಅವರು ಎಲ್ಲ ಮುಸಲ್ಮಾನರನ್ನೂ ಒಂದೆಡೆ ಕರೆದು ಸೇರಿಸಿ 'ಮುಹಾಜಿರ್' ಮತ್ತು 'ಅನ್ಸಾರ್'*ಗಳಾದ ಮುಸ್ಲಿಮರೆಲ್ಲರೂ ಪರಸ್ಪರ ಕಲೆತು ಬೆರೆತು ಜೀವಿಸಲು ಸಾಧ್ಯವಾಗುವಂತೆ ಒಂದು ಹೊಸ ರೀತಿಯ ಭ್ರಾತೃತ್ವ ಸಂಬಂಧವನ್ನು ಬೆಳೆಸಿಕೊಳ್ಳಬೇಕೆಂಬ ನಿರ್ದೇಶವನ್ನು ಅವರ ಮುಂದಿಟ್ಟರು. ಪೈಗಂಬರರ ಈ ನಿರ್ದೇಶನಕ್ಕೆ ಒಳ್ಳೆಯ ಮನ್ನಣೆ ದೊರಕಿತು. ಈ ಸಾಹೋದರ್ಯ ವ್ಯವಸ್ಥೆಯಂತೆ ಪ್ರತಿಯೋರ್ವ ಮದೀನದ ಮುಸ್ಲಿಂ ಮಕ್ಕದಿಂದ ಬಂದ ಓರ್ವ ಮುಸ್ಲಿಮನನ್ನು ತನ್ನ ಸಹೋದರರನ್ನಾಗಿ ಸ್ವೀಕರಿಸಬೇಕಾಗಿತ್ತು. ಇದಕ್ಕೆ ಮದೀನದ ಮುಸ್ಲಿಮರು ಸಂತೋಷದಿಂದ ಒಪ್ಪಿಕೊಂಡರು. ಅವರು ತಮ್ಮ ಸ್ವತ್ತು ಸಂಪತ್ತುಗಳಲ್ಲಿ ತಾವು ಸಹೋದರ ಸ್ಥಾನ ನೀಡಿದ ಮಕ್ಕದವರಿಗೂ ಪಾಲು ನೀಡಲು ತಯಾರಾದರು.

ಆದರೆ, ಮಕ್ಕದ ಮುಸ್ಲಿಮರು ಅನ್ಸಾರ್‌ಗಳ ಈ ಔದಾರ್ಯಕ್ಕೆ ಕೃತಜ್ಞತೆ ಸೂಚಿದರಾದರೂ ಅವರಿಂದ ಏನನ್ನೂ ಪಡೆದುಕೊಳ್ಳಲು ಮುಂದಾಗಲಿಲ್ಲ. ಭ್ರಾತೃತ್ವ ಸಂಬಂಧವನ್ನು ಮುಂದುವರಿಸಲು ಮಾತ್ರ ಬಯಸಿದರು. ಆದರೆ ಮದೀನದ ಅನ್ಸಾರ್‌ಗಳು ತೃಪ್ತರಾಗಲಿಲ್ಲ. ಅವರು ಪೈಗಂಬರರ ಬಳಿ ದೂರು ಕೊಂಡೊಯ್ದರು. "ನೀವು ನಮ್ಮನ್ನೆಲ್ಲಾ ಸಹೋದರರನ್ನಾಗಿ ಮಾಡಿರುವಿರಿ. ಆದರೆ ನಮ್ಮ ಸಂಪತ್ತಿನಿಂದ ಪಾಲು ಪಡೆಯಲು ಮುಹಾಜಿರ್‌ಗಳು ನಿರಾಕರಿಸುತ್ತಾರೆ. ಭೂಮಿ ಉಳುವುದು, ಬೇಸಾಯ ಮಾಡುವುದು ಮಕ್ಕದವರಿಗೆ ಗೊತ್ತಿಲ್ಲ ನಿಜ. ಆದರೆ, ಆ ಕೆಲಸವನ್ನೆಲ್ಲಾ ನಾವೇ ಮಾಡುತ್ತೇವೆ. ಉತ್ಪನ್ನಗಳಲ್ಲಿ ಅವರ ಪಾಲನ್ನು ಸ್ವೀಕರಿಸಲು ಅಡ್ಡಿಯಾದರೂ ಏನು?" ಎಂಬುದಾಗಿ ಅವರು ಪೈಗಂಬರರೊಡನೆ ನಿವೇದಿಸಿಕೊಂಡರು. ಆದರೂ ಮದೀನದವರ ಜಮೀನುದಾರಿಕೆಯಲ್ಲಿ ಹಕ್ಕುದಾರರಾಗಲು ಮಕ್ಕದವರು ಒಪ್ಪಲಿಲ್ಲ. ಅವರು ತಮ್ಮ ಪರಂಪರಾಗತ ಕಸುಬಾದ ವ್ಯಾಪಾರದತ್ತ ಗಮನ ಹರಿಸಿದರು. ವ್ಯಾಪಾರದಿಂದ ಅವರಲ್ಲಿ ಅನೇಕರು ಬಹುಬೇಗನೇ ಧನಿಕರಾಗಿ ಮಾರ್ಪಟ್ಟರು. ಆದರೂ ಮದೀನದ ಅನ್ಸಾರ್‌ಗಳು ತಮ್ಮ ತಮ್ಮ ಸಹೋದರರ ಪಾಲನ್ನು ಅವರಿಗಾಗಿಯೇ ಮೀಸಲಿಟ್ಟಿದ್ದರು. ಕೆಲವು ಅನ್ಸಾರ್‌ಗಳು ಮರಣ ಹೊಂದಿದ ಬಳಿಕ ಅವರ ಮಕ್ಕಳು ಆಸ್ತಿ ಪಾಲು ಮಾಡುವಾಗ ತಮ್ಮ ಮುಹಾಜಿರ್ ಸಹೋದರರ ಪಾಲನ್ನು ಪ್ರತ್ಯೇಕ ಬೇರ್ಪಡಿಸಿ ಅವರಿಗೆ ನೀಡುತ್ತಿದ್ದರು. ಅಲ್ಲಾಹನು ಪವಿತ್ರ ಖುರ್‌ಆನ್ ಮೂಲಕ ಈ ಕ್ರಮವನ್ನು ರದ್ದುಪಡಿಸುವ ವರೆಗೂ ಈ ರಿವಾಜು ಅನೇಕ ವರ್ಷಗಳ ಕಾಲ ಜಾರಿಯಲ್ಲಿತ್ತು. (ಮುಂದುವರಿಯುವುದು)

---

*ಧರ್ಮ ರಕ್ಷಣೆಗಾಗಿ ಮಕ್ಕದಿಂದ ಮದೀನಕ್ಕೆ ವಲಸೆ ಹೋದವರನ್ನು 'ಮುಹಾಜಿರ್' ಎಂದೂ ಮುಹಾಜಿರ್‌ಗಳಿಗೆ ಮದೀನದಲ್ಲಿ ಆಶ್ರಯ ನೀಡಿದ ಮದೀನದ ಮುಸಲ್ಮಾನರನ್ನು 'ಅನ್ಸಾರ್' ಎಂದೂ ಸಂಕೇತಿಸಲಾಗುತ್ತದೆ.

# ಸೂರ್ಯ - ಚಂದ್ರಗ್ರಹಣಗಳು

# ಆಕಾಶದಲ್ಲಿ ದಿವ್ಯ ದೃಷ್ಟಾಂತ

ಡಾ| ಹಾಫಿಝ್ ಸಾಲಿಹ್ ಮುಹಮ್ಮದ್ ಅಲ್ಲಾದ್ದೀನ್ M.Sc. Ph.D.

ಅಂತ್ಯಕಾಲದಲ್ಲಿ ಆಗಮಿಸುವ ಓರ್ವ ಮಹಾ ಧರ್ಮ ಸುಧಾರಕರ ಕುರಿತು ವಿವಿಧ ಧರ್ಮಗ್ರಂಥಗಳಲ್ಲಿ ಭವಿಷ್ಯ ನುಡಿಯಲಾಗಿದೆ. ಈ ಬಗ್ಗೆ ನಮ್ಮ ನಾಯಕ ಹಾಗೂ ಪ್ರವಾದಿ ಹಝ್ರತ್ ಮುಹಮ್ಮದ್ (ಸ.)ರವರ ಕೆಲವು ಗಮನಾರ್ಹವಾದ ಭವಿಷ್ಯನುಡಿಗಳನ್ನು ಮಾತ್ರ ನಾನಿಲ್ಲಿ ಚರ್ಚಿಸಲು ಉದ್ದೇಶಿಸುತ್ತೇನೆ. ಅವರನ್ನು ಗುರುತಿಸಲು ಒಬ್ಬ ಸತ್ಯಾನ್ವೇಷಕನಿಗೆ ಇದು ನೆರವಾಗುವುದು. ಈ ಭವಿಷ್ಯ ನುಡಿಯ ಪ್ರಕಾರ, ರಮಝಾನ್ ಮಾಸದಲ್ಲಿ ಸಂಭವಿಸಿದ ಸೂರ್ಯ-ಚಂದ್ರ ಗ್ರಹಣಗಳು ಆ ವಾಗ್ದತ್ತ ಧರ್ಮ ಸುಧಾರಕನ ಆಗಮನದ ಸ್ಪಷ್ಟ ಕುರುಹುಗಳಾಗಿವೆ.

ಅಲ್ಲಾಹನು ಖುರ್‌ಆನಿನಲ್ಲಿ ಹೇಳುತ್ತಾನೆ:

"ಅವನು (ಅಲ್ಲಾಹನು) ಅಗೋಚರ ವಿಚಾರಗಳನ್ನು ಬಲ್ಲವನಾಗಿದ್ದಾನೆ. ಅವನು ತನ್ನ ರಹಸ್ಯ ಜ್ಞಾನವನ್ನು ಯಾರಿಗೂ ಬಹಿರಂಗಪಡಿಸುವುದಿಲ್ಲ – ಅವನು ಆಯ್ಕೆ ಮಾಡುವ ಸಂದೇಶವಾಹಕನಿಗೆ ಹೊರತು." (72 : 27, 28)

ಪ್ರವಾದಿಗಳು ದೇವರ ನಿಕಟ ಸಂಬಂಧವನ್ನು ಪಡೆದವರೆಂದೂ ಅಗೋಚರ ವಿಚಾರಗಳ ಬಗ್ಗೆ ಅವರಿಗೆ ಮಾತ್ರ ತಿಳಿಯಪಡಿಸಲಾಗುವುದೆಂದೂ ಹಾಗೆ ಅವರು ಸ್ಪಷ್ಟ ರೀತಿಯಲ್ಲಿ ಭವಿಷ್ಯ ನುಡಿಯಬಲ್ಲರೆಂದೂ ಈ ಖುರ್‌ಆನ್ ವಚನಗಳು ವ್ಯಕ್ತಪಡಿಸುತ್ತವೆ.

ಹಝ್ರತ್ ಮುಹಮ್ಮದ್ ಪೈಗಂಬರರು ಅಲ್ಲಾಹನಿಂದ ವಿಪುಲವಾದ ಅಗೋಚರ ಜ್ಞಾನವನ್ನು ಹೊಂದಿದವರಾಗಿದ್ದರು. ಅಂತ್ಯಕಾಲದಲ್ಲಿ ಲೋಕವು ದೇವಪಥದಿಂದ ದಿಕ್ಚ್ಯುತಿಗೊಂಡು ಹೋಗುವಾಗ ಓರ್ವ ಮಹ್‌ದಿ ಮಸೀಹ್ (ಧರ್ಮ ಸುಧಾರಕ) ಆಗಮಿಸುವರೆಂದೂ ಆ ಮಹಾಪುರುಷನ ಮೂಲಕ ಸತ್ಯವಿಶ್ವಾಸ ಪುನಸ್ಥಾಪಿಸಲ್ಪಡುವುದೆಂದೂ ಹಾಗೆ ಇಸ್ಲಾಂ ಪುನರುಜ್ಜೀವನ ಗೊಳಿಸಲ್ಪಡುವುದೆಂದೂ ಪೈಗಂಬರರು ಭವಿಷ್ಯ ನುಡಿದಿದ್ದಾರೆ. ಮಹ್‌ದಿ ಮಸೀಹರ ಆವಿರ್ಭಾವದ ಕುರಿತು ಹಲವು ಸೂಚಕ ಕಾರ್ಯಗಳನ್ನು ಪೈಗಂಬರರು ನುಡಿದಿರುವರು. ವಾಗ್ದತ್ತ ಮಸೀಹರ ದ್ವಿತೀಯ ಖಲೀಫರಾದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ (ರ) ರಚಿಸಿದ 'ಅಹ್ಮದಿಯತಿಗೆ ಒಂದು ಆಮಂತ್ರಣ'(An Invitation to Ahmadiyyath) ಎಂಬ ಪುಸ್ತಕದಲ್ಲಿ ಅವನ್ನೆಲ್ಲ ಸ್ಪಷ್ಟವಾಗಿ ವಿವರಿಸಿದ್ದಾರೆ. ನಾನಿಲ್ಲಿ ಆಕಾಶದಲ್ಲಿ ಗೋಚರಿಸಿದ ಸೂರ್ಯ-ಚಂದ್ರಗ್ರಹಣಗಳ ದೃಷ್ಟಾಂತಗಳ ಬಗ್ಗೆ ಮಾತ್ರ ವಿವರಿಸಲಿಕ್ಕೆ ಬಯಸುತ್ತೇನೆ.

ಹಝ್ರತ್ ಇಮಾಂ ಝೈನುಲ್ ಆಬಿದೀನ್ (ರ.)ರವರ ಪುತ್ರ ಹಝ್ರತ್ ಇಮಾಂ ಮುಹಮ್ಮದ್ ಬಾಖಿರ್ (ರ.) ನಿವೇದಿಸಿದ ಒಂದು ಹದೀಸನ್ನು ವಿಖ್ಯಾತ ಹದೀಸ್ ಪಂಡಿತರಾದ ಅಲಿ ಇಬ್ನು ಉಮರ್ ಅಲ್ ಬಗ್ದಾದಿ ಅದ್ದಾರ್‌ಖುತ್ನಿ (ಹಿ.ಶ. 306-385) ಉಲ್ಲೇಖಿಸಿದ್ದು ಹೀಗೆ:

"ನಮ್ಮ ಮಹ್‌ದಿಗೆ ಎರಡು ದೃಷ್ಟಾಂತಗಳಿವೆ. ಆಕಾಶಗಳು ಮತ್ತು ಭೂಮಿ ಸೃಷ್ಟಿಸಲ್ಪಟ್ಟ ಬಳಿಕ ಇಂತಹ ದೃಷ್ಟಾಂತ ಗೋಚರಿಸಿಲ್ಲ. ಎಂದರೆ, ರಮಝಾನ್ ಮಾಸದ ಪ್ರಥಮ ರಾತ್ರಿಯಲ್ಲಿ ಚಂದ್ರಗ್ರಹಣವೂ (ಚಂದ್ರಗ್ರಹಣ ಸಂಭವಿಸಲು ಸಾಧ್ಯತೆ ಇರುವ ರಾತ್ರಿಗಳಲ್ಲಿ ಪ್ರಥಮ ರಾತ್ರಿ) ರಮಝಾನ್ ಮಾಸದ ಮಧ್ಯ ಹಗಲಿನಲ್ಲಿ ಸೂರ್ಯ ಗ್ರಹಣವೂ (ಸೂರ್ಯಗ್ರಹಣ ಸಂಭವಿಸಲು ಸಾಧ್ಯತೆ ಇರುವ ಹಗಲುಗಳಲ್ಲಿ ಮಧ್ಯದ ಹಗಲು) ಉಂಟಾಗುವುವು. ಆಕಾಶಗಳು ಮತ್ತು ಭೂಮಿ ಸೃಷ್ಟಿಸಲ್ಪಟ್ಟ ಬಳಿಕ ಇಂತಹ ದೃಷ್ಟಾಂತ ಗೋಚರಿಸಿಲ್ಲ. (ಸುನನ್ ದಾರ್‌ಖುತ್ನಿ – ಸಂಪುಟ 1, ಪುಟ 188, ಅನ್ಸಾರಿ ಪ್ರೆಸ್, ದೆಹಲಿ)

ಈ ದೃಷ್ಟಾಂತಗಳನ್ನು ವಿವರಿಸಿದ ಹದೀಸ್ ಸುನ್ನೀ ಮತ್ತು ಶಿಯಾಗಳ ಅನೇಕ ಹದೀಸ್ ಸಂಗ್ರಹ ಗ್ರಂಥಗಳಲ್ಲಿ ಉಲ್ಲೇಖಿಸ ಲ್ಪಟ್ಟಿದೆ.* ಹಿಜ್‌ರ 560ರಲ್ಲಿ ದೆಹಲಿಯ ಸಮೀಪದ ಪ್ರದೇಶದಲ್ಲಿ ಜೀವಿಸಿದ್ದ ಓರ್ವ ವಲಿ ಆದ ಹಝ್ರತ್ ಶೈಖ್ ನಿಅ್‌ಮತುಲ್ಲಾಹ್ ವಲಿ ಈ ರೀತಿ ಬರೆದಿದ್ದಾರೆ:

"(ಆಗಮಿಸಲಿರುವ) ಆ ಮಹಾಪುರುಷ ಮಹ್‌ದಿ ಮತ್ತು ಈಸಾ ಆಗಿರುವರು. ಎರಡು ಗುಣಗಳಿಂದ ಅನುಗ್ರಹೀತರಾಗಿ ನಾನು ಅವರನ್ನು ಕಾಣುತ್ತೇನೆ. ಸೂರ್ಯ-ಚಂದ್ರರ ಪ್ರಕಾಶ ಕುಂದುವುದಾಗಿಯೂ ನಾನು ಕಾಣುತ್ತೇನೆ." (ಮುಸ್ಲಿಹ್ ಆಖಿರುಝ್ಝಮಾನ್ - ಮೌಲ್ವಿ ಬಶೀರ್ ಅಹ್ಮದ್, ದೆಹಲಿ)

ಅಹ್ಲೆ ಹದೀಸ್ ಪಂಡಿತರಾದ ಮೌಲಾನಾ ಹಾಫಿಝ್ ಮುಹಮ್ಮದ್

* 1. ಫತಾವಾ ಹದೀಸಿಯಾ ಹಾಫಿಝ್ ಇಬ್ನು ಹಜ್‌ರ್ ಮಕ್ಕಿ -ಅಲ್ಲಾಮಾ ಶೈಖ್ ಅಹ್ಮದ್ ಶಹಾಬುದ್ದೀನ್ ಹಿಜ್‌ರುಲ್ ಹೈಶ್ಮಿ 2. ಅಹ್ವಾಲುಲ್ ಆಖಿರಾತ್ -ಹಾಫಿಝ್ ಮುಹಮ್ಮದ್ ಲಖೋಕೆ 3. ಆಖ್ರಿಗಹ್ - ಮೌಲ್ವಿ ಮುಹಮ್ಮದ್ ರಮಝಾನ್ ಹನ್‌ಫಿ ಮುಜ್ತಬೈ 4. ಹುಜಜುಲ್ ಕಿರಾಮ - ನವಾಬ್ ಸಿದ್ದೀಖ್ ಹಸನ್ ಖಾನ್ 5. ಅಖಾಯಿದುಲ್ ಇಸ್ಲಾಂ - ಮೌಲಾನ ಅಬ್ದುಲ್ ಹಖ್ ಮುಹದ್ದಸ್ (ದೆಹಲಿ) 6. ಖಿಯಾಮತ್‌ನಾಮಾ ಫಾರ್ಸಿ (ಅಲಾಮತ್ ಖಿಯಾಮತ್) - ಹಝ್ರತ್ ಶಾಹ್ ರಫೀವುದ್ದೀನ್ ಮುಹದ್ದಸ್ (ದೆಹಲಿ) 7. ಇಖ್ತಿರಾಬುಸ್ಸಾಅತ್ - ನವಾಬ್ ಸಿದ್ದೀಖ್ ಹಸನ್ ಖಾನ್. 8. ಮಕ್ತೂಬಾತೆ ಇಸ್ಲಾಂ ರಬ್ಬಾನಿ, ಮುಜದ್ದಿದ್ ಅಲ್ಫಸಾನಿ 9. ಬಹಾರುಲ್ ಅನ್ವಾರ್ ಸಂಪುಟ 13 ಎಂಬೀ ಗ್ರಂಥಗಳಲ್ಲಿ ಈ ಹದೀಸ್ ಉಲ್ಲೇಖಿತವಾಗಿದೆ.

ಬಿನ್ ಮೌಲಾನಾ ಬಾರಕಲ್ಲಾಹ್ ಲಖೋಕೆ 'ಅಹ್ವಾಲುಲ್ ಆಖಿರತ್' ಎಂಬ ಗ್ರಂಥದಲ್ಲಿ ಹೀಗೆ ಬರೆದಿದ್ದಾರೆ:

"ಈ ವಚನಗಳಲ್ಲಿ ಸೂರ್ಯ-ಚಂದ್ರ ಗ್ರಹಣಗಳು ರಮಝಾನ್ ಮಾಸದ 13, 27 ದಿನಾಂಕಗಳಂದು ಸಂಭವಿಸುವುದೆಂದು ಸೂಚಿಸಲಾಗಿದೆ."

ಮುಂದೆ, ಹದೀಸ್ ಮತ್ತು ಪ್ರಕೃತಿ ನಿಯಮಗಳನುಸಾರ ಗ್ರಹಣಗಳ ಸರಿಯಾದ ದಿನಾಂಕಗಳು ರಮಝಾನ್ 13 ಮತ್ತು 28 ಎಂದು ವಿಶದೀಕರಿಸಲ್ಪಡುವುದು.

ಗ್ರಹಣಗಳ ಬಗ್ಗೆ, ಅವು ಇಸ್ಲಾಮಿನ ಪುನರುತ್ಥಾನ ಕಾಲವನ್ನು ಸೂಚಿಸುವ ಅತಿ ಮುಖ್ಯವಾದ ದೃಷ್ಟಾಂತಗಳೆಂದು ಪವಿತ್ರ ಖುರ್‌ಆನ್ ತೋರಿಸುವ ನಿಜಾಂಶ ಪ್ರಸ್ತುತ ಹದೀಸನ್ನು ದೃಢೀಕರಿಸುತ್ತದೆ. ಖುರ್‌ಆನ್ ಹೀಗೆ ಹೇಳುತ್ತದೆ:

"ಪುನರುತ್ಥಾನ ದಿನ ಯಾವಾಗ ಎಂದು ಅವನು ಕೇಳುತ್ತಾನೆ. ಕಣ್ಣುಗಳು ಕೋರೈಸಲ್ಪಡುವಾಗ, ಚಂದ್ರನಿಗೆ ಗ್ರಹಣವಾಗುವಾಗ, ಸೂರ್ಯ ಮತ್ತು ಚಂದ್ರ ಒಂದುಗೂಡಿಸಲ್ಪಡುವಾಗ, ಅಂದು ಓಡಿ ಪಾರಾಗುವ ಸ್ಥಳವೆಲ್ಲಿ ಎಂದು ಮನುಷ್ಯನು ಕೇಳುವನು." (75 : 7 - 11)

ಹೀಗೆ, ಈ ಭವಿಷ್ಯ ನುಡಿಯ ಮೂಲ ಖುರ್‌ಆನಿನಲ್ಲಿದೆ. ಹದೀಸ್ ಈ ವಚನವನ್ನು ವಿಶದಪಡಿಸುತ್ತದೆ ಹಾಗೂ ಮುಖ್ಯವಾದ ವಿವರಣೆ ನೀಡುತ್ತದೆ.

ಬೈಬಲಿನ ಹೊಸ ಒಡಂಬಡಿಕೆಯಲ್ಲಿ ಯೇಸು ಕ್ರಿಸ್ತರು ತನ್ನ ಪುನರಾಗಮನದ ಬಗ್ಗೆ ಹೀಗೆ ವಿವರಿಸುತ್ತಾರೆ:

"ಆ ದಿನಗಳ ಸಂಕಟವು ತೀರಿದ ಕೂಡಲೆ ಸೂರ್ಯನು ಕತ್ತಲಾಗಿ ಹೋಗುವನು, ಚಂದ್ರನು ಬೆಳಕು ಕೊಡದೆ ಇರುವನು." (ಮತ್ತಾಯ 24:29)

ಮಹಾತ್ಮ ಸೂರ್‌ದಾಸ್‌ಜಿಯವರು ಕಲ್ಕಿ ಅವತರಿಸುವ ಕಾಲದಲ್ಲಿ ಚಂದ್ರನಿಗೂ ಸೂರ್ಯನಿಗೂ ಗ್ರಹಣವಾಗುವುದೆಂದು ಭವಿಷ್ಯ ನುಡಿದಿದ್ದಾರೆ:

"ಚಂದ್ರನಿಗೂ ಸೂರ್ಯನಿಗೂ ಗ್ರಹಣವಾಗುವುದು. ಹಿಂಸೆ ಮತ್ತು ಮರಣ ವರ್ಧಿಸುವುದು." (ಸೂರ್‌ಸಾಗರ್)

ಸಿಖ್ಖರ ಪವಿತ್ರ ಗ್ರಂಥವಾದ ಶ್ರೀ ಗುರು ಗ್ರಂಥ್ ಸಾಹಿಬ್‌ನಲ್ಲಿ ಹೀಗೆ ಉಲ್ಲೇಖಿಸಲಾಗಿದೆ:

"ಮಹಾರಾಜ್ ನಿಷ್ಕಳಂಕ ಅವತಾರವಾಗಿ ಆಗಮಿಸುವಾಗ ಸೂರ್ಯ ಮತ್ತು ಚಂದ್ರ ಅವರಿಗೆ ಸಹಾಯಕರಾಗುವರು."

ಒಟ್ಟಾರೆ ಹೇಳುವುದಾದರೆ, ಸೂರ್ಯ ಚಂದ್ರರ ಈ ದೃಷ್ಟಾಂತಗಳ ಬಗ್ಗೆ ಇತರ ಧರ್ಮಗ್ರಂಥಗಳಲ್ಲಿ ಸಹ ಪ್ರತಿಪಾದಿಸಲಾಗಿದೆ. ಮೇಲೆ ಹೇಳಲಾದ ದಾರ್‌ಖುತ್ನಿಯ ಹದೀಸಿನಲ್ಲಿ ಹೆಚ್ಚು ಸ್ಪಷ್ಟವಾದ ವಿವರಣೆಯನ್ನು ಕೊಡಲಾಗಿದೆ. ಅದನ್ನು ಮುಂದೆ ವಿಶದೀಕರಿಸಲಾಗುವುದು.

**ಸೂರ್ಯ-ಚಂದ್ರ ಗ್ರಹಣಗಳು ಪ್ರಕೃತಿ ನಿಯಮದ ಪ್ರಕಾಶದಲ್ಲಿ**

ಸೂರ್ಯ-ಚಂದ್ರ ಗ್ರಹಣಗಳು, ಪ್ರಕೃತಿ ನಿಯಮಾನುಸಾರ ಸಂಭವಿಸುತ್ತವೆ. ಪವಿತ್ರ ಖುರ್‌ಆನ್ ಪ್ರಕೃತಿ ನಿಯಮದ ಕಡೆಗೆ ನಮ್ಮ ಗಮನವನ್ನು ಸದಾ ಸೆಳೆಯುತ್ತದೆ. ಖಗೋಳ ಶಾಸ್ತ್ರಕ್ಕೆ ಸಂಬಂಧಿಸಿದ ಕೆಲವು ಮೂಲ ಅಂಶಗಳನ್ನು ಇಲ್ಲಿ ವಿವರಿಸುವುದು ಅಗತ್ಯವೆಂದು ತೋರುತ್ತದೆ. ಈ ಹದೀಸಿನ ಬಗ್ಗೆ ಚೆನ್ನಾಗಿ ಮನದಟ್ಟುಮಾಡಿಕೊಳ್ಳಲು ಇದು ನೆರವಾಗುವುದು.

ಭೂಮಿ, ಸೂರ್ಯ, ಚಂದ್ರ, ಮೂರು ಸೇರಿ ಒಂದು ತ್ರಿಗೋಳ ವ್ಯವಸ್ಥೆ ರೂಪುತಾಳುತ್ತದೆ. ಖುರ್‌ಆನ್ ಈ ವ್ಯವಸ್ತೆಯ ಕುರಿತು ಬಹಳ ಮನೋಹರವಾಗಿ ಈ ರೀತಿ ವಿವರಿಸುತ್ತದೆ:

"ಭೂಮಿ ಉತ್ಪಾದಿಸುವ ಸಸ್ಯತಲಾದಿಗಳಲ್ಲೂ ಮನುಷ್ಯರಲ್ಲೂ ಅವರು ತಿಳಿಯದಿರುವ ಇತರ ವಸ್ತುಗಳಲ್ಲೂ ಜೋಡಿಗಳನ್ನು ಸೃಷ್ಟಿಸಿದವನು (ಅಲ್ಲಾಹನು) ಪವಿತ್ರನು. ರಾತ್ರಿ ಸಹ ಅವರಿಗೊಂದು ದೃಷ್ಟಾಂತ. ಅದರಿಂದ ನಾವು ಹಗಲನ್ನು ನೀಗಿಸುತ್ತೇವೆ. ಆಗ ಅವರು ಅದೋ ಅಂಧಕಾರದಲ್ಲಾಗುತ್ತಾರೆ. ಸೂರ್ಯ ಅದರ ನಿಶ್ಚಿತ ಪಥದಲ್ಲಿ ಚಲಿಸುತ್ತದೆ. ಅದು ಪ್ರತಾಪಶಾಲಿಯೂ ಸರ್ವಜ್ಞನೂ ಆದವನ (ಅಲ್ಲಾಹನ) ವಿಧಿ ಪ್ರಕಾರವಾಗಿದೆ. ಚಂದ್ರನಿಗೆ ನಾವು ಕೆಲವು ಹಂತಗಳನ್ನು ನಿರ್ಣಯಿಸಿದ್ದೇವೆ. ಹಾಗೆ ಅದು (ಕೊನೆಗೆ) ಖರ್ಜೂರ ಮರದ ಹಳೆಯ ಒಣಕೊಂಬೆಯಂತಾಗುತ್ತದೆ. ಸೂರ್ಯನು ಚಂದ್ರನನ್ನು ತಲಪುವುದು ಅಸಾಧ್ಯ. ರಾತ್ರಿಯು ಹಗಲನ್ನು ಸಹ ಹಿಂದೆ ಹಾಕಲಾರದು. ಎಲ್ಲವೂ ನಿರ್ದಿಷ್ಟ ಪಥದಲ್ಲಿ ಸಂಚರಿಸುತ್ತವೆ." (36 : 37-41)

ಪವಿತ್ರ ಖುರ್‌ಆನಿನ 5 ವಚನಗಳನ್ನು ಇಲ್ಲಿ ಉದ್ಧರಿಸಲಾಗಿದೆ. ಪ್ರಥಮ ವಚನದಲ್ಲಿ ಎಲ್ಲವೂ ಜೋಡಿಗಳಾಗಿ ಸೃಷ್ಟಿಸಲ್ಪಡುತ್ತವೆ ಎಂಬ ಮೂಲ ತತ್ವವನ್ನು ಹೇಳಲಾಗಿದೆ. ಎರಡನೇ ವಚನದಲ್ಲಿ ಭೂಮಿಯ ಚಲನೆಯಿಂದ ರಾತ್ರಿ ಮತ್ತು ಹಗಲು ಉಂಟಾಗುತ್ತದೆ ಎಂದು ಸೂಚಿಸಲಾಗಿದೆ. ಮೂರನೇ ವಚನದಲ್ಲಿ ಸೂರ್ಯನ ಚಲನೆಯ ಬಗ್ಗೆ ಮತ್ತು ನಾಲ್ಕನೇ ವಚನದಲ್ಲಿ ಚಂದ್ರನ ಚಲನೆಯ ಬಗ್ಗೆ ಹೇಳಲಾಗಿದೆ. ಐದನೇ ವಚನದಲ್ಲಿ ಸೂರ್ಯ, ಚಂದ್ರ, ಹಗಲು, ರಾತ್ರಿ ಎಲ್ಲವುಗಳ ಬಗ್ಗೆ ಒಟ್ಟಾಗಿ ಪ್ರಸ್ತಾಪಿಸಲಾಗಿದೆ ಹಾಗೂ ಸೂರ್ಯ-ಚಂದ್ರ ಚಲನೆಗೆ ನಿರ್ದಿಷ್ಟ ಸೀಮೆಗಳಿವೆಯೆಂಬ ಬಗ್ಗೆ ನಮ್ಮ ಗಮನವನ್ನು ಸೆಳೆಯಲಾಗಿದೆ.

ಚಂದ್ರ, ಭೂಮಿಯ ಪ್ರದಕ್ಷಿಣೆ ಮಾಡುತ್ತಿದೆಂದೂ ಅದು ಒಂದು ಮಾಸ ಕಾಲದಲ್ಲಿ ಒಂದು ಪರಿಭ್ರಮಣ (Revolution) ಪೂರ್ಣಗೊಳಿಸುತ್ತದೆಂದೂ ವಿಜ್ಞಾನ ನಮಗೆ ಕಲಿಸುತ್ತದೆ. ಅವರೆಡೂ ಸೇರಿ ಒಂದು ಜೋಡಿಯಾಗುತ್ತದೆ. ಭೂಮಿ ಮತ್ತು ಚಂದ್ರ ಒಟ್ಟಿಗೆ ಸೂರ್ಯನ ಪ್ರದಕ್ಷಿಣೆ ಮಾಡುತ್ತದೆ. ಹಾಗೆ ಒಂದು ಸುತ್ತು ಬರಲಿಕ್ಕೆ ಒಂದು ವರ್ಷ ಕಾಲ ಹಿಡಿಯುತ್ತದೆ. ಹೀಗೆ ಸೂರ್ಯ, ಭೂಮಿ ಮತ್ತು ಚಂದ್ರ ಸೇರಿ ಬೇರೊಂದು ಯುಗ್ಮ ವ್ಯವಸ್ಥೆ ಸೃಷ್ಟಿಯಾಗುತ್ತದೆ. ಈ ರೀತಿ ಸೌರವ್ಯೂಹದಲ್ಲಿ ಜೋಡಿಗಳೊಳಗೆ ಅನೇಕ ಜೋಡಿಗಳಿವೆ. ಸೂರ್ಯ, ಅದರ ಗ್ರಹಗಳು ಮತ್ತು ಉಪಗ್ರಹಗಳು ಒಟ್ಟಿಗೆ ಈ ಕ್ಷೀರ ಪಥದ ಕೇಂದ್ರಕ್ಕೆ ಪ್ರದಕ್ಷಿಣೆ ಬರುತ್ತವೆ. 10 ಕೋಟಿ ವರ್ಷಗಳ ಕಾಲಾವಧಿಯಲ್ಲಿ ಇಂಥ ಒಂದು ಸುತ್ತು ಪೂರ್ಣವಾಗುತ್ತದೆ. ನಮ್ಮ ಸೂರ್ಯನಂಥ ಕೋಟ್ಯಾನುಕೋಟಿ ನಕ್ಷತ್ರಗಳು

ಕ್ಷೀರಪಥದ ಕೇಂದ್ರಕ್ಕೆ ವಿವಿಧ ಕಾಲಾವಧಿಗಳಲ್ಲಿ ಪ್ರದಕ್ಷಿಣೆ ಹಾಕುತ್ತಿವೆ.

"ಎಲ್ಲವನ್ನು ಜೋಡಿಗಳಾಗಿ ಸೃಷ್ಟಿಸಿದ ಪ್ರಭು ಎಷ್ಟು ಪರಿಶುದ್ಧನು!"

ಚಂದ್ರನು ಭೂಮಿಗೆ ಪ್ರದಕ್ಷಿಣೆ ಬರುವಾಗ ಸೂರ್ಯ ಮತ್ತು ಭೂಮಿಯ ಮಧ್ಯದಲ್ಲಿ ಒಂದೇ ನೇರ ರೇಖೆಯಲ್ಲಿ ಬಂದು ಸೂರ್ಯ ಪ್ರಕಾಶ ಭೂಮಿಗೆ ಬೀಳದಂತೆ ತಡೆಯುತ್ತದೆ. ಇದನ್ನು ಸೂರ್ಯಗ್ರಹಣ ಎನ್ನುತ್ತಾರೆ. ಸೂರ್ಯ ಚಂದ್ರರ ಮಧ್ಯದಲ್ಲಿ ಒಂದೇ ನೇರ ರೇಖೆಯಲ್ಲಿ ಭೂಮಿ ಬರುವಾಗ, ಭೂಮಿಯ ನೆರಳು ಚಂದ್ರನ ಮೇಲೆ ಬಿದ್ದು ಚಂದ್ರ ಗ್ರಹಣವಾಗುತ್ತದೆ. ಖಗೋಳ ಶಾಸ್ತ್ರ ಪರಿಭಾಷೆ ಪ್ರಕಾರ ಸೂರ್ಯ ಗ್ರಹಣ ಅಮವಾಸ್ಯೆಯಂದು ಮತ್ತು ಚಂದ್ರಗ್ರಹಣ ಹುಣ್ಣಿಮೆಯಂದು ಸಂಭವಿಸುತ್ತದೆಂದು ನಾವು ಹೇಳುತ್ತೇವೆ. ಅಮವಾಸ್ಯೆಯಂದು ಸೂರ್ಯ ಮತ್ತು ಚಂದ್ರ ಒಂದೇ ರೇಖಾಂಶದಲ್ಲಿ ಬರುತ್ತವೆ. ಆಗ ಚಂದ್ರ-ಸೂರ್ಯ ಸಮಾಗಮವೆಂದು ಹೇಳಲಾಗುತ್ತದೆ. ಆದರೆ ಎಲ್ಲ ಅಮವಾಸ್ಯೆಯಂದು ಮತ್ತು ಹುಣ್ಣಿಮೆಯಂದು ಗ್ರಹಣವಾಗಬೇಕೆಂದಿಲ್ಲ. ಗ್ರಹಣವಾಗಬೇಕಿದ್ದರೆ ಸೂರ್ಯ, ಚಂದ್ರ ಮತ್ತು ಭೂಮಿ ಒಂದೇ ನೇರ ರೇಖೆಯಲ್ಲಿ ಬರಬೇಕಾಗಿದೆ. ಸೂರ್ಯನ ಸುತ್ತ ಭೂಮಿಯ ಕಕ್ಷೆ ಮತ್ತು ಭೂಮಿಯ ಸುತ್ತ ಚಂದ್ರನ ಕಕ್ಷೆ ಒಂದೇ ರೀತಿಯಾಗಿರುತ್ತಿದ್ದರೆ ಮಾಸದಲ್ಲಿ ಎರಡು ಸರ್ತಿ ಒಂದೇ ರೇಖಾಂಶದಲ್ಲಿ ಅವು ಬರುತ್ತಿದ್ದವು. ಹಾಗೆ ಆಗುತ್ತಿದ್ದರೆ ಎಲ್ಲ ಮಾಸ ಒಂದು ಚಂದ್ರಗ್ರಹಣ ಮತ್ತು ಒಂದು ಸೂರ್ಯಗ್ರಹಣ ಆಗುತ್ತಿದ್ದವು. ವಾಸ್ತವದಲ್ಲಿ, ಎರಡು ಭ್ರಮಣಪಥಗಳ ತಲಗಳು ( Orbital Planes) ಪರಸ್ಪರ 5 ಡಿಗ್ರಿಗಳ ವ್ಯತ್ಯಾಸವನ್ನು ಹೊಂದಿವೆ. ಈ ವ್ಯತ್ಯಾಸ ಕಾರಣದಿಂದ ಒಂದು ವರ್ಷದಲ್ಲಿ ಹೆಚ್ಚೆಂದರೆ ಏಳು ಗ್ರಹಣಗಳು ಮಾತ್ರ ಉಂಟಾಗಲು ಸಾಧ್ಯತೆ ಇದೆ. (ನಾಲ್ಕೈದು ಸೂರ್ಯಗ್ರಹಣಗಳು ಮತ್ತು ಎರಡು ಮೂರು ಚಂದ್ರಗ್ರಹಣಗಳು). ಒಂದು ವರ್ಷದಲ್ಲಿ ಕಡಿಮೆಯೆಂದರೆ ಎರಡು ಸೂರ್ಯಗ್ರಹಣಗಳು ಸಂಭವಿಸುತ್ತವೆ. ಚಂದ್ರಗ್ರಹಣಕ್ಕಿಂತ ಹೆಚ್ಚು ಸೂರ್ಯಗ್ರಹಣ ಘಟಿಸುತ್ತವೆ. ಆದರೆ ಭೂಮಿಯಿಂದ ಚಂದ್ರಗ್ರಹಣ ಗೋಚರಿಸುವುದಕ್ಕಿಂತ ಕಡಿಮೆ ಸೂರ್ಯಗ್ರಹಣ ಗೋಚರವಾಗುತ್ತದೆ. ಆದ್ದರಿಂದ ಭೂಮಿಯ ಯಾವುದಾದರೂ ಒಂದು ನಿರ್ದಿಷ್ಟ ಸ್ಥಳದಲ್ಲಿ ಸೂರ್ಯಗ್ರಹಣಕ್ಕಿಂತ ಹೆಚ್ಚು ಚಂದ್ರಗ್ರಹಣ ಕಾಣಿಸುತ್ತದೆ. ಹೆಚ್ಚಿನ ವಿವರಣೆಗೆ ಖಗೋಳ ಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥಗಳನ್ನು ನೋಡಿರಿ.

ಚಂದ್ರನ ಚಲನೆ ತೀರಾ ಜಟಿಲವಾಗಿದೆ. ಚಂದ್ರನು ಭೂಮಿಯನ್ನು ಒಂದು ದೀರ್ಘ ವೃತ್ತ ಭ್ರಮಣ ಪಥದಲ್ಲಿ (Elliptic orbit) ಪ್ರದಕ್ಷಿಣೆ ಮಾಡುತ್ತದೆಂದು ಸರಿ ಸುಮಾರಾಗಿ ಕಾಣಲ್ಪಡುತ್ತದೆ. ಚಂದ್ರನು ಹೀಗೆ ಸಂಚರಿಸುವಾಗ ಭೂಮಿಯಿಂದಿರುವ ದೂರವನ್ನನುಸರಿಸಿ ಚಂದ್ರನ ಭ್ರಮಣ ವೇಗದಲ್ಲಿ ವ್ಯತ್ಯಾಸವುಂಟಾಗುತ್ತದೆ. ಚಂದ್ರ ಮತ್ತು ಭೂಮಿಯ ಮಧ್ಯೆ ದೂರವು ಅತ್ಯಂತ ಕಡಿಮೆಯಾಗಿರುವ ಬಿಂದುವನ್ನು ಪೆರಿಜೀ (Perigee) ಎಂದು ಹೇಳಲಾಗುತ್ತದೆ. ಚಂದ್ರನು ಪೆರಿಜೀಗೆ ತಲಪುವಾಗ ಅದರ ವೇಗ ಭೂಮಿಗೆ ಹೋಲಿಸಿದರೆ ಹೆಚ್ಚಾಗುತ್ತದೆ. ಸೂರ್ಯನ ಗುರುತ್ವಾಕರ್ಷಣ ಶಕ್ತಿಯ ಪರಿಣಾಮವಾಗಿ ಈ ಪೆರಿಜೀ ಸ್ಥಾನವು ಬದಲಾಗುತ್ತಲಿರುತ್ತದೆ. ಈ ಕಾರಣದಿಂದ ಚಂದ್ರನ ವೇಗ ಕೆಲವೊಮ್ಮೆ ಮಾಸದ ಆದಿಭಾಗದಲ್ಲಿ ಹೆಚ್ಚಾಗುತ್ತದೆ. ಕೆಲವೊಮ್ಮೆ ಅಂತ್ಯ ಭಾಗದಲ್ಲಿ ಹೆಚ್ಚಾಗುತ್ತದೆ. ಹೀಗೆ ಸೂರ್ಯನೊಂದಿಗಿನ ಭೂಮಿ-ಚಂದ್ರ ಜೋಡಿಯ ದೂರ ಮತ್ತು ವೇಗ ನಿರ್ದಿಷ್ಟ ಮಿತಿಯಲ್ಲಿ ಗುರುತ್ವಾಕರ್ಷಣ ಶಕ್ತಿಗನುಗುಣವಾಗಿ ಬದಲಾಗುತ್ತಲಿರುತ್ತದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

> "ಸೂರ್ಯ ಮತ್ತು ಚಂದ್ರ ಒಂದು ನಿರ್ದಿಷ್ಟ ಲೆಕ್ಕ ಪ್ರಕಾರ ಚಲಿಸುತ್ತವೆ." (55 : 6)

ದೂರ ಮತ್ತು ವೇಗದ ವ್ಯತ್ಯಾಸವನ್ನನುಸರಿಸಿ ಗ್ರಹಣಗಳ ದಿನಾಂಕಗಳಲ್ಲೂ ಬದಲಾವಣೆಯಾಗುತ್ತದೆ. ಆದ್ದರಿಂದ ಕೆಲವು ಪರಿಮಿತಿಗಳಿಗೆ ಅಧೀನವಾಗಿರುವ ತಾರೀಕುಗಳಲ್ಲಿ ಸೂರ್ಯ-ಚಂದ್ರ ಗ್ರಹಣಗಳು ಸಂಭವಿಸುತ್ತವೆ.

ಖಗೋಳಶಾಸ್ತ್ರಜ್ಞರು ಸೂರ್ಯ ಮತ್ತು ಚಂದ್ರ ಒಂದೇ ರೇಖಾಂಶದಲ್ಲಿ ಬರುವುದನ್ನು (ಸಮಾಗಮ –Conjuction) ಚಂದ್ರಮಾಸದ ಆರಂಭವಾಗಿ ಗಣಿಸುತ್ತಾರೆ. ಆಗ ಚಂದ್ರ ತೀರಾ ಕಾಣಿಸುವುದಿಲ್ಲ (ಅಂದರೆ ಅಮಾವಾಸ್ಯೆ). ಆದರೆ ಇಸ್ಲಾಮೀ ಪಂಚಾಂಗ (ಹಿಜ್‌ರಿ) ಪ್ರಕಾರ ಬಾಲಚಂದ್ರ ದರ್ಶನದಿಂದ ಚಂದ್ರಮಾಸ ಆರಂಭವಾಗುತ್ತದೆ. ಅಂದರೆ, ಬಾಲಚಂದ್ರ ನಗ್ನ ದೃಷ್ಟಿಗೆ ಗೋಚರವಾಗುವಂತಾಗಬೇಕು. ಅಮವಾಸ್ಯೆಯ ಬಳಿಕ ಸುಮಾರು 24 ಗಂಟೆಗಳ ಬಳಿಕ ಅದರ ಸಮಯವಾಗಿದೆ. ಹೆಚ್ಚಿನ ವಿವರಣೆಗಳಿಗೆ ಬಾಲಚಂದ್ರ ದರ್ಶನದ ಸಮಸ್ಯೆಗಳ ಬಗ್ಗೆ ಡಾ| ಮುಹಮ್ಮದ್ ಇಲ್ಯಾಸ್ ಬರೆದ A Modern guide to Astronomical Calculations of Islamic Calendar, Time and Qibla ಎಂಬ ಪುಸ್ತಕವನ್ನು ಓದಿರಿ.

ಹಿಜ್‌ರಿ ಚಂದ್ರಮಾಸ ಗಣನೆಯನ್ನು ಅನುಸರಿಸಿದರೆ ಚಂದ್ರಮಾಸ 13, 14, 15 ದಿನಾಂಕಗಳಂದು ಚಂದ್ರಗ್ರಹಣ ಮತ್ತು 27, 28, 29 ದಿನಾಂಕಗಳಂದು ಸೂರ್ಯಗ್ರಹಣ ಉಂಟಾಗುತ್ತದೆ. ಭವಿಷ್ಯವಾಣಿಯ ಪ್ರಕಾರ ಮೇಲೆ ಹೇಳಿದ ದಿನಾಂಕಗಳಲ್ಲಿ ಪ್ರಥಮ ರಾತ್ರಿಯಂದು ಚಂದ್ರಗ್ರಹಣ ಮತ್ತು ಮಧ್ಯದ ಹಗಲು ಸೂರ್ಯಗ್ರಹಣ ಸಂಭವಿಸ ಬೇಕಾಗಿದೆ. ಇದರ ಪ್ರಕಾರ ರಮಝಾನ್ ಮಾಸದ 13ನೇ ರಾತ್ರಿಯಂದು ಚಂದ್ರಗ್ರಹಣ ಮತ್ತು 28ನೇ ಹಗಲಿನಂದು ಸೂರ್ಯಗ್ರಹಣ ಉಂಟಾಗುವುದೆಂದು ನಿರ್ಣಯಿಸಲ್ಪಡುತ್ತದೆ.

ಈ ಹದೀಸಿನಲ್ಲಿ ಚಂದ್ರನ ಕುರಿತು 'ಖಮರ್' ಎಂಬ ಪದ ಪ್ರಯೋಗಿಸಲ್ಪಟ್ಟಿದೆ. 1, 2, 3 ರಾತ್ರಿಗಳ ಬಾಲಚಂದ್ರನನ್ನು 'ಹಿಲಾಲ್' ಎಂದು ಕರೆಯಲಾಗುತ್ತದೆ. 4ನೇ ರಾತ್ರಿಯ ಬಳಿಕದ ವೃದ್ಧಿಚಂದ್ರನನ್ನು 'ಖಮರ್' ಎಂದು ಹೇಳಲಾಗುತ್ತದೆ. (ಅಖ್‌ರಬುಲ್ ಮವಾರಿದ್, ಸಂಪುಟ 2). ಆದ್ದರಿಂದ, ರಮಝಾನಿನ ಪ್ರಥಮ ರಾತ್ರಿ ಎಂಬುದರ ಅರ್ಥ 13ನೇ ರಾತ್ರಿಯಾಗಿದೆ. ಹಾಗಲ್ಲದೆ ಮಾಸಾರಂಭದ ಪ್ರಥಮ ರಾತ್ರಿಯಲ್ಲ. ಹದೀಸಿನಲ್ಲಿ ಪ್ರಯುಕ್ತವಾದ 'ಖಮರ್' ಎಂಬ ಪದವು ಈ ವಾಸ್ತವಾಂಶವನ್ನು ಅಸಂದಿಗ್ಧವಾಗಿ ಪ್ರಕಟಪಡಿಸುತ್ತದೆ.

### ವಾಗ್ದತ್ತ ಮಸೀಹರ ಆಗಮನ ಮತ್ತು ಭವಿಷ್ಯ ವಾಣಿಯ ಈಡೇರಿಕೆ

ಹದೀಸಿನಲ್ಲಿ ಹೇಳಲಾದ ಭವಿಷ್ಯವಾಣಿ ಯಾವ ರೀತಿಯಲ್ಲಿ ಈಡೇರಿತೆಂದು ನೋಡೋಣ.

ಭಾರತದ ಖಾದಿಯಾನ್ ಎಂಬಲ್ಲಿ ಕ್ರಿಸ್ತಶಕ 1835ರಲ್ಲಿ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರು ಜನ್ಮತಾಳಿದರು. ಅವರು ಅಸಾಮಾನ್ಯವಾದ ಸಜ್ಜನಿಕೆಯ ಮಾದರಿಯಾಗಿದ್ದರು. ಮುಹಮ್ಮದ್ ಪೈಗಂಬರರ ಮೇಲೆ ಅತಿಯಾದ ಪ್ರೀತಿಯು ಅವರ ವ್ಯಕ್ತಿತ್ವದ ವೈಶಿಷ್ಟ್ಯವಾಗಿತ್ತು. ಇಸ್ಲಾಮಿನ ವಿರುದ್ಧ ಅದರ ವಿಮರ್ಶಕರ ಆಕ್ರಮಣ ಮತ್ತು ಮುಸ್ಲಿಮರ ನಿಕೃಷ್ಟವಾದ ಆಧ್ಯಾತ್ಮಿಕ ಸ್ಥಿತಿಯನ್ನು ಕಂಡು ಅವರು ವ್ಯಥೆಗೊಂಡರು. ಇಸ್ಲಾಂ ಧರ್ಮದ ಸೇವೆಗಾಗಿ ಅವರು ತನ್ನನ್ನು ಸಮರ್ಪಿಸಿಕೊಂಡು, ಲೋಕದ ಆಧ್ಯಾತ್ಮಿಕ ಪುನರುತ್ಥಾನಕ್ಕಾಗಿ ಅತಿ ಮನನೊಂದು ಪ್ರಾರ್ಥಿಸುತ್ತಲಿದ್ದರು. ಅವರ ವಿಶ್ರುತ "ಬರಾಹೀನೆ ಅಹ್ಮದಿಯಾ" ಎಂಬ ಕೃತಿಯು 1880ರಿಂದ 1884ರ ವರೆಗಿನ ಕಾಲದಲ್ಲಿ ನಾಲ್ಕು ಸಂಪುಟಗಳಾಗಿ ಪ್ರಕಾಶಿತವಾಯಿತು. ಇಸ್ಲಾಮಿನ ಸತ್ಯತೆ, ಪವಿತ್ರ ಖುರ್‌ಆನ್ ಮತ್ತು ಮುಹಮ್ಮದ್ ಪೈಗಂಬರರ ವೈಶಿಷ್ಟ್ಯಗಳ ಬಗ್ಗೆ ಈ ಪ್ರಸಿದ್ಧ ಗ್ರಂಥದಲ್ಲಿ ಪ್ರತಿಪಾದಿಸಲಾಗಿದೆ.

ಹಝ್ರತ್ ಅಹ್ಮದ್ (ಅ) 1876ರಿಂದ ಅವರ ನಿಧನದ ವರೆಗೆ (1908) ದೈವಿಕ ಪ್ರಕಟನೆಗಳಿಂದ ಅನುಗ್ರಹೀತರಾಗಿದ್ದರು. ತನ್ನನ್ನು ಆಧ್ಯಾತ್ಮಿಕ ಸುಧಾರಕನ್ನಾಗಿ ಅಲ್ಲಾಹನು ನಿಯೋಜಿಸಿದ ಬಗ್ಗೆ 1882ರಲ್ಲಿ ಅವರಿಗೆ ಹೀಗೆ ಅಲ್ಲಾಹನು ಅರುಹಿದನು:

> "ಓ ಅಹ್ಮದ್, ಅಲ್ಲಾಹನು ನಿನ್ನನ್ನು ಅನುಗ್ರಹಿಸಿದ್ದಾನೆ. ನೀನು ಏನನ್ನು ಬಿಸಾಡಿದ್ದೀಯೋ ಅದು ನೀನು ಬಿಸಾಡಿದ್ದಲ್ಲ; ಅಲ್ಲಾಹನು ಬಿಸಾಡಿದ್ದು. ಯಾರ ಪೂರ್ವಜರಿಗೆ ಮುನ್ನೆಚ್ಚರಿಕೆ ನೀಡಲ್ಪಟ್ಟಿರಲಿಲ್ಲವೋ ಅವರನ್ನು ಎಚ್ಚರಿಸಲಿಕ್ಕೆ ಮತ್ತು ದಾರಿ ತಪ್ಪಿದವರ ಸ್ಥಿತಿಯನ್ನು ಪ್ರಕಟಗೊಳಿಸಲಿಕ್ಕೆ ಕಾರುಣ್ಯನಿಧಿಯು (ಅಲ್ಲಾಹನು) ನಿನಗೆ ಖುರ್‌ಆನನ್ನು ಕಲಿಸಿದ್ದಾನೆ. 'ನಾನು ದೇವನಿಯುಕ್ತನು ಹಾಗೂ ಸತ್ಯ ವಿಶ್ವಾಸಿಗಳಲ್ಲಿ ಮೊದಲಿಗನು' ಎಂದು ನೀನು ಘೋಷಿಸು." (ಬರಾಹೀನೆ ಅಹ್ಮದಿಯಾ, ಸಂಪುಟ 3)

ಅವರಿಗೆ ಈ ರೀತಿಯಲ್ಲೂ ದೈವಿಕ ಪ್ರಕಾಶನವಾಗಿತ್ತು:

> "ಅವರೊಡನೆ ಹೇಳು - ನನ್ನೊಂದಿಗೆ ಅಲ್ಲಾಹನಿಂದ ಸಾಕ್ಷ್ಯವಿದೆ; ಆಗ ನೀವು ನಂಬುವಿರೋ? ಅವರೊಡನೆ ಹೇಳು- ನನ್ನೊಂದಿಗೆ ಅಲ್ಲಾಹನಿಂದ ಸಾಕ್ಷ್ಯವಿದೆ; ಆಗ ನೀವು ಶರಣಾಗುವಿರೋ?" (ಬರಾಹೀನೆ ಅಹ್ಮದಿಯಾ – ಸಂಪುಟ 3)

ದೇವಾಜ್ಞೆಯನುಸಾರ, ತಾನು ಹಿಜ್‌ರಿ 14ನೇ ಶತಮಾನದ ಮುಜದ್ದಿದ್ (ಧರ್ಮ ಸುಧಾರಕ) ಎಂದು ಅವರು ಘೋಷಿಸಿದರು. ಅಲ್ಲಾಹನ ನಿರ್ದೇಶನದಂತೆ ಅವರು ಅನಂತರ 1889 ಮಾರ್ಚ್ 23ರಂದು ಲುಧಿಯಾನದಲ್ಲಿ ತನ್ನ ಶಿಷ್ಯರಿಂದ ಮೊತ್ತ ಮೊದಲಿಗೆ "ಬೈಅತ್" (ನಿಷ್ಠಾ ಪ್ರತಿಜ್ಞೆ) ಸ್ವೀಕರಿಸಿಕೊಂಡು ಅಹ್ಮದಿಯಾ ಜಮಾಅತನ್ನು ಸ್ಥಾಪಿಸಿದರು. ಅಹ್ಮದಿಯಾ ಜಮಾಅತಿನ ಪ್ರಥಮ ಖಲೀಫ ಹಝ್ರತ್ ಅಲ್‌ಹಾಜ್ ಹಾಫಿಝ್ ಮೌಲ್ವಿ ಹಕೀಂ ನೂರುದ್ದೀನ್ (ರ.) ಅವರು ಬೈಅತ್ ಪ್ರತಿಜ್ಞೆ ಮಾಡಿದ ಶಿಷ್ಯರಲ್ಲಿ ಪ್ರಥಮರಾಗಿದ್ದರು. ಅನಂತರ ಅದೇ ದಿನದಂದು 40 ಮಂದಿ ಬೈಅತ್ ಪ್ರತಿಜ್ಞೆ ಮಾಡಿದರು. ತಾವು ಲೌಕಿಕ ಕಾರ್ಯಗಳಿಗಿಂತ ಧಾರ್ಮಿಕ ಕಾರ್ಯಗಳಿಗೆ ಪ್ರಾಶಸ್ತ್ಯ ನೀಡುವೆವು ಎಂದು ಅವರು ವಚನಕೊಟ್ಟರು.

ಪ್ರವಾದಿ ಈಸಾ (ಯೇಸುಕ್ರಿಸ್ತರು) ಮೃತಪಟ್ಟಿರುವರೆಂದೂ ಹಝ್ರತ್ ಈಸಾರ ಪುನರಾಗಮನ ಕುರಿತುಳ್ಳ ಭವಿಷ್ಯ ನುಡಿ ಅವರ ಹೋಲಿಕೆ ಇರುವ ವಾಗ್ದತ್ತ ಮಸೀಹ್ ಮೂಲಕ ಈಡೇರುವುದೆಂದೂ ಹಝ್ರತ್ ಅಹ್ಮದ್‌ರಿಗೆ ಅಲ್ಲಾಹನು ಕ್ರಿ.ಶ. 1890ರ ಕೊನೆಯಲ್ಲಿ ತಿಳಿಯಪಡಿಸಿದನು. ಈ ಬಗ್ಗೆ ಅವರಿಗೆ ಲಭಿಸಿದ ದೈವೀ ಪ್ರಕಾಶನದ ಪೈಕಿ ಒಂದು ಹೀಗಿತ್ತು:

> "ಮರ್ಯಮ್‌ರ ಪುತ್ರ ಈಸಾ ಮೃತಪಟ್ಟಿದ್ದಾರೆ. ಅವರ ಲಕ್ಷಣಗಳು ವಾಗ್ದಾನ ಪ್ರಕಾರ ನಿನ್ನಲ್ಲಿ ಈಡೇರಿವೆ. ಅಲ್ಲಾಹನ ವಾಗ್ದಾನಗಳು ಖಂಡಿತವಾಗಿಯೂ ಈಡೇರುತ್ತವೆ." (ತದ್‌ಕಿರ)

ಅಲ್ಲಾಹನಿಂದ ಈ ವಿವರಣೆ ಲಭಿಸಿದ ಬಳಿಕ ಮುಹಮ್ಮದ್ ಪೈಗಂಬರರು ಭವಿಷ್ಯ ನುಡಿದ ವಾಗ್ದತ್ತ ಮಸೀಹ್ ಮತ್ತು ಮಹ್‌ದಿ ತಾನೆಂದು ಹಝ್ರತ್ ಅಹ್ಮದ್ (ಅ.) ವಾದಿಸಿದರು. ತನ್ನ ವಾದಕ್ಕೆ ಸಾಕ್ಷ್ಯಾಧಾರಗಳನ್ನು ನೀಡುತ್ತಾ ಗ್ರಂಥಗಳನ್ನು ರಚಿಸಿದರು. 'ಫತ್‌ಹೆ ಇಸ್ಲಾಂ' (ಇಸ್ಲಾಮಿನ ವಿಜಯ), 'ತೌಝಿಹೆ ಮರಾಂ' (ಲಕ್ಷ್ಯಗಳ ವಿವರಣೆ), 'ಇಝಾಲೆ ಔಹಾಂ' (ಸಂದೇಹ ನಿವಾರಣೆ) ಎಂಬೀ ಗ್ರಂಥಗಳು ಆ ಪೈಕಿ ಕೆಲವು. ಜನರಿಗೆ ಆಧ್ಯಾತ್ಮಿಕ ಜೀವನವನ್ನು ನೀಡಲಿಕ್ಕೆ ಅಲ್ಲಾಹನು ತನ್ನನ್ನು ನಿಯೋಜಿಸಿದ್ದಾನೆಂದು ಅವರು ಸಾರಿದರು. ಧರ್ಮ ಪಂಡಿತರು ಅವರ ವಾದವನ್ನು ತಿರಸ್ಕರಿಸಿದರು. ಹಾಗೆ ವಿರೋಧದ ಮಹಾ ಬಿರುಗಾಳಿ ಬೀಸತೊಡಗಿತು.

ಹಝ್ರತ್ ಅಹ್ಮದ್‌ರವರು 1894ರಲ್ಲಿ ಅರಬಿ ಭಾಷೆಯಲ್ಲಿ ರಚಿಸಿದ 'ನೂರುಲ್ ಹಕ್' (ಸತ್ಯದ ಪ್ರಕಾಶ) ಎಂಬ ಗ್ರಂಥದಲ್ಲಿ ಹೀಗೆ ದೈನ್ಯದಿಂದ ಅಲ್ಲಾಹನಿಗೆ ಮೊರೆಯಿಟ್ಟರು:

> "ಓ ದೇವಾ, ನಾನು ನಿನ್ನಿಂದಿರುವವನಲ್ಲವೇ? ಶಾಪ ಮತ್ತು ತಿರಸ್ಕಾರ ಅತಿ ಹೆಚ್ಚಾಗಿವೆ. ನಮ್ಮ ಮತ್ತು ನಮ್ಮ ಜನರ ಮಧ್ಯೆ ನೀನು ತೀರ್ಮಾನ ಮಾಡು. ನೀನೇ ಅತ್ಯುತ್ತಮ ತೀರ್ಪುಗಾರ. ಓ ದೇವಾ, ಆಕಾಶದಿಂದ ನೀನು ನಿನ್ನ ಸಹಾಯಕ ದಳವನ್ನು ಕಳುಹಿಸಿ, ಈ ಆಪತ್ಕಾಲದಲ್ಲಿ ನಿನ್ನ ಸೇವಕನಿಗೆ ನೆರವು ನೀಡು. ನಾನೊಬ್ಬ ಬಲಹೀನನಂತೆ ಅಪಮಾನಿತನಾಗಿರುವೆನು. ಜನರು ನನ್ನನ್ನು ತಿರಸ್ಕರಿಸಿ ದೂಷಿಸುತ್ತಾನೆ. ಬದ್ರ್ ದಿನದಂದು ನೀನು ಮುಹಮ್ಮದ್ ಪೈಗಂಬರ್ (ಸ.) ರವರಿಗೆ ನೆರವಿತ್ತ ಪ್ರಕಾರ ನೀನು ನನ್ನ ಸಹಾಯಕ್ಕೆ ಬಾ. ಎಲೈ ಅತ್ಯುತ್ತಮನಾದ ರಕ್ಷಕನೆ, ನೀನು ನಮ್ಮನ್ನು ರಕ್ಷಿಸು. ನೀನೇ ಪ್ರಭುವು; ಕಾರುಣ್ಯನಿಧಿ. ನಿನ್ನ ಕರುಣೆಯ ಒಂದಂಶವನ್ನು ನಮಗೆ ದಯಪಾಲಿಸು. ನಮ್ಮ ಮೇಲೆ ಕನಿಕರ ತೋರಿಸು. ನೀನೇ ಅತ್ಯಂತ ಕಾರುಣ್ಯವಂತನಾಗಿರುವೆ." (ರೂಹಾನಿ ಖಝಾಯಿನ್, ಸಂಪುಟ 8, ಪುಟ 6)

ಅವರ ವಿರುದ್ಧವಾಗಿ ಎತ್ತಲಾದ ಆಕ್ಷೇಪಗಳ ಪೈಕಿ ಒಂದು, ಸೂರ್ಯ ಚಂದ್ರ ಗ್ರಹಣಗಳಿಗೆ ಸಂಬಂಧಿಸಿದ ಭವಿಷ್ಯವಾಣಿ ಈಡೇರಲಿಲ್ಲ ಎಂದಾಗಿತ್ತು. ಮುಹಮ್ಮದ್ ಪೈಗಂಬರರ ಮಹತ್ತರವಾದ ಭವಿಷ್ಯವಾಣಿಯ

ಪ್ರಕಾರ ಸೂರ್ಯಚಂದ್ರ ಗ್ರಹಣ ಗಳು ಹಿಜ್‌ರ 1311 (ಕ್ರಿ.ಶ. 1894)ರಲ್ಲಿ ನಿಶ್ಚಿತ ದಿವಸಗಳಲ್ಲಿ ಖಾದಿಯಾನಿನ ಮೇಲೆ ಗೋಚರವಾಗಿ, ಅಲ್ಲಾಹನು ಜ್ಯೋತಿರ್ಮಂಡಲಗಳ ದಿವ್ಯ ದೃಷ್ಟಾಂತಗಳನ್ನು ಪ್ರಕಟಿಸಿದನು. ರಮಝಾನ್ 13ರಂದು ರಾತ್ರಿ ಚಂದ್ರಗ್ರಹಣ (ಮಾರ್ಚ್ 21) ಮತ್ತು ರಮಝಾನ್ 28 ರಂದು (ಎಪ್ರಿಲ್ 6) ಸೂರ್ಯಗ್ರಹಣ ಸಂಭವಿಸಿದವು. ಪಂಚಾಂಗಗಳಲ್ಲಿ ಮಾತ್ರವಲ್ಲ, ಈ ಗ್ರಹಣಗಳ ಬಗ್ಗೆ ಭಾರತದ 'ಆಝಾದ್', 'ಸಿವಿಲ್ ಆ್ಯಂಡ್ ಮಿಲಿಟರಿ ಗಝೆಟ್' ಇತ್ಯಾದಿ ಪ್ರಮುಖ ಪತ್ರಿಕೆಗಳಲ್ಲಿ ಸಹ ವಾರ್ತೆ ಪ್ರಕಟಿಸಲ್ಪಟ್ಟಿತು. ಓಪ್ಪೊಲ್ಝರ್ ಬರೆದ 'ಗ್ರಹಣದ ಸಾಮಾನ್ಯ ನಿಯಮ' (Canon of Eclipses by Oppolzer) ಎಂಬ ಪುಸ್ತಕದಲ್ಲೂ 1894ರಲ್ಲಿ ಪ್ರಕಟಿಸಲ್ಪಟ್ಟ 'ನಾವಿಕ ಪಂಚಾಂಗ' Nautical Almanic, London) ದಲ್ಲೂ ಈ ಬಗ್ಗೆ ದಾಖಲೆ ಇದೆ. ಚಂದ್ರನ ಸ್ಥಾನದ ಆಧಾರದಿಂದ ಮಾಡಿದ ಲೆಕ್ಕಾಚಾರದಲ್ಲಿ ರಮಝಾನಿನ 13ನೇ ಮತ್ತು 28ನೇ ದಿನಾಂಕಗಳಲ್ಲಿ ಸೂರ್ಯ ಚಂದ್ರ ಗ್ರಹಣಗಳು ಸಂಭವಿಸಿವೆಯೆಂದು ಸ್ಪಷ್ಟವಾಗುತ್ತದೆ.

### ಹಿಜ್‌ರ 1311 ರಮಝಾನ್ ಮಾಸದಲ್ಲಿ (ಕ್ರಿ.ಶ. 1894 ಮಾರ್ಚ್-ಎಪ್ರಿಲ್) ಸಂಭವಿಸಿದ ಗ್ರಹಣಗಳ ವೈಶಿಷ್ಟ್ಯಗಳು

ಆಕಾಶದಲ್ಲಿ ಅದ್ಭುತಕರವಾದ ದೃಷ್ಟಾಂತಗಳು ಗೋಚರಿಸಿದ ಬಳಿಕ ವಾಗ್ದತ್ತ ಮಸೀಹ್‌ರವರು ಮುಹಮ್ಮದ್ ಪೈಗಂಬರ್ (ಸ.)ರವರ ಮಹತ್ತರವಾದ ಈ ಭವಿಷ್ಯವಾಣಿ ಯಥಾವತ್ತಾಗಿ ಈಡೇರಿದ ಬಗ್ಗೆ 'ನೂರುಲ್‌ಹಖ್' (ಸತ್ಯದ ಪ್ರಕಾಶ) ಎಂಬ ತನ್ನ ಗ್ರಂಥದಲ್ಲಿ ಕೂಲಂಕಷವಾಗಿ ತಿಳಿಯಪಡಿಸಿದರು. ಮಹ್‌ದಿಯ ಆಗಮನ ಕಾಲದಲ್ಲಿ ಸಂಭವಿಸುವ ಗ್ರಹಣಕ್ಕೆ ಸಂಬಂಧಿಸಿದ ಈ ಹದೀಸನ್ನು ದೈವಿಕ ಪ್ರಕಟಣೆಯ ಆಧಾರದಲ್ಲಿ ಈ ಗ್ರಂಥದಲ್ಲಿ ಹಝ್ರತ್ ಅಹ್ಮದ್ (ಅ)ರವರು ವ್ಯಾಖ್ಯಾನಿಸಿದರು. ಚಂದ್ರಗ್ರಹಣ ಸಂಭವಿಸಲು ಸಾಧ್ಯತೆ ಇರುವ ಮೂರು ರಾತ್ರಿಗಳಲ್ಲಿ ಪ್ರಥಮ ರಾತ್ರಿ ಚಂದ್ರಗ್ರಹಣ ಮತ್ತು ಸೂರ್ಯಗ್ರಹಣ ಸಂಭವಿಸಲು ಸಾಧ್ಯತೆ ಇರುವ ಮೂರು ಹಗಲುಗಳಲ್ಲಿ ಮಧ್ಯದ ಹಗಲು ಸೂರ್ಯಗ್ರಹಣ ಸಂಭವಿಸುವುದು ಎಂಬುದು ಈ ಹದೀಸಿನ ತಾತ್ಪರ್ಯವೆಂದು ಅವರು ವಿವರಿಸಿದರು. ಅಂದರೆ, ರಮಝಾನ್ 13ರಂದು ರಾತ್ರಿ ಚಂದ್ರಗ್ರಹಣ ಮತ್ತು 28 ರಂದು ಹಗಲು ಸೂರ್ಯಗ್ರಹಣ ಸಂಭವಿಸುವುವೆಂದು.

ಅದ್ಭುತಕರ ದೃಷ್ಟಾಂತವಾದ ಈ ಗ್ರಹಣಗಳ ವೈಶಿಷ್ಟ್ಯಗಳ ಕಡೆಗೆ ವಾಗ್ದತ್ತ ಮಸೀಹ್ (ಅ) ರವರು ನಮ್ಮ ಗಮನವನ್ನು ಸೆಳೆದರು. 'ಪ್ರಥಮದ' ಮತ್ತು 'ಮಧ್ಯದ' ಎಂಬ ಹದೀಸಿನ ಪ್ರಯೋಗ ಎರಡು ವಿಧದಲ್ಲಿ ಈಡೇರಿತು - ದಿನಾಂಕ ಮತ್ತು ಕಾಲಕ್ಕೆ ಸಂಬಂಧಿಸಿ. ಮೂರು ರಾತ್ರಿಗಳಲ್ಲಿ ಪ್ರಥಮ ರಾತ್ರಿಯಂದು ಚಂದ್ರಗ್ರಹಣ ಸಂಭವಿಸಿತು. ಮಾತ್ರವಲ್ಲ, ರಾತ್ರಿಯ ಪ್ರಥಮ ಜಾವದಲ್ಲೇ ಖಾದಿಯಾನಿನಲ್ಲಿ ಅದು ಗೋಚರಿಸಿತು. ಅದೇ ಪ್ರಕಾರ, ಸೂರ್ಯಗ್ರಹಣ ಸಂಭವಿಸುವಂಥ ಮೂರು ಹಗಲುಗಳಲ್ಲಿ ಮಧ್ಯದ ಹಗಲು ಅದು ಸಂಭವಿಸಿತು. ಮಾತ್ರವಲ್ಲ, ಪೂರ್ವಾಹ್ನದಲ್ಲೇ ಅದು ಖಾದಿಯಾನಿನಲ್ಲಿ ಗೋಚರಿಸಲ್ಪಟ್ಟಿತು. ಅದು ಪ್ರಭಾತ ಹೊತ್ತಿನಲ್ಲಿ ಗೋಚರವಾಗಲಿಲ್ಲ. ಮಧ್ಯಾಹ್ನಕ್ಕೆ ಸ್ವಲ್ಪ ಮುಂಚೆ ಅದು ಖಾದಿಯಾನಿನಲ್ಲಿ ಗೋಚರಿಸಿತು. ಹದೀಸಿನಲ್ಲಿ ಪ್ರಯೋಗಿಸಲ್ಪಟ್ಟ 'ನಿಸ್ಫ್' ಎಂಬ ಪದಕ್ಕೆ ಅರ್ಧ ಎಂದರ್ಥ. 'ಕಲ್ಕತ್ತಾ ಸ್ಟೇಂಡರ್ಡ್ ಟೈಂ' ಪ್ರಕಾರ ಚಂದ್ರಗ್ರಹಣ ಸಂಜೆ 7 ಮತ್ತು 9.30ರ ಮಧ್ಯೆ ಹಾಗೂ ಸೂರ್ಯಗ್ರಹಣ ಪೂರ್ವಾಹ್ನ ಗಂಟೆ 9 ಮತ್ತು 11ರ ಮಧ್ಯದಲ್ಲಿ ಸಂಭವಿಸಿದವು.

ದೈವೀ ಪ್ರಕಾಶನದ ಸಹಾಯದಿಂದ ಹಝ್ರತ್ ಅಹ್ಮದ್ (ಅ) ರವರು ಈ ಹದೀಸಿನ ಅತಿ ಗಹನವಾದ ಅರ್ಥಗಳನ್ನು ವ್ಯಾಖ್ಯಾನಿಸಿದರು:

> "ಚಂದ್ರಗ್ರಹಣ ರಮಝಾನಿನ ಪ್ರಥಮ ರಾತ್ರಿಯಲ್ಲಿ ಸಂಭವಿಸುವುದು ಎಂದು ಹೇಳಿದುದರಲ್ಲಿ 'ಪೌರ್ಣಮಾಸಿಗಳು' ಎಂದು ಕರೆಯಲ್ಪಡುವ ಮೂರು ಪೂರ್ಣಚಂದ್ರ ರಾತ್ರಿಗಳಲ್ಲಿ ಪ್ರಥಮ ರಾತ್ರಿಯ ಆರಂಭದಲ್ಲೇ ಗ್ರಹಣ ಸಂಭವಿಸುವುದೆಂಬ ಸೂಚನೆ ಅಡಕವಾಗಿದೆ- ರಾತ್ರಿಯ ಕೊನೆಯ ಜಾವಗಳಲ್ಲಿ ಅಲ್ಲ. ಪ್ರಾಜ್ಞರಿಗೆ ಈ ವಿಚಾರ ಸುಲಭಗ್ರಾಹ್ಯವಾಗಿದೆ. ಈ ದೇಶದ ಅನೇಕ ಮಂದಿ ಈ ಚಂದ್ರ ಗ್ರಹಣಕ್ಕೆ ದೃತ್‌ಸಾಕ್ಷಿಗಳಾಗಿದ್ದಾರೆ." (ನೂರುಲ್ ಹಖ್ – ಸಂಪುಟ 2)
>
> ಸೂರ್ಯಗ್ರಹಣದ ಬಗ್ಗೆ ಅವರು ಬರೆದರು:
>
> "ಸೂರ್ಯಗ್ರಹಣ ಮಧ್ಯದಲ್ಲಿ ಸಂಭವಿಸುವುದೆಂದು ಹೇಳಿದುದರ ಅರ್ಥ ಸೂರ್ಯಗ್ರಹಣವು ಸಂಭವಿಸುವ ದಿನಗಳನ್ನು ಎರಡು ಭಾಗಗಳನ್ನಾಗಿ ಮಾಡಿದರೆ, ಎರಡನೆಯ ದಿನದಂದು ಸೂರ್ಯಗ್ರಹಣ ಸಂಭವಿಸುವುದು ಹಾಗೂ ಅದು ಪ್ರಥಮದ ಅರ್ಧ ಭಾಗವನ್ನು ದಾಟಿ ಹೋಗದು ಎಂದಾಗಿದೆ. ಅಂದರೆ ಎರಡನೆ ದಿನದ ಮಧ್ಯಾಹ್ನವನ್ನು ಮೀರಿ ಹೋಗದು. ಏಕೆಂದರೆ ಮಧ್ಯಾಹ್ನವು ಅರ್ಧಭಾಗದ ಮಿತಿಯಾಗಿದೆ. ಅಂದರೆ, ಅಲ್ಲಾಹನು ನಿರ್ಣಯಿಸಿದ ಪ್ರಕಾರ ಚಂದ್ರಗ್ರಹಣ ಸಂಭವಿಸುವಂಥ ಮೂರು ರಾತ್ರಿಗಳ ಪೈಕಿ ಪ್ರಥಮ ರಾತ್ರಿಯಂದು ಚಂದ್ರಗ್ರಹಣವೂ ಸೂರ್ಯಗ್ರಹಣ ಸಂಭವಿಸುವಂಥ ಮೂರು ಹಗಲುಗಳ ಪೈಕಿ ಮಧ್ಯದ ಹಗಲು ಸೂರ್ಯಗ್ರಹಣವೂ ಭವಿಷ್ಯವಾಣಿಯನುಸಾರ ಸಂಭವಿಸಿದವು. ಲೋಕೋದ್ಧಾರಕ್ಕಾಗಿ ನಿಯೋಜಿಸಲ್ಪಡುವ ಅಲ್ಲಾಹನ ವರಿಷ್ಠದಾಸರಿಗೆ ಹೊರತು ಪರೋಕ್ಷಜ್ಞಾನವನ್ನು ಅವನು ಬಹಿರಂಗಪಡಿಸುವುದಿಲ್ಲ. ಒಟ್ಟಾರೆ, ಈ ಹದೀಸ್ ಅಲ್ಲಾಹನ ಪ್ರವಾದಿಯದ್ದೆಂಬುದರಲ್ಲಿ ಯಾವುದೇ ಸಂದೇಹವಿಲ್ಲ." (ನೂರುಲ್ ಹಖ್ – ಸಂಪುಟ 2)

ಅಲ್ಲಾಹನ ಅನುಗ್ರಹದಿಂದ ಈ ವಿಷಯದ ಬಗ್ಗೆ ನಾನು ಅಧ್ಯಯನ ಮಾಡುತ್ತಿದ್ದಾಗ ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್‌ರವರ ಅಮೂಲ್ಯವಾದ ಪ್ರೋತ್ಸಾಹ, ಶ್ರದ್ಧೆ ಮತ್ತು ಪ್ರಾರ್ಥನೆ ನನಗೆ ಲಭ್ಯವಾದವು. ಲಂಡನಿನಲ್ಲಿ ಅವರೊಡನೆ ಸಂಭಾಷಣೆ ಮಾಡುತ್ತಿದ್ದಾಗ, "ನಿಸ್ಫ್ ಮಿನ್‌ಹು ಎಂಬ ಪದಗಳು ಎರಡು ರೀತಿಯಲ್ಲಿ ಈಡೇರಿವೆ- ದಿನಾಂಕ ಮತ್ತು ಸಮಯಕ್ಕೆ ಸಂಬಂಧಿಸಿದಂತೆ" ಎಂದು ನಾನು ಹೇಳಿದೆ. ಆಗ ಅವರು, ಮೂರನೆಯ ರೀತಿಯಲ್ಲೂ ಈ ಭವಿಷ್ಯ ನುಡಿ ಈಡೇರಿದೆ ಎಂದು ಹೇಳಿದರು. ಎಂದರೆ, ಈ ಗ್ರಹಣಗಳು ಭೂಮಿಯ ಒಂದು ಅರ್ಧಗೋಳದಲ್ಲಿಯೇ ಗೋಚರವಾದುವು. ಈ ಭವಿಷ್ಯ ನುಡಿ ಮುಹಮ್ಮದ್ ಪೈಗಂಬರ್(ಸ)ರವರ ಮಹತ್ವವನ್ನು ತೋರಿಸುತ್ತದೆ ಹಾಗೂ ವಾಗ್ದತ್ತ ಮಸೀಹ್ (ಅ)ರವರ ಸತ್ಯತೆಗೆ ಸಾಕ್ಷಿಯಾಗಿದೆ ಎಂದು ಸಹ ಅವರು ನುಡಿದರು.

ಮೇಲೆ ಹೇಳಿದಂತೆ, ಪವಿತ್ರ ಖುರ್‌ಆನ್ ಸಹ ಚಂದ್ರಗ್ರಹಣ ಮತ್ತು ಸೂರ್ಯ ಗ್ರಹಣದ ಬಗ್ಗೆ ಪ್ರತಿಪಾದಿಸಿದೆ. ಖುರ್‌ಆನಿನಲ್ಲಿ ಚಂದ್ರಗ್ರಹಣಕ್ಕೆ 'ಕಸಫ್' ಎಂಬ ಪದ ಪ್ರಯೋಗಿಸಲ್ಪಟ್ಟಿದೆ. ಸೂರ್ಯಗ್ರಹಣಕ್ಕೆ 'ಕಸಫ್' ಎಂಬ ಪದ ಪ್ರಯೋಗಿಸಲ್ಪಟ್ಟಿಲ್ಲ. ಬದಲಿಗೆ ಸೂರ್ಯ ಮತ್ತು ಚಂದ್ರ ಒಂದುಗೂಡಿಸಲ್ಪಡುವುವು ಎಂಬ ಅರ್ಥ ಬರುವ ಪದ ಪ್ರಯೋಗಿಸಲ್ಪಟ್ಟಿರುತ್ತದೆ. ಇದನ್ನು ವ್ಯಾಖ್ಯಾನಿಸುತ್ತಾ ವಾಗ್ದತ್ತ ಮಸೀಹ್‌ರವರು ಹೀಗೆ ಹೇಳಿದರು:

> "ಖುರ್‌ಆನ್ ಸೂರ್ಯಗ್ರಹಣವನ್ನು ವಿವರಿಸಲು 'ಕಸೂಫ್' ಎಂಬ ಪದ ಪ್ರಯೋಗಿಸದೆ ಇದ್ದದ್ದು ಬೇರೊಂದು ವಿಚಾರದ ಬಗ್ಗೆ ಸೂಚನೆ ನೀಡುತ್ತದೆ. ಅಂದರೆ, ಚಂದ್ರಗ್ರಹಣದ ಬಳಿಕ ಸಂಭವಿಸಿದ ಈ ಸೂರ್ಯಗ್ರಹಣ ಅಸಾಮಾನ್ಯವೂ ಅಪೂರ್ವವೂ ಆಗಿದೆ. ನೀವು ಈ ಬಗ್ಗೆ ದೃಕ್‌ಸಾಕ್ಷಿಗಳನ್ನು ಹುಡುಕುವುದಾದರೆ ಅಥವಾ ನಿರೀಕ್ಷಕರ ಅಭಿಪ್ರಾಯವನ್ನು ಅರಸುವುದಾದರೆ, ವಿಚಿತ್ರವೂ ಅಸಾಧಾರಣವೂ ಆದ ವೈಶಿಷ್ಟ್ಯಗಳು ಈ ಗ್ರಹಣಕ್ಕೆ ಇದ್ದುದಾಗಿ ಕಾಣಬಹುದು. 'ಪಯನೀರ್' (Pioneer), 'ಸಿವಿಲ್ ಆ್ಯಂಡ್ ಮಿಲಿಟರಿ ಗಝೆಟ್' (Civil and Military Gazette) ಎಂಬ ಪತ್ರಿಕೆಗಳಲ್ಲಿ ಇದು ವರದಿಯಾಗಿದೆ. 1894 ಮಾರ್ಚ್‌ನಲ್ಲಿ ಈ ಎರಡು ಪತ್ರಿಕೆಗಳೂ ಈ ವಾರ್ತೆಯನ್ನು ಪ್ರಕಟಿಸಿವೆ." (ನೂರುಲ್ ಹಖ್ – ಸಂಪುಟ 2)

ಹಲವು ವಿಧ ಗ್ರಹಣಗಳಿವೆ. ಕೆಲವು ಸ್ಪಷ್ಟವಾಗಿ ಗೋಚರಿಸುತ್ತವೆ. ಬೇರೆ ಕೆಲವು ಅಸ್ಪಷ್ಟವಾಗಿ ಗೋಚರಿಸುತ್ತವೆ. ಪ್ರೊಫೆಸರ್ ಜೆ.ಎ. ಮಿಚ್ಚೆಲ್ (Professor J.A. Mitchell) ಗ್ರಹಣ ಗಳನ್ನು ನಾಲ್ಕಾಗಿ ವಿಂಗಡಿಸಿದ್ದಾರೆ. 1. ಅಪೂರ್ಣ (Partial) 2. ವಲಯಾಕಾರ (Annular) 3. ವಲಯಾಕಾರ ಸಂಪೂರ್ಣ (Annular - Total) 4. ಸಂಪೂರ್ಣ (Total).

ಅಪೂರ್ಣ ಗ್ರಹಣ ವೇಳೆಯಲ್ಲಿ ಸೂರ್ಯ ಪೂರ್ಣವಾಗಿ ಮರೆಯಾಗುವುದಿಲ್ಲ. ವಲಯಾಕಾರದ ಗ್ರಹಣವೆಂದರೆ ಸೂರ್ಯನ ಮಧ್ಯಭಾಗ ಕಪ್ಪಾಗಿ ಕಾಣುತ್ತದೆ. ಅದರ ಸುತ್ತಲೂ ಪ್ರಕಾಶವು ವಲಯಾಕಾರದಲ್ಲಿ ಪ್ರಜ್ವಲಿಸುವುದು. ಸಂಪೂರ್ಣ ಸೂರ್ಯ ಗ್ರಹಣದಲ್ಲಿ ಸೂರ್ಯ ಸಂಪೂರ್ಣವಾಗಿ ಮರೆಯಾಗುತ್ತದೆ. ವಲಯಾಕಾರ ಸಂಪೂರ್ಣ ಗ್ರಹಣವೆಂದರೆ, ಈ ಪದ ಸೂಚಿಸುವ ಪ್ರಕಾರವೇ, ವಲಯಾಕಾರಕ್ಕೂ ಸಂಪೂರ್ಣಕ್ಕೂ ಮಧ್ಯಂತರದಲ್ಲಿರುವ ಗ್ರಹಣವಾಗಿದೆ. ಅಂದರೆ, ಇಂತಹ ಗ್ರಹಣದಲ್ಲಿ ಚಂದ್ರನ ನೆರಳಿನ ಅತ್ಯುಚ್ಛ ಬಿಂದು (Vertex) ಭೂಮಿಯನ್ನು ತಲಪುವುದು. ನಾಲ್ಕು ವಿಧ ಗ್ರಹಣಗಳ ಪೈಕಿ ಇದು ಅತ್ಯಪೂರ್ವವಾದುದು. ಪ್ರೊ| ಮಿಚ್ಚಲ್ ಗತಕಾಲದಲ್ಲಿ ಸಂಭವಿಸಿದ ಗ್ರಹಣಗಳ ವಿವರಗಳನ್ನು ಸಂಗ್ರಹಿಸಿದ್ದರು. ಒಂದು ಶತಮಾನದಲ್ಲಿ ಸುಮಾರು 237 ಗ್ರಹಣಗಳು ಸಂಭವಿಸುತ್ತವೆ. ಅದರಲ್ಲಿ 10 ಮಾತ್ರ ವಲಯಾಕಾರ ಸಂಪೂರ್ಣ ಗ್ರಹಣವಾಗಿರುತ್ತವೆ (Annular total). ಹಿಜ್‌ರಿ 1311 ರಮಝಾನ್ ಮಾಸದಲ್ಲಿ ಸಂಭವಿಸಿದ ಸೂರ್ಯಗ್ರಹಣ ವಲಯಾಕಾರ ಸಂಪೂರ್ಣ ತರದ್ದಾಗಿತ್ತು. ವಾಗ್ದತ್ತ ಮಸೀಹ್‌ರವರು ಸೂಚಿಸಿದ್ದಂತೆ ಅದು ಸಾಮಾನ್ಯ ಗ್ರಹಣವಾಗಿರದೆ ವಿಶೇಷತರದ್ದಾಗಿತ್ತು; ನಯನ ಮನೋಹರವಾಗಿತ್ತು.

ಮತ್ತೊಂದು ವಿಶೇಷತೆಯೇನೆಂದರೆ, ಈ ಚಂದ್ರ – ಸೂರ್ಯ ಗ್ರಹಣಗಳು ಎರಡು ಸಹ ಭಾರತದಲ್ಲಿ ಗೋಚರಿಸಿದುವು. ಚಂದ್ರಗ್ರಹಣ ಭೂಮಿಯ ಒಂದು ಅರ್ಧ ಗೋಳವಿಡೀ ಕಾಣಿಸುತ್ತದೆ. ಆದರೆ ಸೂರ್ಯಗ್ರಹಣ ಭೂಮಿಯ ಒಂದು ಸಣ್ಣ ಭಾಗದಲ್ಲಿ ಮಾತ್ರ ಗೋಚರಿಸುತ್ತದೆ. ಸೂರ್ಯಗ್ರಹಣ ಕೆಲವೊಮ್ಮೆ ಜನಸಾಂದ್ರತೆ ಕಮ್ಮಿಯಿರುವ ಪ್ರದೇಶದಲ್ಲಿ ಅಥವಾ ಸಮುದ್ರ ವಲಯದಲ್ಲಿ ಗೋಚರಿಸುತ್ತದೆ. ಆದರೆ 1894 ಎಪ್ರಿಲ್ 6 ರಂದು ಸಂಭವಿಸಿದ ಸೂರ್ಯ ಗ್ರಹಣ ಭಾರತ ಸಹಿತ ಏಷ್ಯಾದಲ್ಲೆಲ್ಲೂ ಕಾಣಿಸಿತು. ಪ್ರೊಫೆಸರ್ ಟಿ.ಆರ್. ವೋನ್ ಒಪ್ಪೋಲ್‌ಝರ್, ಹಿಂದೆ ಸಂಭವಿಸಿದ ಹಾಗೂ ಮುಂದೆ ಸಂಭವಿಸಲಿರುವ (ಕ್ರಿ.ಪೂ. 1208ರಿಂದ ಕ್ರಿ.ಶ. 2161ರ ವರೆಗಿನ) ಗ್ರಹಣಗಳ ವಿವರವನ್ನು 'ಗ್ರಹಣಗಳ ಸಾಮಾನ್ಯ ನಿಯಮ' (Canon of Eclipses) ಎಂಬ ಪುಸ್ತಕದಲ್ಲಿ ಕೊಟ್ಟಿದ್ದಾರೆ. ನಕ್ಷೆಗಳ ಮೂಲಕ ಸ್ಪಷ್ಟವಾದ ಗ್ರಹಣಪಥಗಳನ್ನು ಅವರು ಈ ಪುಸ್ತಕದಲ್ಲಿ ತೋರಿಸಿದ್ದಾರೆ. ಅಪೂರ್ಣ, ಸಂಪೂರ್ಣ, ವಲಯಾಕಾರ, ಸಂಪೂರ್ಣ ವಲಾಯಾಕಾರ ಎಂಬೀ ರೀತಿಯಲ್ಲಿ ಈ ಗ್ರಹಣಗಳನ್ನು ವರ್ಗೀಕರಿಸಿದ್ದಾರೆ. 1894 ಎಪ್ರಿಲ್ 6 ರಂದು (ಹಿಜ್‌ರಿ 1311 ರಮಝಾನ್ 28) ಸಂಭವಿಸಿದ ಗ್ರಹಣದ ವಿವರಣೆ ಸಹ ಈ ಪುಸ್ತಕದಲ್ಲಿದೆ (ಚಾರ್ಟ್ 148). 1894ರಲ್ಲಿ ಲಂಡನಿನಿಂದ ಪ್ರಕಟವಾದ ನಾವಿಕ ಪಂಚಾಂಗದಲ್ಲಿ ಸಹ ಈ ಸೂರ್ಯಗ್ರಹಣದ ಪಥದ ನಕ್ಷೆಯನ್ನು ತೋರಿಸಲಾಗಿದೆ. (Nautical Almanac, London 1894).

ವಾಗ್ದತ್ತ ಮಸೀಹ್ ಮತ್ತು ಅವರ ಅನುಚರರು ಈ ಗ್ರಹಣಗಳನ್ನು ಖಾದಿಯಾನಿನಿಂದ ಕಂಡರು. ಈ ಮಹತ್ತರವಾದ ದೃಷ್ಟಾಂತ ತನ್ನ ನಾಡಿನಲ್ಲೇ ಗೋಚರಿಸಿದುದರ ನಿಜಸ್ಥಿತಿಯ ಬಗ್ಗೆ ಜನರು ಚಿಂತನೆ ಮಾಡಲಿ ಎಂದು ವಾಗ್ದತ್ತ ಮಸೀಹ್‌ರವರು ನುಡಿದರು.

ಅವರು ಹೀಗೆ ಬರೆದರು:

> "ಓ ದೇವದಾಸರೇ, ನೀವು ಚಿಂತನೆ ಮಾಡಿರಿ, ಆಲೋಚಿಸಿರಿ. ಮಹ್‌ದಿ ಅರೇಬಿಯಾದಲ್ಲಿ ಅಥವಾ ಸಿರಿಯಾದಲ್ಲಿ ಆಗಮಿಸಿ ಅವರ ಬಗೆಗಿನ ಸೂಚಕಕಾರ್ಯ ನಮ್ಮ ನಾಡಿನಲ್ಲಿ ಪ್ರಕಟಗೊಳ್ಳುವುದು ಸಮಂಜಸವೆಂದು ನೀವು ಭಾವಿಸುತ್ತೀರಾ? ಯಾರಿಗೋಸ್ಕರ ಸೂಚಕಕಾರ್ಯಗಳು ಗೋಚರಿಸಬೇಕಾಗಿದೆಯೋ, ಆ ವ್ಯಕ್ತಿಯಿಂದ ಸೂಚಕ ಕಾರ್ಯವನ್ನು ದೇವನು ಬೇರ್ಪಡಿಸಲಾರ. ಮಹ್‌ದಿ ಪೂರ್ವ ದಿಕ್ಕಿನಲ್ಲಿ ಪ್ರತ್ಯಕ್ಷರಾಗಿ ಸೂಚಕಕಾರ್ಯ ಪಶ್ಚಿಮ ದಿಕ್ಕಿನಲ್ಲಿ ಗೋಚರಿಸುವುದು ಹೇಗೆ ಸಾಧ್ಯ? ನೀವು ನಿಜವಾಗಿಯೂ ಸತ್ಯಾನ್ವೇಷಕರೆಂದಾದರೆ ಇದೊಂದೇ ನಿಮಗೆ ಸಾಕು." (ನೂರುಲ್ ಹಖ್ – ಸಂಪುಟ 2)

ಸಂಕ್ಷಿಪ್ತವಾಗಿ ಹೇಳುವುದಾದರೆ, ನಮ್ಮ ಒಲುಮೆಯ ನೇತಾರರಾದ ಮುಹಮ್ಮದ್ ಪೈಗಂಬರರ ಭವಿಷ್ಯವಾಣಿ ನಿಷ್ಪುಷ್ಟವಾಗಿಯೂ ಅತಿ ಮನೋಹರವಾಗಿಯೂ ಈಡೇರಿತು.

> "ಅತ್ಯಂತ ಉತ್ತಮ ರೀತಿಯಲ್ಲಿ ಸೃಷ್ಟಿಸುವ ಅಲ್ಲಾಹನು ಅನುಗ್ರಹದಾಯಕನಾಗಿದ್ದಾನೆ." (ಪವಿತ್ರ ಖುರ್‌ಆನ್ 23:15).

ಕ್ರಿ.ಶ. 17ನೇ ಶತಮಾನದಲ್ಲಿ ಸರ್ ಐಸಾಕ್ ನ್ಯೂಟನ್ ಭೂಮಿಯ

ಗುರುತ್ವಾಕರ್ಷಣ ಶಕ್ತಿ (Law of Gravitation) ಕಂಡುಹಿಡಿದನು. ಗ್ರಹಣಗಳ ಬಗ್ಗೆ ವಿಶದ ಮತ್ತು ನಿಖರವಾದ ಗಣನೆ ಇದಕ್ಕಿಂತ ಮೊದಲು ಅಸಾಧ್ಯವಾಗಿತ್ತು. ಆದರೆ ನಮ್ಮ ನೇತಾರ ಹಾಗೂ ಪ್ರವಾದಿವರ್ಯರಾದ ಮುಹಮ್ಮದ್ ಪೈಗಂಬರರು ಸರ್ವಜ್ಞನಾದ ಅಲ್ಲಾಹನು ಅರುಹಿದ ಪ್ರಕಾರ ಅದ್ಭುತಕರವಾದ ಈ ಭವಿಷ್ಯವಾಣಿಯನ್ನು ನುಡಿದರು. ವಾಗ್ದತ್ತ ಮಸೀಹ್‌ರವರ ಆಗಮನವನ್ನು ಸೂಚಿಸುವಂಥ ಇದಕ್ಕಿಂತ ಸ್ಪಷ್ಟವಾದ ಒಂದು ದಿವ್ಯ ದೃಷ್ಟಾಂತವನ್ನು ನಾನು ಕಾಣುವುದಿಲ್ಲ.

"ಪರಿಶುದ್ಧನಾದ ಅಲ್ಲಾಹನಿಗೆ ಸರ್ವ ಸ್ತುತಿಸ್ತೋತ್ರಗಳು. ಓ ಅಲ್ಲಾಹ್, ಮುಹಮ್ಮದ್ ಪೈಗಂಬರರ ಮೇಲೆ ಮತ್ತು ಅವರ ಸಂತತಿ ಪರಂಪರೆಯ ಮೇಲೆ ನಿನ್ನ ಅನುಗ್ರಹಗಳನ್ನು ಸುರಿಸು."

### ಭವಿಷ್ಯವಾಣಿಯ ಈಡೇರಿಕೆಗೆ ವಾಗ್ದತ್ತ ಮಸೀಹರಿಂದ ಕೃತಜ್ಞತೆ ಸಲ್ಲಿಕೆ

ಮುಹಮ್ಮದ್ ಪೈಗಂಬರರ ಮಹತ್ತರವಾದ ಈ ಭವಿಷ್ಯ ನುಡಿಯ ಈಡೇರಿಕೆ ವಾಗ್ದತ್ತ ಮಸೀಹ್‌ರವರನ್ನು ಹರ್ಷ ಪುಳಕಿತರನ್ನಾಗಿಸಿತು. ಅಲ್ಲಾಹನು ಅವರ ಮೇಲೆ ತೋರಿಸಿದ ಔದಾರ್ಯಕ್ಕೆ ಕೃತಜ್ಞತೆಯಿಂದ ಅವರ ಹೃದಯ ತುಂಬಿಬಂತು. ಕೃತಜ್ಞತಾ ಸೂಚಕವಾಗಿ ಅವರು ಅರಬಿ ಭಾಷೆಯಲ್ಲಿ ಒಂದು ಕವಿತೆ ಬರೆದರು. ಅದರ ಭಾವಾನುವಾದ ಈ ರೀತಿಯಾಗಿದೆ.:

"ಓ ನನ್ನ ಧರ್ಮ ಬಾಂಧವರೇ, ನಿಮಗಿದೋ ಸುವಾರ್ತೆ
ಧರ್ಮ ಮಿತ್ರರೇ, ನಿಮಗಿದೋ ಅಭಿನಂದನೆಗಳು.
ದೇವಾನುಗ್ರಹದ ಉಜ್ವಲತೆ ಪ್ರಕಟವಾಯಿತು.
ಕಣ್ಣಿದ್ದವನಿಗೆ ದಾರಿಯು ತೆರೆಯಲ್ಪಟ್ಟಿತು.
ಸೂರ್ಯ ಮತ್ತು ಚಂದ್ರರಿಗೆ ಈ ರಾಜ್ಯಗಳಲ್ಲಿ
ಗ್ರಹಣವಾಯಿತು ದೇವವಿಧಿಯಂತೆ, ರಮಝಾನ್ ಮಾಸದಲ್ಲಿ.
ಪ್ರವಾದಿ ಶ್ರೇಷ್ಠರ ಸುವಾರ್ತಾ ಭವಿಷ್ಯವಾಣಿ
ನಿಷ್ಪುಷ್ಟವಾಗಿ ಈಡೇರಿತು ಅನ್ಯೂನವಾಗಿ.
ಇಂದು ಪ್ರತಿಯೊಬ್ಬ ದಿವ್ಯಜ್ಞಾನಿ ಆನಂದಭಾಷ್ಪ ಸುರಿಸುತ್ತಾನೆ
ಸರ್ವಶಕ್ತನಾದ ಅಲ್ಲಾಹನ ಅನುಗ್ರಹಗಳನ್ನು ಸ್ಮರಿಸಿಕೊಂಡು.
ನಮ್ಮ ಪ್ರವಾದಿಯ ಭವಿಷ್ಯ ನುಡಿಯ ಈಡೇರಿಕೆಗೆ
ಕೃತಜ್ಞತೆ ಸಲ್ಲಿಸುತ್ತಾ;
ಯಥಾರ್ಥ ಔದಾರ್ಯವಂತನಾದ ಅಲ್ಲಾಹನ ಮಹಾತ್ಮೆಯನ್ನು
ನೆನೆಸಿಕೊಂಡು.
ನಿಷ್ಠಾ ಪ್ರತಿಜ್ಞೆಯನ್ನು ಮಾಡಿದ ಪ್ರತಿಯೊಬ್ಬನು ಇಂದು
ವಿಶ್ವಾಸಾಧಿಕ್ಯದಿಂದ ಒಂದು ನವೀನ ವಿಶ್ವಾಸವನ್ನು ಗಳಿಸಿರುವನು.
ಈ ರಮಝಾನ್ ದಾಟಿ ಹೋಯಿತು.
ಇತರರಿಗೆ ಇಂದು ಒಂದು ಈದ್,
ಆದರೆ ನಮಗೆ ಎರಡು ಈದ್‌ಗಳು.
ಚಂದ್ರನು ನಿಮಗೆ ಸತ್ಪಥದ ಪ್ರಕಾಶ ತೋರಿಸುತ್ತಾನೆ.
ಸೂರ್ಯನು ನಿಮ್ಮನ್ನು ವಿಶ್ವಾಸದೆಡೆಗೆ ಒಯ್ಯುತ್ತಾನೆ.
ನಿಮ್ಮ ಹಿತಕ್ಕೋಸ್ಕರ ಸೃಷ್ಟಿಕರ್ತನ ದೃಷ್ಟಾಂತಗಳು ಪ್ರಕಟಗೊಂಡವು,
ನಿಮ್ಮ ಸ್ವಂತ ನಾಡಿನಲ್ಲೇ ದಿವ್ಯ ಪುರುಷನಿಗೆ ಬೆಂಬಲವಾಗಿ.
ಇದು ಒಬ್ಬ ಜೋಯಿಸನ ಚಮತ್ಕಾರವೇ?
ಅಥವಾ ಸರ್ವ ಶಕ್ತ ದೇವನ ಮಹಾ ದೃಷ್ಟಾಂತವೇ?
ಇದು ಪ್ರವಾದಿ ಶ್ರೇಷ್ಠರ ನುಡಿಮುತ್ತಾಗಿದೆ.
ಸೃಷ್ಟಿಲೋಕದ ವಿಮೋಚಕ, ವೀರ ನೇತಾರ.
ಅಲ್ಲಾಹನ ಶಾಂತಿ ಮತ್ತು ಆಶೀರ್ವಾದ ಅವರ ಮೇಲಿರಲಿ.
ಎಲೈ ನನ್ನ ಜನರೇ, ನನ್ನ ದೃಷ್ಟಾಂತ ರಮಝಾನಿನಲ್ಲಿ
ತೋರಿಸಲ್ಪಟ್ಟಿತು,
ದಯಾವಂತನೂ ಪ್ರತಿಫಲದಾಯಕನೂ ಆದ ನಮ್ಮ
ದೇವನಿಂದ.
ಆದ್ದರಿಂದ ಓದಿರಿ ನೀವು ಬಯಸುವಿರಾದರೆ ನಮ್ಮ ಪ್ರಭುವಿನ
ವಚನವನ್ನು–
"ಚಂದ್ರನಿಗೆ ಗ್ರಹಣವಾಗುವುದು", ಆಜ್ಞೋಲ್ಲಂಘನೆಯನ್ನು
ತೊರೆಯಿರಿ.
ಪೈಗಂಬರರ ವಂಶಜರಲ್ಲೊಬ್ಬ ನಿವೇದಿಸಿದ ವಚನ
ಇದಾಗಿದೆ,
ಪವಿತ್ರ ಖುರ್‌ಆನಿನ ವಚನಗಳಿಗೆ ಸ್ಪಷ್ಟೀಕರಣವಾಗಿ.
ನಮ್ಮ ನೆಚ್ಚಿನ ಪ್ರವಾದಿಯ ವಚನಗಳಿವು.
ಆದ್ದರಿಂದ ಅವುಗಳೆಡೆಗೆ ತಿರುಗಿರಿ; ಅಧಮ ಜನರ ಬಗ್ಗೆ
ಕ್ಲೇಶಪಡಬೇಡಿರಿ.

ಸುದೀರ್ಘವಾದ ಈ ಕವಿತೆ ಹೀಗೆ ಮುಕ್ತಾಯವಾಗುತ್ತದೆ:

"ಓ ನನ್ನ ಪ್ರಭೂ, ನೀನು ಅನುಗ್ರಹಿಸು,
ಮಹೋನ್ನತನೂ ಎಲ್ಲ ಪರಿಶುದ್ಧರಿಗಿಂತಲೂ ಪರಿಶುದ್ಧನಾದ
ಮುಹಮ್ಮದ್‌ರ ಮುಖಕಾಂತಿಗೋಸ್ಕರ ಇವೆಲ್ಲ."

(ನೂರುಲ್ ಹಖ್ - ಸಂಪುಟ 2)

ಓ ಅಲ್ಲಾಹ್ ನಮ್ಮ ನೇತಾರರೂ ಯಜಮಾನರೂ ಆದ ಮುಹಮ್ಮದ್ ಪೈಗಂಬರ್ ಮತ್ತು ಅವರ ಸಂತತಿಗಳ ಮೇಲೆ ನಿನ್ನ ಅನುಗ್ರಹವನ್ನು ಸುರಿಸು. ನಿಶ್ಚಯವಾಗಿಯೂ ನೀನೇ ಸ್ತುತ್ಯರ್ಹನೂ ಪ್ರತಾಪಶಾಲಿಯೂ.

### ರಮಝಾನಿನಲ್ಲಿ ಸೂರ್ಯಚಂದ್ರ ಗ್ರಹಣಗಳ ಪುನರಾವರ್ತನೆ– ಹಿಜ್‌ರ 1312 (ಮಾರ್ಚ್ 1895)

ಇನ್ನೊಂದು ಹದೀಸ್ ಪ್ರಕಾರ "ಸೂರ್ಯನಿಗೆ ರಮಝಾನ್ ಮಾಸದಲ್ಲಿ ಎರಡು ಸಲ ಗ್ರಹಣವಾಗುವುದು." (ಮುಖ್ತಸಿರ್ ತಝ್‌ಕಿರ ಖುರ್ತಬಿ, ಪುಟ 148, ಅಲ್‌ಖುತುಬುರ್ರಬ್ಬಾನಿ - ಶೇಖ್ ಅಬ್ದುಲ್ ವಹಾಬ್ ಶಿರಾನಿ)

ಮರುವರ್ಷ ಕ್ರಿ.ಶ. 1895 ರಮಝಾನಿನಲ್ಲಿ ಸೂರ್ಯ-ಚಂದ್ರ ಗ್ರಹಣಗಳು ಮಾರ್ಚ್ 11 ಮತ್ತು ಮಾರ್ಚ್ 26ರಂದು ಯಥಾಕ್ರಮದಲ್ಲಿ ಸಂಭವಿಸಿದವು. ಈ ಗ್ರಹಣಗಳು ಪಶ್ಚಿಮಾರ್ಧಗೋಳದಲ್ಲಿ ಗೋಚರಿಸಿದವು. ಅವು ಖಾದಿಯಾನಿನಲ್ಲಿ ಗೋಚರಿಸಲಿಲ್ಲ. ಆದರೆ ಪಶ್ಚಿಮ ಗೋಳಾರ್ಧದಲ್ಲಿ ಸಂಭವಿಸಿದ ಈ ಗ್ರಹಣಗಳ ದಿನಾಂಕಗಳು ಖಾದಿಯಾನಿಯಲ್ಲಿ ಯಥಾಕ್ರಮ

ರಮಝಾನ್ ಮಾಸದ 13 ಮತ್ತು 28 ಆಗಿದ್ದವು. ಸ್ಥಳಕ್ಕನುಸಾರವಾಗಿ ಗ್ರಹಣ ದಿನಾಂಕಗಳು ಬದಲಾಗಲೂಬಹುದು.

ವಾಗ್ದತ್ತ ಮಸೀಹರು ಈ ಗ್ರಹಣಗಳ ಕುರಿತು ಸಹ ತನ್ನ 'ಹಖೀಖತುಲ್ ವಹ್ಯ್' ಎಂಬ ಗ್ರಂಥದಲ್ಲಿ ಪ್ರತಿಪಾದಿಸಿದ್ದಾರೆ. ಅವರು ಈ ರೀತಿ ಬರೆದರು:

> "ಬೇರೊಂದು ಹದೀಸಿನಲ್ಲಿ ಪ್ರಸ್ತಾಪಿಸಲಾದಂತೆ ಈ ಗ್ರಹಣಗಳು ಎರಡು ಸಲ ರಮಝಾನ್ ಮಾಸದಲ್ಲಿ ಸಂಭವಿಸಿದವು.. ಮೊದಲು ನಮ್ಮ ದೇಶದಲ್ಲಿ ಮತ್ತೊಮ್ಮೆ ಅಮೇರಿಕಾದಲ್ಲಿ. ಎರಡು ಸಲವೂ ನಿರ್ದಿಷ್ಟವಾದ ಅದೇ ದಿನಾಂಕಗಳಂದು ಅವು ಗೋಚರಿಸಿದವು. ಈ ಗ್ರಹಣಗಳು ಸಂಭವಿಸಿದಾಗ ನನ್ನ ಹೊರತು ಬೇರೆ ಯಾರೂ ವಾಗ್ದತ್ತ ಮಹ್‌ದಿ (ಆಧ್ಯಾತ್ಮಿಕ ಸುಧಾರಕ) ಎಂದು ಭೂಮಿಯ ಮೇಲೆ ವಾದಿಸಿಲ್ಲ. ಅಷ್ಟೇ ಅಲ್ಲ, ಇಂದಿನ ವರೆಗೆ ನನ್ನ ಹೊರತು ಬೇರೆ ಯಾರೂ ಆಕಾಶದಲ್ಲಿ ಗೋಚರವಾದ ಈ ಗ್ರಹಣಗಳು ಆತನ ವಾದವನ್ನು ಪುಷ್ಟೀಕರಿಸುವ ಒಂದು ಪುರಾವೆಯೆಂದು ಹೇಳಿಲ್ಲ. ಅಥವಾ ಅರಬಿ, ಉರ್ದು, ಪರ್ಶಿಯನ್ ಭಾಷೆಗಳಲ್ಲಿ ಆ ಬಗ್ಗೆ ವಿವರ ನೀಡುವ ಕಿರು ಕೃತಿಗಳನ್ನಾಗಲಿ ಪ್ರಕಟಿಸಿಲ್ಲ. ಇನ್ನೊಂದು ಪುರಾವೆಯೇನೆಂದರೆ, ಗ್ರಹಣ ಸಂಭವಿಸುವುದಕ್ಕೆ 12 ವರ್ಷಗಳಿಗೆ ಮುಂಚೆ ನನಗೋಸ್ಕರ ಪ್ರಕಟಗೊಳ್ಳುವ ಈ ದೃಷ್ಟಾಂತದ ಬಗ್ಗೆ ಅಲ್ಲಾಹನು ನನಗೆ ತಿಳಿಯಪಡಿಸಿದ್ದನು. ಈ ಸಂಗತಿಯನ್ನು ನಾನು 'ಬರಾಹೀನೆ ಅಹ್ಮದಿಯಾ' ಎಂಬ ಗ್ರಂಥದಲ್ಲಿ ಬರೆದಿರುವೆನು ಮತ್ತು ಗ್ರಹಣ ಸಂಭವಿಸುವುದಕ್ಕೆ ಮುಂಚೆಯೆ ಸಾವಿರಾರು ಜನರಿಗೆ ಈ ವಿಚಾರವನ್ನು ತಿಳಿಸಿರುವೆನು."

### ಆಕ್ಷೇಪಕ್ಕೆ ಉತ್ತರ

ಸೂರ್ಯ – ಚಂದ್ರ ಗ್ರಹಣಗಳು ರಮಝಾನ್ ಮಾಸದಲ್ಲಿ ಹಲವು ಸಲ ಸಂಭವಿಸಿವೆ; ಆದ್ದರಿಂದ ಓರ್ವ ದೇವನಿಯುಕ್ತವಾದಿಗೆ ಸಾಕ್ಷ್ಯವಾಗಿ ಈ ದೃಷ್ಟಾಂತವನ್ನು ಸರಿಯಾದ ಒಂದು ಮಾನದಂಡ ವಾಗಿ ಸ್ವೀಕರಿಸಲಾಗದು ಎಂಬ ಆಕ್ಷೇಪಣೆ ಎತ್ತಲಾಯಿತು. ಒಂದೇ ರಮಝಾನ್ ಮಾಸದಲ್ಲಿ ಸೂರ್ಯ-ಚಂದ್ರಗ್ರಹಣಗಳು, ಅನೇಕ ಸಲ ಸಂಭವಿಸಿವೆ ಎಂಬುದು ಸರಿಯೇ ಆಗಿದೆ. ಆದರೆ ಈ ಹದೀಸಿನ ವೈಶಿಷ್ಟ್ಯವೇನೆಂದರೆ, ಗ್ರಹಣದ ನಿರ್ದಿಷ್ಟ ದಿನಾಂಕಗಳು ಹಾಗೂ ಗ್ರಹಣ ವೇಳೆಯಲ್ಲಿ ಮಹ್‌ದಿವಾದಿಯ ಉಪಸ್ಥಿತಿ ಮುಖ್ಯವಾಗಿದೆ. "ಆಕಾಶಗಳ ಮತ್ತು ಭೂಮಿಯ ಸೃಷ್ಟಿಯ ಬಳಿಕ ಇಂತಹ ದೃಷ್ಟಾಂತಗಳು ಗೋಚರಿಸಿಲ್ಲ" ಎಂಬ ಹದೀಸ್‌ವಾಕ್ಯವು ಭವಿಷ್ಯವಾಣಿಯ ಮಹತ್ವವನ್ನು ಎತ್ತಿ ತೋರಿಸುತ್ತದೆ.

ಗ್ರಹಣಗಳ ಪುನರಾವರ್ತನ ಚಕ್ರದ ಬಗೆಗಿನ ಅಧ್ಯಯನದಿಂದ ಸ್ಪಷ್ಟವಾಗುವುದೇನೆಂದರೆ, 22 ವರ್ಷಗಳ ಅವಧಿಯಲ್ಲಿ ಒಂದು ವರ್ಷದಲ್ಲಿ ಅಥವಾ ಎರಡು ವರ್ಷಗಳಲ್ಲಿ ಭೂಮಿಯಲ್ಲಿ ಎಲ್ಲಿಯಾದರೂ ರಮಝಾನ್ ಮಾಸದ ಯಾವುದಾದರೊಂದು ದಿನಾಂಕದಂದು ಚಂದ್ರಗ್ರಹಣ ಅಥವಾ ಸೂರ್ಯಗ್ರಹಣ ಸಂಭವಿಸುತ್ತದೆ. ಚಂದ್ರಗ್ರಹಣ ಸಂಭವಿಸಿದ ಪ್ರದೇಶಗಳಲ್ಲೇ ಸೂರ್ಯಗ್ರಹಣ ಸಹ ಸಂಭವಿಸಬೇಕೆಂದಿಲ್ಲ. ಆದರೆ ಎರಡು ಗ್ರಹಣಗಳೂ ರಮಝಾನಿನ ನಿರ್ದಿಷ್ಟ ದಿನಾಂಕಗಳಂದು ನಿರ್ದಿಷ್ಟ ಪ್ರದೇಶದಲ್ಲಿ ಸಂಭವಿಸುವುದು ಅತ್ಯಪೂರ್ವ. ಎರಡು ಶತಮಾನಗಳಲ್ಲಿ (ಕ್ರಿ.ಶ. 1800-2000) ಸಂಭವಿಸಿದ ಗ್ರಹಣಗಳ ಬಗ್ಗೆ ಡಾ| ಜಿ.ಎಂ. ಬಲ್ಲಾಭ್ ಮತ್ತು ನಾನು ನಡೆಸಿದ ಅಧ್ಯಯನದಿಂದ ಸ್ಪಷ್ಟವಾಗುವುದೇನೆಂದರೆ, 17 ಸಲ ರಮಝಾನ್ ಮಾಸದಲ್ಲಿ ಚಂದ್ರ-ಸೂರ್ಯ ಗ್ರಹಣಗಳು ಸಂಭವಿಸಿವೆ. ಆದರೆ 1894ರಲ್ಲಿ ಮಾತ್ರ ಹದೀಸಿನಲ್ಲಿ ಹೇಳಿದ ಪ್ರಕಾರವೇ ನಿರ್ದಿಷ್ಟ ದಿನಾಂಕಗಳಂದು ಚಂದ್ರ-ಸೂರ್ಯಗ್ರಹಣಗಳು ಸಂಭವಿಸಿದುವು ಹಾಗೂ ಅವು ಖಾದಿಯಾನಿನಲ್ಲಿ ಗೋಚರಿಸಿದುವು. ಈ ವಾಸ್ತವಾಂಶವು ಕಲಕತ್ತದ ಇಂಡಿಯನ್ ಮೀಟಿರಿಯೋಜಿಕಲ್ ಡಿಪಾರ್ಟ್‌ಮೆಂಟ್‌ನ ಡೈರೆಕ್ಟರ್ ಎ.ಕೆ. ಭಟ್ನಾಗರ್ ಸಹ ಖಚಿತಪಡಿಸಿದ್ದಾರೆ. (A.K. Bhatnagar, Director, Postional Astronomy Centre, India, Meteorological Department, New Alipore, Calicutta- 700 057). ಸಂಕ್ಷಿಪ್ತದಲ್ಲಿ, ಖಾದಿಯಾನಿನಲ್ಲಿ ಗೋಚರಿಸಲ್ಪಟ್ಟ ಎರಡು ಗ್ರಹಣಗಳೂ ಅತ್ಯಪೂರ್ವವಾದ ಸಂಭವಗಳಾಗಿವೆ. ರಮಝಾನಿನಲ್ಲಿ ಗೋಚರವಾದ ಅನೇಕ ಚಂದ್ರ-ಸೂರ್ಯ ಗ್ರಹಣಗಳ ಪೈಕಿ ಹದೀಸಿನಲ್ಲಿ ಹೇಳಲಾದ ವೈಶಿಷ್ಟ್ಯಗಳೊಂದಿಗೆ ಈಡೇರಿದ ಒಂದೇ ಒಂದು ಗ್ರಹಣ ಜೋಡಿ ಇದು ಮಾತ್ರವಾಗಿದೆ. (ಹೆಚ್ಚಿನ ವಿವರಣೆಗೆ Review of Religions, 1987 ಜುಲಾಯಿ ಸಂಚಿಕೆ, Minaret ಸಂಪುಟ 19 ಸಂಚಿಕೆ 2, ಪುಟ 52, 1988 ನೋಡಿರಿ).

ಅಷ್ಟೇ ಅಲ್ಲದೆ, ದೇವನಿಯುಕ್ತ ವಾದಿಯ ಉಪಸ್ಥಿತಿ ಈ ಭವಿಷ್ಯವಾಣಿಯ ಈಡೇರಿಕೆಗೆ ಅನಿವಾರ್ಯವಾಗಿತ್ತು. ಮಹ್‌ದಿಯ ಸತ್ಯತೆಗೆ ಸಾಕ್ಷ್ಯವಾಗಿ ಈ ದೃಷ್ಟಾಂತ ಗೋಚರವಾಗುವುದೆಂದು ಹದೀಸ್ ವಾಕ್ಯದಲ್ಲಿ ಸ್ಪಷ್ಟಪಡಿಸಲಾಗಿದೆ. ದೇವನಿಯುಕ್ತವಾದಿಯ ಅನುಪಸ್ಥಿತಿಯಲ್ಲಿ ಗೋಚರವಾಗುವ ಗ್ರಹಣಗಳಿಗೆ ಪ್ರಾಧಾನ್ಯವೇನೂ ಇಲ್ಲ. "ಆಕಾಶಗಳ ಮತ್ತು ಭೂಮಿಯ ಸೃಷ್ಟಿಯ ನಂತರ ಇಂತಹ ದೃಷ್ಟಾಂತ ಗೋಚರವಾಗಿಲ್ಲ" ಎಂಬ ಹದೀಸಿನ ಹೇಳಿಕೆ, ಇಂತಹ ದೃಷ್ಟಾಂತ ಮುಂಚೆ ಎಂದೂ ಗೋಚರಿಸಿಲ್ಲ ಎಂದು ಅರ್ಥೈಸುತ್ತದೆ. ಹಾಗಲ್ಲದೆ, ಇಂತಹ ಗ್ರಹಣ ಮೊದಲು ಒಮ್ಮೆಯೂ ಸಂಭವಿಸಿಲ್ಲ ಎಂದು ಅದರ ಅರ್ಥವಲ್ಲ, ವಾಗ್ದತ್ತ ಮಸೀಹ್ ಹೇಳಿದರು:

> "ಲೋಕಾರಂಭ ಮೊದಲ್ಗೊಂಡು ಇಷ್ಟರವರೆಗೆ ರಮಝಾನ್ ಮಾಸದಲ್ಲಿ ಎಷ್ಟು ಸಲ ಸೂರ್ಯ–ಚಂದ್ರ ಗ್ರಹಣಗಳು ಸಂಭವಿಸಿವೆ ಎಂಬ ವಿಚಾರ ನಮಗೆ ಸಂಬಂಧಿಸಿದಂತೆ ಅಪ್ರಸ್ತುತ. ಪ್ರಪಂಚದಲ್ಲಿ ಮನುಷ್ಯನ ಪ್ರಾದುರ್ಭಾವದ ಬಳಿಕ ಒಂದು ದೃಷ್ಟಾಂತವೆಂಬ ನೆಲೆಯಲ್ಲಿ ಸೂರ್ಯ–ಚಂದ್ರ ಗ್ರಹಣಗಳು ಗೋಚರಿಸಿದ್ದು ನನ್ನ ಕಾಲದಲ್ಲಿ ನನಗೋಸ್ಕರ ಮಾತ್ರವಾಗಿದೆ ಎಂಬ ವಿಚಾರವನ್ನು ಸ್ಪಷ್ಟಪಡಿಸುವುದಷ್ಟೆ ನನ್ನ ಉದ್ದೇಶ. ಒಂದು ಕಡೆಯಲ್ಲಿ ಮಹ್‌ದಿ ಮೌಊದ್ (ವಾಗ್ದತ್ತ ಧರ್ಮ ಸುಧಾರಕ) ತಾನೆಂದು ವಾದಿಸಿ, ಮತ್ತೊಂದು ಕಡೆಯಲ್ಲಿ ಆ ವಾದಿಯ ವಾದಕ್ಕೆ ಪುಷ್ಟೀಕರಣವಾಗಿ ರಮಝಾನಿನ ನಿರ್ದಿಷ್ಟ ದಿನಾಂಕಗಳಲ್ಲಿ ಚಂದ್ರ-ಸೂರ್ಯ ಗ್ರಹಣಗಳು ಸಂಭವಿಸಿ, ಈ ದೃಷ್ಟಾಂತ ತನ್ನ ವಾದಕ್ಕೆ ಒಂದು ಪುರಾವೆಯೆಂದು ಸಾರುವ ಘಟನೆ ನನಗಿಂತ ಮುಂಚೆ ಸಂಭವಿಸಿಲ್ಲ. ದಾರ್‌ಖುತ್ನಿಯ ಈ ಹದೀಸಿನಲ್ಲಿ ಸೂರ್ಯ-ಚಂದ್ರಗ್ರಹಣಗಳು ಇದಕ್ಕಿಂತ ಮುಂಚೆ ಒಮ್ಮೆಯೂ ಸಂಭವಿಸಿಲ್ಲ ಎಂದಲ್ಲ; ಬದಲು, ಒಂದು ದೃಷ್ಟಾಂತ ಎಂಬ ರೀತಿಯಲ್ಲಿ ಇಂತಹ

ಗ್ರಹಣಗಳು ಇದಕ್ಕಿಂತ ಮುಂಚೆ ಸಂಭವಿಸಲಿಲ್ಲ ಎಂದು ಹೇಳಲಾಗಿದೆ. ಕಾರಣವೇನೆಂದರೆ, 'ತಕೂನ' ಎಂಬ ಸ್ತ್ರೀಲಿಂಗ ಪದವನ್ನು ಇಲ್ಲಿ ಪ್ರಯೋಗಿಸಲಾಗಿದೆ. ಇದಕ್ಕಿಂತ ಮುಂಚೆ ಒಮ್ಮೆಯೂ ಇಂತಹ ದೃಷ್ಟಾಂತ ಗೋಚರವಾಗಲಿಲ್ಲ ಎಂದು ಇದು ಸೂಚಿಸುತ್ತದೆ. ಇಂತಹ ಗ್ರಹಣಗಳು ಇದಕ್ಕಿಂತ ಮುಂಚೆ ಒಮ್ಮೆಯೂ ಸಂಭವಿಸಲಿಲ್ಲ ಎಂದು ಅರ್ಥೈಸಬೇಕಾಗಿದ್ದರೆ, 'ಯಕೂನ' ಎಂಬ ಪುಲ್ಲಿಂಗ ಪದವನ್ನು ಪ್ರಯೋಗಿಸಬೇಕಿತ್ತು; 'ತಕೂನ' ಎಂಬ ಸ್ತ್ರೀಲಿಂಗ ಪದವನ್ನಲ್ಲ. ಸ್ತ್ರೀಲಿಂಗ ಪದ ಪ್ರಯೋಗಿಸಲ್ಪಟ್ಟಿರುವುದರಿಂದ, ಇಲ್ಲಿ ಈ ಎರಡು ದೃಷ್ಟಾಂತಗಳ ಬಗ್ಗೆ ಹೇಳಲಾಗಿದೆಯೆಂಬುದು ಸ್ಪಷ್ಟ. ಇದಕ್ಕಿಂತ ಮುಂಚೆ ಸೂರ್ಯ-ಚಂದ್ರ ಗ್ರಹಣಗಳು ಹಲವಾರು ಸಲ ಸಂಭವಿಸಿವೆ ಎಂದು ವಾದಿಸುವವರು ಮಹ್‌ದಿವಾದ ಹೊರಡಿಸಿದ ಓರ್ವ ವಾದಿಯನ್ನು ಸಹ ತೋರಿಸಿಕೊಡಬೇಕಾಗಿದೆ. ಅಷ್ಟೇ ಅಲ್ಲ, ಅಂತಹ ಓರ್ವ ವಾದಿ, ವಾದದ ಬಳಿಕ 'ದಾರ್‌ಖುತ್ನಿ'ಯ ಹದೀಸಿನಲ್ಲಿ ಹೇಳಿದ ಪ್ರಕಾರ ಸೂರ್ಯ–ಚಂದ್ರ ಗ್ರಹಣಗಳು ನಿರ್ದಿಷ್ಟ ದಿನಾಂಕಗಳಲ್ಲಿ ರಮಝಾನಿನಲ್ಲಿ ಈಡೇರುವುದನ್ನು ಕಂಡು, ಅದು ತನಗೋಸ್ಕರವಿರುವ ದೃಷ್ಟಾಂತವೆಂದು ಸೂಚಿಸುವ ಏನಾದರೂ ಆಧಾರ ವಾದಿಯ ಪುಸ್ತಕದಲ್ಲಿರುವುದನ್ನು ತೋರಿಸಬೇಕಾಗಿದೆ. ಒಟ್ಟಾರೆ, ಸಾವಿರಾರು ಸಲ ಸೂರ್ಯ – ಚಂದ್ರ ಗ್ರಹಣಗಳು ಸಂಭವಿಸಿದರೆ ಕೂಡ ಅದಕ್ಕೆ ಪ್ರಾಮುಖ್ಯತೆ ಇಲ್ಲ. ಒಂದು ದೃಷ್ಟಾಂತವೆಂಬ ರೀತಿಯಲ್ಲಿ ಸೂರ್ಯ-ಚಂದ್ರ ಗ್ರಹಣಗಳು ವಾದಿಯ ಕಾಲದಲ್ಲಿ ಒಂದೇ ಒಂದು ಸಲ ಮಾತ್ರ ಸಂಭವಿಸಿವೆ. ಅದರ ಪ್ರಾಮಾಣ್ಯವನ್ನು ಹದೀಸುಗಳು ಸಾಬೀತುಪಡಿಸಿವೆ. ಮಹ್‌ದಿಯ ಕಾಲದಲ್ಲೇ ಈ ಸತ್ಯವು ಈಡೇರಿತು."

(ಚಶ್ಮಯೆ ಮಲ್‌ರಿಫ)

ವಾಗ್ದತ್ತ ಮಸೀಹ್‌ರವರು ಇನ್ನೂ ಹೇಳುತ್ತಾರೆ:

"ಆದಮರ ಕಾಲದಿಂದ ಇದುವರೆಗೆ ಇಂತಹ ಒಂದು ಭವಿಷ್ಯವಾಣಿಯನ್ನು ಯಾರೂ ಹೇಳಿಲ್ಲ. ಈ ಭವಿಷ್ಯ ನುಡಿಯಲ್ಲಿ ನಾಲ್ಕು ಅಂಶಗಳಿವೆ. 1. ಚಂದ್ರಗ್ರಹಣ ಸಂಭವಿಸುವ ನಿರ್ದಿಷ್ಟ ರಾತ್ರಿಗಳ ಪೈಕಿ ಪ್ರಥಮ ರಾತ್ರಿ ಚಂದ್ರಗ್ರಹಣ ಸಂಭವಿಸಬೇಕು. 2. ಸೂರ್ಯಗ್ರಹಣ ಸಂಭವಿಸುವ ನಿರ್ದಿಷ್ಟ ಹಗಲುಗಳ ಪೈಕಿ ಮಧ್ಯದ ಹಗಲು ಸೂರ್ಯಗ್ರಹಣ ಸಂಭವಿಸಬೇಕು. 3. ಗ್ರಹಣಗಳು ರಮಝಾನಿನಲ್ಲಿ ಸಂಭವಿಸಬೇಕು. 4. ಜನರಿಂದ ವಿರೋಧಿಸಲ್ಪಡುವ ಓರ್ವ ದೇವನಿಯುಕ್ತವಾದಿ ಇರಬೇಕು. ಆದ್ದರಿಂದ ಈ ಭವಿಷ್ಯನುಡಿಯ ಮಹತ್ವವನ್ನು ನಿರಾಕರಿಸುವಾಗ ಅದಕ್ಕೆ ಬದಲಾಗಿ ಈ ಲೋಕದಲ್ಲಿ ಬೇರೊಂದನ್ನು ತೋರಿಸಿಕೊಡಬೇಕಾಗಿದೆ. ಅದಕ್ಕೆ ತುಲ್ಯವಾದ ಬೇರೊಂದನ್ನು ತೋರಿಸಿಕೊಡಲು ಅಸಾಧ್ಯವಾಗುವ ಕಾಲದ ವರೆಗೆ ಇತರ ಎಲ್ಲ ಭವಿಷ್ಯವಾಣಿಗಳಿಗಿಂತ ಈ ಭವಿಷ್ಯನುಡಿ ಸಮುನ್ನತ ಸ್ಥಾನವನ್ನಲಂಕರಿಸುವುದು ಹಾಗೂ ಅಲ್ಲಾಹನು ತನ್ನ ರಹಸ್ಯ ಜ್ಞಾನವನ್ನು ಅವನು ಆಯ್ಕೆ ಮಾಡುವ ಸಂದೇಶವಾಹಕನಿಗೆ ಹೊರತು ಬಹಿರಂಗಪಡಿಸುವುದಿಲ್ಲ ಎಂಬ ವಚನ ಇಲ್ಲಿ ಅರ್ಥಪೂರ್ಣವಾಗುವುದು. ಕಾರಣವೇನೆಂದರೆ, ಆದಮರ ಕಾಲದಿಂದ ಅಂತ್ಯಕಾಲದ ವರೆಗೆ ಇದಕ್ಕೆ ತುಲ್ಯವಾಗಿ ಇನ್ನೊಂದಿಲ್ಲ ಎಂದು ಪ್ರಸ್ತಾಪಿಸಲಾಗಿದೆ."

(ತುಹ್ಫಯೆ ಗೋಲ್ಡವಿಯ)

### ವಾಗ್ದತ್ತ ಮಸೀಹರ ಪಂಥಾಹ್ವಾನ

ವಾಗ್ದತ್ತ ಮಸೀಹ್ (ಅ) ಸಾವಿರ ರೂಪಾಯಿ ಬಹುಮಾನವನ್ನು ಘೋಷಿಸುತ್ತಾ ಇಂತಹ ಒಂದು ದೃಷ್ಟಾಂತ ಇದಕ್ಕಿಂತ ಮುಂಚೆ ಸಂಭವಿಸಿದೆಯೆಂದು ಯಾರಿಂದಾದರೂ ರುಜುಪಡಿಸಲು ಸಾಧ್ಯವೇ ಎಂದು ಪಂಥಾಹ್ವಾನ ನೀಡಿದರು. ಅವರು ಹೀಗೆ ಹೇಳಿದರು :

"ಹದೀಸಿನ ಒಂದು ಸತ್ಯವು ಸೂರ್ಯ ಸಮಾನ ಉಜ್ವಲ ಶೋಭೆಯಿಂದ ಈಡೇರಿದರೂ ಅಲ್ಲಾಹನ ಸಂದೇಶ ವಾಹಕರ ನುಡಿಯನ್ನು ಅಲ್ಲಗಳೆಯಲಿಕ್ಕೆ ನಿಮಗೆ ಭಯವಾಗುವುದಿಲ್ಲವೇ? ನನಗಿಂತ ಪೂರ್ವದಲ್ಲಿ ಅಥವಾ ನನ್ನ ಕಾಲದಲ್ಲಿ ಇಂತಹ ಒಂದು ದೃಷ್ಟಾಂತವನ್ನು ತೋರಿಸಲು ನಿಮಗೆ ಸಾಧ್ಯವೇ? ತಾನು ಅಲ್ಲಾಹನಿಂದ ನಿಯುಕ್ತನಾದ ಒಬ್ಬ ಆಧ್ಯಾತ್ಮಿಕ ಸುಧಾರಕನೆಂದು ವಾದಿಸಿ, ಅವರ ಕಾಲದಲ್ಲಿ ಒಂದು ರಮಝಾನ್ ಮಾಸದಲ್ಲಿ ನೀವೀಗ ಕಂಡಂತೆ ಸೂರ್ಯ–ಚಂದ್ರಗ್ರಹಣ ಸಂಭವಿಸಿದುದಾಗಿ ಯಾವುದಾದರೂ ಗ್ರಂಥದಲ್ಲಿ ಓದಿದ್ದೀರಾ? ನಿಮಗೆ ಆ ಬಗ್ಗೆ ತಿಳಿದಿದ್ದರೆ, ಅದನ್ನು ತೋರಿಸಿಕೊಟ್ಟು ಒಂದು ಸಾವಿರ ರೂಪಾಯಿಗಳನ್ನು ಬಹುಮಾನವಾಗಿ ಪಡೆಯಬಹುದು. ಆದ್ದರಿಂದ, ನೀವು ಸಾಬೀತುಪಡಿಸಿ ಈ ಬಹುಮಾನವನ್ನು ತೆಗೆದುಕೊಂಡು ಹೋಗಿರಿ. ನಾನು ಅಲ್ಲಾಹನನ್ನು ಸಾಕ್ಷಿ ಮಾಡುತ್ತೇನೆ. ನೀವು ಸಹ ಸಾಕ್ಷಿಗಳಾಗಿರಿ. ಅಲ್ಲಾಹನು ಎಲ್ಲ ಸಾಕ್ಷಿಗಳಿಗಿಂತ ಉತ್ತಮನು. ನಿಮಗೆ ಇದನ್ನು ರುಜುಪಡಿಸಲು ಸಾಧ್ಯವಾಗದಿದ್ದರೆ – ಎಂದಿಗೂ ಇದನ್ನು ರುಜುಪಡಿಸಲು ಸಾಧ್ಯವಿಲ್ಲ – ಗಲಭೆಕೋರರಿಗೆ ಸಿದ್ಧಪಡಿಸಿಡಲಾದ ಜ್ವಲಿಸುತ್ತಿರುವ ಅಗ್ನಿಯಿಂದ ಪಾರಾಗಿರಿ."

(ನೂರುಲ್ ಹಖ್ - ಸಂಪುಟ 2).

### ಪೈಗಂಬರ್ - ಮಹ್‌ದಿ ಪರಸ್ಪರ ಮಮತೆ

ವಾಗ್ದತ್ತ ಮಹ್‌ದಿಯವರ ತೃತೀಯ ಖಲೀಫ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಹೀಗೆ ಹೇಳಿದ್ದರು : "ಹದೀಸಿನಲ್ಲಿ ಪ್ರಯುಕ್ತವಾದ 'ನಮ್ಮ ಮಹ್‌ದಿ' ಎಂಬ ಮಾತು ಮುಹಮ್ಮದ್ ಪೈಗಂಬರ್ (ಸ.)ರವರಿಗೆ ಇಮಾಂ ಮಹ್‌ದಿಯ ಮೇಲಿರುವ ಅತ್ಯಂತ ಪ್ರೀತಿಯನ್ನು ತೋರಿಸುತ್ತದೆ.

ಇನ್ನೊಂದು ಹದೀಸಿನಲ್ಲಿ ಪೈಗಂಬರ್ (ಸ) ಹೀಗೆ ಹೇಳಿದ್ದಾರೆ: "ಅಲ್‌ಮಹ್‌ದಿ ಅಲ್ಲಾಹನ ಪ್ರತಿನಿಧಿಯಾಗಿ ಪ್ರತ್ಯಕ್ಷರಾಗುವರು. ಹಿಮಾಚ್ಛಾದಿತ ಪರ್ವತದ ಮೇಲೆ ತೆವಳಿಕೊಂಡು ಹೋಗಬೇಕಾಗಿ ಬಂದರೂ ನೀವು ಅವರ ಬಳಿಗೆ ಹೋಗಿ ನನ್ನ ಸಲಾಮನ್ನು ತಲುಪಿಸಬೇಕು. ಮತ್ತು ಅವರನ್ನು ಅನುಸರಿಸುವ ಪ್ರತಿಜ್ಞೆಯನ್ನು ಮಾಡಬೇಕು. ಏಕೆಂದರೆ, ಅವರು ಅಲ್ಲಾಹನ ಪ್ರತಿನಿಧಿಯಾಗಿದ್ದಾರೆ."

(ಇಬ್ನು ಮಾಜ)

ಆದುದರಿಂದ ಇಮಾಂ ಮಹ್‌ದಿಗೆ ಶಾಂತಿಯ ಶುಭಾಶಯವನ್ನು ಹಾರೈಸಲು ಮುಸ್ಲಿಂ ದಿವ್ಯಪುರುಷರು ಕಾತರರಾಗಿದ್ದರು. 13ನೇ ಶತಮಾನದ

ಮುಜದಿದ್ದ್ ಹಝ್ರತ್ ಸಯ್ಯಿದ್ ಅಹ್ಮದ್ ಬರೇಲ್ವಿ (ರ.) ರವರ ವಿದ್ವತ್ ಸಭೆಯ ಸದಸ್ಯರಾಗಿದ್ದ ದೆಹಲಿಯ ಮಹಾಕವಿ ಹಝ್ರತ್ ಮುಲ್‌ಮಿನ್ ತನ್ನ ಚಿರಕಾಲಾಭಿಲಾಷೆಯನ್ನು ಹೀಗೆ ಪ್ರಕಟಿಸಿದ್ದರು:

> "ಎಲೈ ಮುಲ್‌ಮಿನ್, ನೀನು ಎಂದಾದರೂ ಮಹ್‌ದಿಯನ್ನು ಕಂಡರೆ ಪುಣ್ಯ ಪ್ರವಾದಿಯ ಪುಣ್ಯ ಸಲಾಮನ್ನು ಎಲ್ಲಕ್ಕಿಂತ ಮುಂಚಿತವಾಗಿ ಅವರಿಗೆ ತಲಪಿಸು." (The Extra-ordinary Importance of the Fourteenth Century - Maulana Dost Mahammad Shahid, p. 44)

ಒಂದು ಕಡೆಯಲ್ಲಿ ಪೈಗಂಬರ್ (ಸ.)ರವರು ಇಮಾಂ ಮಹ್‌ದಿಯ ಮೇಲೆ ತನ್ನ ಅತಿಯಾದ ಪ್ರೀತಿಯನ್ನು ಪ್ರಕಟಿಸುವಾಗ, ಇನ್ನೊಂದು ಕಡೆಯಲ್ಲಿ ವಾಗ್ದತ್ತ ಮಸೀಹ್ (ಅ.) ತನ್ನ ಮಹಾನ್ ಯಜಮಾನರಾದ ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರೊಡನೆ ವಿಶೇಷವಾದ ಅನುರಕ್ತಿಯನ್ನು ಪ್ರಕಟಿಸಿರುವುದಾಗಿ ನಾವು ಕಾಣುತ್ತೇವೆ. ವಾಗ್ದತ್ತ ಮಸೀಹರ ಅಸಂಖ್ಯಾತ ಲಿಖಿತಗಳು ಅದಕ್ಕೆ ನಿದರ್ಶನವಾಗಿವೆ. ಅವರು ಹೀಗೆ ಬರೆದರು:

> "ತಮ್ಮ ಕರುಣೆ ಮತ್ತು ಪ್ರೀತಿಯ ನೋಟವನ್ನು ನನ್ನೆಡೆಗೆ ಬೀರಿರಿ,
> ಓ ನನ್ನ ಯಜಮಾನ, ನಾನು ತಮ್ಮ ಅತಿ ವಿನೀತ ದಾಸ.
> ಓ ನನ್ನ ಪ್ರೀತಿ ಪಾತ್ರರೆ,
> ತಮ್ಮ ಮೇಲಿನ ಪ್ರೀತಿಯಿಂದ ತುಂಬಿಕೊಂಡಿವೆ
> ನನ್ನ ರಕ್ತ, ನನ್ನ ಜೀವನ, ನನ್ನ ಭಾವನೆ ಮತ್ತು ನನ್ನ ಹೃದಯ.
> ಓ ನನ್ನ ಆನಂದದ ಉದ್ಯಾನವೇ,
> ತಮ್ಮ ಮುಖಾರವಿಂದದ ಸ್ಮರಣೆಯಿಂದ
> ಮುಕ್ತನಲ್ಲ ನಾನು ಒಂದು ಕ್ಷಣವಾದರೂ.
> ನನ್ನ ದೇಹ ತಮ್ಮೆಡೆಗೆ ಹಾರಾಡಲು ಹಾತೊರೆಯುತ್ತಿದೆ
> ಆಹಾ, ನನಗೆ ಹಾರಾಡುವ ಶಕ್ತಿ ಇರುತ್ತಿದ್ದರೆ!
> ಮುಹಮ್ಮದರ ಸೌಂದರ್ಯದಲ್ಲಿ ಉನ್ಮತ್ತವಾಗಿವೆ
> ನನ್ನ ಹೃದಯ ಮತ್ತು ಆತ್ಮ.
> ಮುಹಮ್ಮದರ ಸಂತತಿಗಳ ಪಾದಸ್ಪರ್ಶ ಪಥದ
> ಧೂಳಿನಂತೆ ಇರುವುದು ನನ್ನ ಶರೀರ.
> ನನ್ನ ಹೃದಯದ ಕಣ್ಣಿನಿಂದ ನಾನು ಕಂಡೆನು
> ನನ್ನ ಬುದ್ಧಿಶಕ್ತಿಯ ಕಿವಿಯಿಂದ ನಾನು ಆಲಿಸಿದೆನು
> ಪ್ರಪಂಚದ ಪ್ರತಿ ಅಂಶವೂ ಸಾರುತ್ತಿದೆ
> ಮುಹಮ್ಮದರ ಸೌಂದರ್ಯವನ್ನು.
> ದೇವನ ಬಳಿಕ ಮುಹಮ್ಮದರ ಮೇಲಿನ ಪ್ರೀತಿಯಲ್ಲಿ
> ನಾನು ಮತ್ತನಾಗಿದ್ದೇನೆ.
> ಇದು ಕುಫ್ರ್ ಎಂದಾದರೆ ದೇವನಾಣೆ ನಾನು ದೊಡ್ಡ ಕಾಫಿರ್."
>
> (ಅಲ್‌ಖಸೀದ)
>
> "ನಮ್ಮ ಯಜಮಾನ, ಸರ್ವ ಪ್ರಕಾಶಗಳ ಮೂಲ
> ಅವರ ನಾಮ ಮುಹಮ್ಮದ್, ಅವರೇ ನನ್ನ ಪ್ರೀತಿಪಾತ್ರ.
> ಅವರ ಪ್ರಭೆಯಿಂದ ನಾನು ನಾಸ್ತಿಯಾದೆನು
> ನಾನು ಸಂಪೂರ್ಣವಾಗಿಯೂ ಅವರದ್ದಾದೆನು.
> ಸಕಲವೂ ಅವರೇ, ನಾನು ಏನೂ ಇಲ್ಲ
> ಇದೇ ಆಗಿದೆ ಮೂಲಸಾರ.
> ಓ ನನ್ನ ಪ್ರಿಯ ದೇವಾ, ನಿನ್ನ ಏಕತ್ವದ ಆಣೆ,
> ಮರೆತು ಬಿಟ್ಟೆನು ನನ್ನನ್ನೇ ನಾನು
> ನಿನ್ನ (ಪ್ರವಾದಿಯ) ಅನುರಕ್ತಿಯಿಂದ.
> ದೇವನಾಣೆ, ನನ್ನ ಹೃದಯದಿಂದ ಎಲ್ಲ ರೂಪಗಳೂ ನೀಗಿಸಲ್ಪಟ್ಟಿವೆ-
> ನಿನ್ನ ರೂಪ ನನ್ನ ಹೃದಯದಲ್ಲಿ ಮೂಡಿದ ಬಳಿಕ.
> ನಾನು ಕಾಣಲಾರೆ ನ್ಯೂನತೆಯೇನನ್ನೂ ಪ್ರವಾದಿಯ ಧರ್ಮದಲ್ಲಿ.
> ಓ ನನ್ನ ಪರಮ ಪ್ರಭೂ, ನನಗೆ ವಿಜಯವನ್ನು ನೀಡು.
> ಓ ನನ್ನ ಒಡೆಯಾ, ಪ್ರವಾದಿಯ ಮೇಲೆ ನಿನ್ನ ಇಷ್ಟಾಶೀರ್ವಾದಗಳನ್ನು ಸುರಿಸು ಎಂದೆಂದಿಗೂ-
> ಈ ಲೋಕದಲ್ಲೂ ಪರಲೋಕದಲ್ಲೂ."
>
> (ದುರ್‌ರೆಸಮೀನ್)

ಸುಖಾಡಂಬರಗಳಲ್ಲಿ ಮುಳುಗಿರುವ ಈ ಲೋಕವು, ಮುಹಮ್ಮದ್ ಪೈಗಂಬರ್ (ಸ.)ರವರ ಮೇಲಿನ ಪ್ರೀತಿಯಲ್ಲಿ ತನ್ನ ಅಸ್ತಿತ್ವವನ್ನೇ ಕಳಕೊಂಡ ಈ ಮಹಾ ಆಧ್ಯಾತ್ಮಿಕ ಪುರುಷನ ಮೂಲಕ, ನಮ್ಮ ಸೃಷ್ಟಿಕರ್ತನೂ ಒಡೆಯನೂ ಆದ ದೇವನೆಡೆಗೆ ಹೃದಯಾಂತರಾಳದಿಂದ ಕರೆಯುವ ಓರ್ವ ದೈವಿಕ ಸಂದೇಶವಾಹಕನ ಕರೆಯನ್ನು ಆಲಿಸಿತು. ಆ ಮಹಾತ್ಮರು ಹೀಗೆ ಹೇಳಿದರು:

> "ಸರ್ವಶಕ್ತನಾದ ಒಬ್ಬ ದೇವನು ತನಗಿದ್ದಾನೆಂದು ಇಷ್ಟರವರೆಗೆ ತಿಳಿಯದಿರುವ ಮನುಷ್ಯನು ಎಷ್ಟು ನಿರ್ಭಾಗ್ಯವಂತನು! ನಮ್ಮ ದೇವನೇ ನಮ್ಮ ಸ್ವರ್ಗ. ನಮ್ಮ ಅತ್ಯುನ್ನತ ಆನಂದಾನುಭೂತಿಗಳು ನಮ್ಮ ದೇವನಲ್ಲಿವೆ. ನಾವು ಅವನನ್ನು ನೋಡಿರುವೆವು ಮತ್ತು ಪ್ರತಿಯೊಂದು ಸೌಂದರ್ಯವನ್ನು ನಾವು ಅವನಲ್ಲಿ ದರ್ಶಿಸಿದ್ದೇವೆ. ಜೀವವನ್ನು ಅರ್ಪಿಸುವುದರಿಂದ ಈ ಸಂಪತ್ತು ಸಿಗಬಹುದಾದರೆ ಹಾಗೆ ಪಡೆಯಲು ಅದು ಅರ್ಹವಾಗಿದೆ. ಒಬ್ಬನು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದರಿಂದ ಈ ಮಾಣಿಕ್ಯವನ್ನು ಪಡೆಯಬಹುದಾಗಿದ್ದರೆ ಹಾಗೆ ಖರೀದಿಸಲು ಅದು ಅರ್ಹವಾಗಿದೆ. ಈ ಭಾಗ್ಯವನ್ನು ಪಡೆಯದ ಓ ಜನರೇ, ನೀವು ಈ ಕಾರಂಜಿಯ ಸಮೀಪಕ್ಕೆ ಬನ್ನಿರಿ. ಇದು ನಿಮ್ಮ ಬಾಯಾರಿಕೆಯನ್ನು ನೀಗಿಸುವುದು. ಇದು ನಿಮ್ಮನ್ನು ರಕ್ಷಿಸುವ ಜೀವಜಲವನ್ನೀಯುವ ಕಾರಂಜಿಯಾಗಿದೆ. ನಾನೇನು ಮಾಡಲಿ? ಈ ಶುಭವಾರ್ತೆಯನ್ನು ಜನಹೃದಯಗಳಲ್ಲಿ ಹೇಗೆ ನೆಲೆಯೂರುವಂತೆ ಮಾಡಲಿ? 'ಇವನೇ ನಿಮ್ಮ ದೇವನು' ಎಂದು ಜನರು ಆಲಿಸುವಂತೆ ಯಾವ ಡೋಲಿನಿಂದ ಪೇಟೆಗಳಲ್ಲಿ ಡಂಗುರ ಸಾರಲಿ? ಜನರ ಕಿವಿಗಳು ಆಲಿಸಲು ತೆರೆದುಕೊಳ್ಳುವಂತೆ ಮಾಡಲು ಯಾವ ಮದ್ದಿನಿಂದ ಚಿಕಿತ್ಸೆ ಮಾಡಲಿ?" (ಕಿಶ್ತೀ ನೂಹ್)

ಇವು, ಈ ಕಾಲದಲ್ಲಿ ದೇವನಿಯುಕ್ತನಾದ ಓರ್ವ ಸಂದೇಶವಾಹಕನ, ಮನುಷ್ಯ ಕುಲದೊಡನಿರುವ ಅಗಾಧವಾದ ಪ್ರೀತಿ ಮತ್ತು ಅನುಕಂಪದಿಂದ ಸ್ಫುರಿಸುವ ವಚನಗಳಾಗಿವೆ. ಸತ್ಯ ವಿಶ್ವಾಸ ಕೃತ್ತಿಕೆ ನಕ್ಷತ್ರದೆಡೆಗೆ ಏರಿಹೋಗುವ ಕಾಲದಲ್ಲಿ ಅದನ್ನು ಭೂಮಿಗೆ ಮರಳಿ ತರುವವರೆಂದು ಮುಹಮ್ಮದ್ ಪೈಗಂಬರ್ (ಸ) ನುಡಿದದ್ದು (ಬುಖಾರಿ, ಮುಸ್ಲಿಂ) ಈ ಮಹಾಪುರುಷನ

ಕುರಿತಾಗಿದೆ. ಅವರು ಈ ಕಾಲಘಟ್ಟದ ಪ್ರಕಾಶವಾಗಿದ್ದಾರೆ. ಪೈಗಂಬರ್ (ಸ.) ಮಮತೆಯಿಂದ "ನಮ್ಮ ಮಹ್‌ದಿ" ಎಂದು ಕರೆದು, ಆ ಮಹಾಪುರುಷ ಆಗಮಿಸಿದರೆ ತನ್ನ ಅಮೂಲ್ಯವಾದ ಸಲಾಮನ್ನು ತಲಪಿಸಬೇಕೆಂದು ನುಡಿದಿದ್ದರು. ಆ ಪುಣ್ಯ ಪುರುಷನ ಸತ್ಯತೆಗೆ ಸೂರ್ಯ ಮತ್ತು ಚಂದ್ರ ಸಾಕ್ಷಿಯಾದವು.

### ವಾಗ್ದತ್ತ ಮಸೀಹರ ಸತ್ಯಘೋಷಣೆ

ತಾನು ವಾಗ್ದತ್ತ ದಿವ್ಯ ಸಂದೇಶವಾಹಕನೆಂದೂ ಚಂದ್ರ ಮತ್ತು ಸೂರ್ಯ ತನಗೋಸ್ಕರ ಸಾಕ್ಷಿಯಾಗಿವೆಯೆಂದೂ ವಾಗ್ದತ್ತ ಮಸೀಹರು ಸತ್ಯಘೋಷಣೆ ಮಾಡಿದರು. ಅವರು ಹೀಗೆ ಹೇಳಿದರು:

> "ನನ್ನ ಕಾಲದಲ್ಲೇ ರಮಝಾನ್ ಮಾಸದಲ್ಲಿ ಸೂರ್ಯ-ಚಂದ್ರಗ್ರಹಣಗಳು ಸಂಭವಿಸಿದವು. ಪೈಗಂಬರ್, ಖುರ್‌ಆನ್ ಮತ್ತು ಪೂರ್ವಿಕ ಗ್ರಂಥಗಳ ಭವಿಷ್ಯವಾಣಿಯ ಪ್ರಕಾರ ನನ್ನ ಈ ಕಾಲದಲ್ಲೇ ಈ ದೇಶದಲ್ಲೆಡೆ ಪ್ಲೇಗ್ ಹರಡಿತು. ನನ್ನ ಈ ಕಾಲದಲ್ಲೇ ಆಧುನಿಕ ವಾಹನ ಸೌಕರ್ಯವಾಗಿ ಉಗಿಬಂಡಿಯ ಆವಿಷ್ಕಾರವಾಯಿತು. ನನ್ನ ಈ ಕಾಲದಲ್ಲೇ ನನ್ನ ಭವಿಷ್ಯ ನುಡಿಯ ಪ್ರಕಾರ ಭೀಕರವಾದ ಭೂಕಂಪಗಳುಂಟಾದುವು. ನನ್ನನ್ನು ಅಲ್ಲಗಳೆಯುವುದರಲ್ಲಿ ದಾರ್ಷ್ಟ್ಯ ತೋರಿಸಬಾರದೆಂದು ಸಾತ್ವಿಕತೆಯು ಒತ್ತಾಯಿಸುವುದಿಲ್ಲವೇ? ನೋಡಿರಿ, ಸರ್ವಶಕ್ತನಾದ ದೇವನ ಪ್ರಮಾಣ ಮಾಡಿ ನಾನು ಹೇಳುತ್ತೇನೆ: ನನ್ನ ಸತ್ಯಕ್ಕೆ ಸಾಕ್ಷ್ಯವಾಗಿ ಸಾವಿರಗಟ್ಟಲೆ ದೃಷ್ಟಾಂತಗಳು ಪ್ರಕಟಗೊಂಡಿವೆ. ಈಗಲೂ ಪ್ರಕಟಗೊಳ್ಳುತ್ತಲಿವೆ. ಮುಂದಿನ ಕಾಲದಲ್ಲೂ ಪ್ರಕಟ ಗೊಳ್ಳುವುವು. ಇದು ಒಬ್ಬ ಮನುಷ್ಯನ ಯೋಜನೆ ಆಗಿರುತ್ತಿದ್ದರೆ ಇಂತಹ ಬೆಂಬಲ ಮತ್ತು ಸಹಾಯ ಎಂದಿಗೂ ಲಭ್ಯವಾಗುತ್ತಿರಲಿಲ್ಲ."
>
> (ಹಖೀಖತುಲ್ ವಹ್ಯ್)

ಅವರು ಮತ್ತೂ ಹೇಳಿದರು:

> "ಸರ್ವ ಶಕ್ತನಾದ ದೇವರ ಪ್ರಮಾಣ ಮಾಡಿ ನಾನು ಹೇಳುತ್ತೇನೆ: ನಾನೇ ವಾಗ್ದತ್ತ ಮಸೀಹ್. ಪ್ರವಾದಿಗಳಿಂದ ಭವಿಷ್ಯ ನುಡಿಯಲ್ಪಟ್ಟ ಅದೇ ವ್ಯಕ್ತಿ ನಾನಾಗಿದ್ದೇನೆ. ನನ್ನ ಬಗ್ಗೆ ಮತ್ತು ನನ್ನ ಕಾಲದ ಕುರಿತು ತೌರಾತ್, ಇಂಜೀಲ್ ಮತ್ತು ಖುರ್‌ಆನಿನಲ್ಲಿ ಪ್ರಸ್ತಾಪನೆಗಳಿವೆ. ಆಕಾಶದಲ್ಲಿ ಗ್ರಹಣಗಳು ಸಂಭವಿಸುವುವು ಮತ್ತು ಭೂಮಿಯಲ್ಲಿ ಭೀಕರವಾದ ಪ್ಲೇಗ್ ಸಂಕ್ರಮಿಸುವುದೆಂದು ಹೇಳಲಾಗಿದೆ." (ದಾಫಿಉಲ್ ಬಲಾ - ಪುಟ 18)

ಅವರು ಹೀಗೂ ಹೇಳಿದರು:

> "ಯಾರ ಕೈಯಲ್ಲಿ ನನ್ನ ಪ್ರಾಣವಿದೆಯೋ ಆ ದೇವನ ಪ್ರಮಾಣ ಮಾಡಿ ನಾನು ಹೇಳುತ್ತೇನೆ: ನನ್ನ ಸತ್ಯಕ್ಕೆ ಸಾಕ್ಷಿಯಾಗಿ ಅವನು ಆಕಾಶದಲ್ಲಿ ಈ ದೃಷ್ಟಾಂತವನ್ನು ತೋರಿಸಿದ್ದಾನೆ. ಮೌಲವಿಗಳು ನನ್ನನ್ನು ದಜ್ಜಾಲ್, ಮಹಾಸುಳ್ಳುಗಾರ, ಕಾಫಿರ್ ಎಂದು ಜರೆಯುವ ಸಂದರ್ಭದಲ್ಲಿ ಈ ದೃಷ್ಟಾಂತವನ್ನು ಅವನು ತೋರಿಸಿದ್ದಾನೆ. ಇಪ್ಪತ್ತು ವರ್ಷಗಳ ಮುಂಚೆ ನಾನು 'ಬರಾಹೀನೆ ಅಹ್ಮದಿಯಾ'ದಲ್ಲಿ ಸೂಚಿಸಿದ ದೃಷ್ಟಾಂತ ಇದೇ ಆಗಿದೆ.
>
> "ಅವರೊಡನೆ ಹೇಳಿರಿ-ನೀವು ನಂಬಿದರೂ ನಂಬದಿದ್ದರೂ, ಸ್ವೀಕರಿಸಿದರೂ ಸ್ವೀಕರಿಸದಿದ್ದರೂ, ನನ್ನ ಬಳಿ ಅಲ್ಲಾಹನ ಸಾಕ್ಷ್ಯವಿದೆ. ನನ್ನ ಸತ್ಯತೆಯನ್ನು ಸಮರ್ಥಿಸಲಿಕ್ಕೆ ದೇವರಿಂದ ಅನೇಕ ಪುರಾವೆಗಳು ಪ್ರಕಟವಾಗಿದ್ದರೂ ಲಕ್ಷಗಟ್ಟಲೆ ಜನರು ಸಾಕ್ಷ್ಯವಹಿಸಿದ ನೂರಕ್ಕಿಂತ ಹೆಚ್ಚು ಭವಿಷ್ಯವಾಣಿಗಳು ಈಡೇರಿದ್ದರೂ ಪ್ರವಾದಿ ಆದಂ (ಅ) ಮೊದಲ್ಗೊಂಡು ಈ ವರೆಗೆ ಬೇರೆ ಯಾರಿಗೂ ಇಂತಹ ದೃಷ್ಟಾಂತ ನೀಡಲ್ಪಟ್ಟಿಲ್ಲ ವೆಂದು ಈ ದಿವ್ಯವಾಣಿಯಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆಯೆಂಬುದನ್ನು ನೆನಪಿಡಬೇಕು. ಒಟ್ಟಾರೆ, ಈ ದೃಷ್ಟಾಂತವು ನನ್ನ ಸತ್ಯತೆಗೆ ಸಾಕ್ಷ್ಯವಾಗಿದೆಯೆಂದು ಕಅ್‌ಬದ ಮುಂದೆ ನಿಂತು ಪ್ರಮಾಣ ಮಾಡಲು ನನಗೆ ಸಾಧ್ಯವಿದೆ."
>
> (ದಾಫಿಉಲ್ ಬಲಾ - ಪುಟ 18)

ತನ್ನ ಒಂದು ಕವಿತೆಯಲ್ಲಿ ವಾಗ್ದತ್ತ ಮಸೀಹರು ಈ ರೀತಿ ಬರೆದರು:

> "ರಕ್ತಪಾತಕ್ಕೆ ಕಾರಣವಾಗುವ ಓರ್ವ ಮಹ್‌ದಿಯ ಆಗಮನವಾಗಿ
> ಅವಿಶ್ವಾಸಿಗಳನ್ನು ಕೊಂದು ಧರ್ಮ ಏಳಿಗೆ ಹೊಂದುವಂತೆ
> ಮಾಡುವರೆಂಬ ಭಾವನೆ - ಎಲೈ ಅಜ್ಞಾನಿಗಳೇ ಸಂಪೂರ್ಣ
> ವಾಗಿಯೂ ತಪ್ಪು.
> ಇವೆಲ್ಲ ಅಸಂಬದ್ಧ ಮತ್ತು ಆಧಾರರಹಿತ-
> ಅವು ಅಭಿವೃದ್ಧಿ ಹೊಂದಲಾರವು.
> ಎಲೈ ನನ್ನ ಪ್ರಿಯ ಜನರೆ, ಆಗಮಿಸಲಿಕ್ಕಿದ್ದವರು ಆಗಮಿಸಿಯಾಗಿದೆ.
> ಸೂರ್ಯ ಮತ್ತು ಚಂದ್ರ ಈ ರಹಸ್ಯವನ್ನು ನಿಮಗೆ
> ಬಹಿರಂಗಪಡಿಸಿವೆ."
>
> (ದುರ್ರೆ ಸಮೀನ್)

ಇನ್ನೊಂದೆಡೆಯಲ್ಲಿ ಅವರು ಹೀಗೆ ಹೇಳಿದರು:

> "ನನ್ನ ಬಳಿಕ, ಬೇರೆಯವರನ್ನು ನೀವು ನಿರೀಕ್ಷಿಸಿ ಏನು ಪ್ರಯೋಜನ,
> ಪಶ್ಚಾತ್ತಾಪಪಡಿರಿ, ಒಬ್ಬನು ಎಷ್ಟು ಕಾಲ ಬದುಕುವನೆಂದು
> ಯಾರಿಗೂ ತಿಳಿಯದು."
>
> (ದುರ್ರೆ ಸಮೀನ್)

ಓ ಅಲ್ಲಾಹ್, ನಿನ್ನ ಅನುಗ್ರಹಗಳನ್ನು ಮುಹಮ್ಮದ್ ಪೈಗಂಬರ್ (ಸ.)ರವರ ಮೇಲೆ ಮತ್ತು ಅವರ ಸಂತತಿಗಳ ಮೇಲೆ ಸುರಿಸು.

ಸರ್ವಲೋಕ ಪರಿಪಾಲಕನಾದ ಅಲ್ಲಾಹನಿಗೆ ಸರ್ವಸ್ತುತಿ ಸ್ತೋತ್ರಗಳು.

ಭಾಷಾಂತರ : ಮುಹಮ್ಮದ್ ಯೂಸುಫ್.

ಯುಗರಶ್ಮಿಗೆ
ಚಂದಾದಾರರಾಗಿರಿ.

THE

# MALAYALAM ALMANAC

## 1894

മലയാള

# പഞ്ചാംഗം

൧൮൯൪

| | |
|---|---|
| കല്യബ്ദം | ൪൯൯൪ — ൪൯൯൫ |
| ശാലിവാഹനശകം | ൧൮൧൫ — ൧൮൧൬ |
| വിക്രമാദിത്യശകം | ൧൯൫൦ — ൧൯൫൧ |
| കൊല്ലവർഷം | ൧൦൬൯ — ൧൦൭൦ |
| മുഹമ്മദീയവർഷം | ൧൩൧൧ — ൧൩൧൨ |
| ഫസലിവർഷം | ൧൩൦൩ — ൧൩൦൪ |
| യഹൂദവർഷം | ൫൬൫൪ — ൫൬൫൫ |
| ചാന്ദ്രമാനവർഷം | വിജയ — ജയ |

ക്രിസ്ത്വാബ്ദം ൩൬൫ നാൾ

MANGALORE

PRINTED AT THE BASEL MISSION PRESS

ಮಂಗಳೂರಿನ ಬಾಸೆಲ್ ಮಿಶನ್ ಪ್ರೆಸ್‌ನಿಂದ ಪ್ರಕಟಿಸಲ್ಪಟ್ಟ 1894ರ ಮಲಯಾಳಂ ಪಂಚಾಂಗ

# ൧൮൯൪-ഇലെ ഗ്രഹണങ്ങൾ.

ഈ കൊല്ലത്തിൽ രണ്ടു സൂൎയ്യഗ്രഹണവും രണ്ടു സോമഗ്രഹണവും സംഭവിക്കുന്നതിൽ മലയാളത്തിൽ മൂന്നു പ്രത്യക്ഷമാകും.

൧. മാൎച്ച് ൨൧-ാം നു (മീനം ൯-ാം നു) ബുധനാഴ്ച വൈകുന്നേരം അത്തംനക്ഷത്രം കന്യക്കൂറിൽ ചന്ദ്രഗ്രഹണസംഭവം.

| കോഴിക്കോട്ടുസമയം | | മണി | മിനുട്ട | മദ്രാസ് സമയം | മണി | മിനുട്ട. |
|---|---|---|---|---|---|---|
| സ്പൎശകാലം | വൈകുന്നേരം | ൬ | ൨൮॥ | വൈകുന്നേരം | ൬ | ൪൭ |
| മദ്ധ്യകാലം | ,, | ൭ | ൨൩॥। | ,, | ൭ | ൪൨ |
| മോചനകാലം | ,, | ൮ | ൧൮॥। | ,, | ൮ | ൩൬ |
| ആദ്യന്തം | | | | | ൧ | ൪൯ |

സൂചന. ആഗ്നേയകോണിൽനിന്നു സ്പൎശം. ദക്ഷിണഭാഗത്തിൽ മദ്ധ്യം കാൽമണ്ഡലം ഗ്രസിച്ചിരിക്കും. നിരൃതികോണിൽ മോചനം. ഈ ഗ്രഹണം മലയാളത്തിൽ എല്ലാടവും പ്രത്യക്ഷം.

൨. ഏപ്രിൽ ൬-ാം നു (മീനം ൨൫-ാം നു) വെള്ളിയാഴ്ച പകൽ രേവതിനക്ഷത്രം മീനക്കൂറിൽ സൂൎയ്യഗ്രഹണസംഭവം.

| കോഴിക്കോട്ടുസമയം | മണി | മിനുട്ട | മദ്രാസ് സമയം | മണി | മിനുട്ട. |
|---|---|---|---|---|---|
| സ്പൎശകാലം | ൬ | ൩൨ | | ൬ | ൫൦ |
| മദ്ധ്യകാലം | ൭ | ൩൭॥ | | ൭ | ൫൫ |
| മോചനകാലം | ൮ | ൫൧ | | ൯ | ൯ |
| ആദ്യന്തം | | | | ൨ | ൧൯ |

സൂചന. നിരൃതികോണിൽനിന്നു സ്പൎശം. വടക്കേഭാഗത്തു $\frac{24}{25}$ മണ്ഡലം ഗ്രസിച്ചിരിക്കും. ഈശാനകോണിൽ മോചനം. ഈ ഗ്രഹണം മലയാളത്തിൽ എല്ലാടവും പ്രത്യക്ഷം.

൩. സെപ്തെംബ്ര ൧൫-ാം നു ചന്ദ്രഗ്രഹണസംഭവം. അമേരിക്കാഖണ്ഡത്തിൽ പ്രത്യക്ഷം. മലയാളത്തിൽ അപ്രത്യക്ഷം.

൪. സെപ്തെംബ്ര ൨൯-ാം നു (കന്നിമാസം ൧൪-ാം നു) ശനിയാഴ്ച പകൽ അത്തംനക്ഷത്രം കന്യക്കൂറിൽ സൂൎയ്യഗ്രഹണസംഭവം.

| കോഴിക്കോട്ടുസമയം | | മണി | മിനുട്ട | മദ്രാസ് സമയം | മണി | മിനുട്ട. |
|---|---|---|---|---|---|---|
| സ്പൎശകാലം | രാവിലെ | ൮ | ൩൧ | രാവിലെ | ൮ | ൪൯ |
| മദ്ധ്യകാലം | ,, | ൯ | ൨൫ | ,, | ൯ | ൪൩ |
| മോചനകാലം | ,, | ൧൦ | ൨൨ | ,, | ൧൦ | ൪൦ |
| ആദ്യന്തം | | | | | ൧ | ൫൧ |

സൂചന. നിരൃതികോണിൽനിന്നു സ്പൎശം. തെക്കേഭാഗം [illegible] മണ്ഡലം ഗ്രസിച്ചിരിക്കും. തെക്കേഭാഗത്തിൽ മോചനം. ഈ ഗ്രഹണവും മലയാളത്തിൽ എല്ലാടവും പ്രത്യക്ഷം.

൫. നവെമ്പ്ര ൧൦-ാം നു സംഭവിക്കുന്ന സൂൎയ്യബുധസമാഗമം മലയാളത്തിൽ അപ്രത്യക്ഷം. അമേരിക്കയിൽ പ്രത്യക്ഷം.

സൂചന. ഇപ്പോൾ നാടെങ്ങും സാധാരണമായി ഗഡിയാരത്തെ മദ്രാസ് സമയത്തിന്നനുസാരമായി ശരിയാക്കുന്നതുകൊണ്ട ഈ സൂക്ഷ്മത്തെ ധരിക്കാത്ത ചിലർ ഈ പഞ്ചാംഗത്തിന്ന ന്യൂനത ഉണ്ടെന്ന പറയാറുണ്ടല്ലോ. ആയാൽ അറിവില്ലാത്തവരുടെ ഭ്രമത്തെ കളവാനായിട്ടാണ ഞങ്ങൾ ഇക്കൊല്ലം മുതൽക്കാണ ഗ്രഹണാദികളുടെ വിവരണത്തിൽ കോഴിക്കോട്ടുസമയവും മദ്രാസ് സമയവും കൂടെ കാണിപ്പാനായി നിശ്ചയിച്ചിരിക്കുന്നു.

1894ರ ಗ್ರಹಣಗಳು: ಮಾರ್ಚ್ 21ರಂದು ಬುಧವಾರ ಸಂಜೆ ಚಂದ್ರಗ್ರಹಣವಾಗುವುದೆಂದೂ ಏಪ್ರಿಲ್ 6ರಂದು ಪೂರ್ವಾಹ್ನ ಸೂರ್ಯಗ್ರಹಣವಾಗುವುದೆಂದೂ ಇದರಲ್ಲಿ ಸೂಚಿಸಲಾಗಿದೆ.

1894

# MARCH

31 DAYS

മാഘഅമാവാസി

൭-ാം തിയ്യതി



കുംഭം — മീനം.

൧൮൯൪

മാർച്ച്

൩൧ ദിവസം

ഫാല്ഗു. പൌർണ്ണമാസി

൨൧-ാം തിയ്യതി

| ഇംഗ്ലീഷ് | | | | മലയാളം | | മുഹമ്മദീ. | | കൊല്ലം ൧൦൬൯ | | | |
|---|---|---|---|---|---|---|---|---|---|---|---|
| DATE | DAY | തീയ്യതി | ആഴ്ച | തീയ്യതി | മാസം | തീയ്യതി | മാസം | നക്ഷത്രം | | തിഥി | |
| | | | | | | | | | നാ. വിനാ. | | നാ. വിനാ. |
| 1 | Th | ൧ | വ്യാ | ൧൯ | | ൨൨ | | മൂ | ൪൭-൩൦ | ന | ൧൩-൪ |
| 2 | F | ൨ | വെ | ൨൦ | | ൨൩ | | പൂ | ൫൩-൫൧ | ദ | ൧൮-൫൫ |
| 3 | S | ൩ | ശ | ൨൧ | | ൨൪ | | ഉ | ൬൦-൦ | ഏ | ൨൪-൨൦ |
| 4 | SUN | ൪ | ഞാ | ൨൨ | | ൨൫ | | ഉ | ൦-൧൮ | ദ്വാ | ൨൮-൪൩ |
| 5 | M | ൫ | തി | ൨൩ | കുംഭം | ൨൬ | ശഅബാൻ | തി | ൫-൩൦ | ത്ര | ൩൨-൪൩ |
| 6 | Tu | ൬ | ചൊ | ൨൪ | | ൨൭ | | അ | ൧൩-൦ | ച | ൩൫-൫ |
| 7 | W | ൭ | ബു | ൨൫ | ● | ൨൮ | | ച | [illegible] | വ | ൩൬-൫൫ |
| 8 | Th | ൮ | വ്യാ | ൨൬ | | ൨൯ | | പൂ | ൧൫-൧൫ | പ്ര | ൩൬-൪൦ |
| 9 | F | ൯ | വെ | ൨൭ | | ൩൦ | | ഉ | ൧൬-൨൦ | ദ്വി | ൩൫-൫൩ |
| 10 | S | ൧൦ | ശ | ൨൮ | | ൧ | | രേ | ൧൫-൫൧ | തൃ | ൩൩-൨൫ |
| 11 | SUN | ൧൧ | ഞാ | ൨൯ | | ൨ | | അ | ൧൪-൫൧ | ച | ൩൦-൩ |
| 12 | M | ൧൨ | തി | ൩൦ | | ൩ | | ഭ | ൧൨-൧൫ | പ | ൨൫-൫൩ |
| 13 | Tu | ൧൩ | ചൊ | ൧ | | ൪ | | കാ | ൯-൩൩ | ഷ | ൨൧-൦ |
| 14 | W | ൧൪ | ബു | ൨ | | ൫ | | രോ | ൫-൩൦ | സ | ൧൫-൩൦ |
| 15 | Th | ൧൫ | വ്യാ | ൩ | | ൬ | റമളാൻ | മ | ൧-൩൨ | അ | ൩൨-൫ |
| 16 | F | ൧൬ | വെ | ൪ | | ൭ | | പു | ൫൩-൩൬ | ന | ൩-൫൪ |
| 17 | S | ൧൭ | ശ | ൫ | മീനം | ൮ | | പൂ | ൪൯-൫൦ | ഏ | ൫൨-൩൫ |
| 18 | SUN | ൧൮ | ഞാ | ൬ | | ൯ | | ആ | ൪൬-൩൦ | ദ്വാ | ൪൭-൦ |
| 19 | M | ൧൯ | തി | ൭ | | ൧൦ | | മ | ൪൩-൫൩ | ത്ര | ൪൨-൩൦ |
| 20 | Tu | ൨൦ | ചൊ | ൮ | | ൧൧ | | പൂ | ൪൧-൨൮ | ച | ൩൮-൪൫ |
| 21 | W | ൨൧ | ബു | ൯ | ○ | ൧൨ | | ഉ | ൪൦-൪൭ | വ | ൩൬-൨൦ |
| 22 | Th | ൨൨ | വ്യാ | ൧൦ | | ൧൩ | | അ | ൪൧-൦ | പ്ര | ൩൪-൩൦ |
| 23 | F | ൨൩ | വെ | ൧൧ | | ൧൪ | [illegible] | ചി | ൪൨-൧൭ | ദ്വി | ൩൪-൩ |
| 24 | S | ൨൪ | ശ | ൧൨ | | ൧൫ | | ചോ | ൪൫-൩ | തൃ | ൩൫-൫ |
| 25 | SUN | ൨൫ | ഞാ | ൧൩ | | ൧൬ | | വി | ൪൮-൪൫ | ച | ൩൬-൫൭ |
| 26 | M | ൨൬ | തി | ൧൪ | | ൧൭ | | അ | ൫൩-൩൨ | പ | ൪൦-൨൦ |
| 27 | Tu | ൨൭ | ചൊ | ൧൫ | | ൧൮ | | തൃ | ൫൯-൧൮ | ഷ | ൪൪-൪൫ |
| 28 | W | ൨൮ | ബു | ൧൬ | | ൧൯ | | മൂ | ൬൦-൦ | സ | ൪൯-൩൦ |
| 29 | Th | ൨൯ | വ്യാ | ൧൭ | | ൨൦ | | മൂ | ൫-൨൭ | അ | ൫൪-൩൦ |
| 30 | F | ൩൦ | വെ | ൧൮ | | ൨൧ | | പൂ | ൧൨-൦ | ന | ൫൯-൪൩ |
| 31 | S | ൩൧ | ശ | ൧൯ | | ൨൨ | | ഉ | ൧൮-൯ | ദ | ൬൦-൦ |

1894 ಮಾರ್ಚ್ 21ರಂದು ಬುಧವಾರ ಹಿಜ್‌ರಿ ಮಾಸ ರಮಝಾನ್ 12 ಎಂದು ಇದರಲ್ಲಿ ಕಾಣಬಹುದು. ಅಂದು ಸೂರ್ಯಾಸ್ತಮಾನದ ನಂತರ ಆರಂಭಿಸುವ 13ರಂದು ರಾತ್ರಿ ಚಂದ್ರಗ್ರಹಣವಾಯಿತು. (ಚಂದ್ರ ಗ್ರಹಣವಾಗಲು ಸಾಧ್ಯತೆಯಿರುವ ರಾತ್ರಿಗಳಲ್ಲಿ ಪ್ರಥಮ ರಾತ್ರಿ)

| 1894<br>**APRIL**<br>30 DAYS<br>[illegible] അമാവാസി<br>൬-ാം തിയ്യതി | <br>മീനം മേടം. | ൧൮൯൪<br>ഏപ്രിൽ<br>൩൦ ദിവസം<br>[illegible] ചൈത്രപൌൎണ്ണമി.<br>൨൦-ാം തിയ്യതി |
|---|---|---|

| ഇംഗ്ലീഷ് | | | | മലയാളം | | മുഹമ്മദീ. | |
|---|---|---|---|---|---|---|---|
| DATE | DAY | തിയ്യതി | ആഴ്ച | തിയ്യതി | മാസം | തിയ്യതി | മാസം |
| 1 | SUN | ൧ | ഞാ | ൨൦ | മീനം | ൨൩ | റംസാൻ |
| 2 | M | ൨ | തി | ൨൧ | | ൨൪ | |
| 3 | Tu | ൩ | ചൊ | ൨൨ | | ൨൫ | |
| 4 | W | ൪ | ബു | ൨൩ | | ൨൬ | |
| 5 | Th | ൫ | വ്യാ | ൨൪ | | ൨൭ | |
| 6 | F | ൬ | വെ | ൨൫ | ☉ | ൨൮ | |
| 7 | S | ൭ | ശ | ൨൬ | | ൨൯ | |
| 8 | SUN | ൮ | ഞാ | ൨൭ | | ൧ | ശവ്വാൽ |
| 9 | M | ൯ | തി | ൨൮ | | ൨ | |
| 10 | Tu | ൧൦ | ചൊ | ൨൯ | | ൩ | |
| 11 | W | ൧൧ | ബു | ൩൦ | | ൪ | |
| 12 | Th | ൧൨ | വ്യാ | ൧ | മേടം | ൫ | |
| 13 | F | ൧൩ | വെ | ൨ | | ൬ | |
| 14 | S | ൧൪ | ശ | ൩ | | ൭ | |
| 15 | SUN | ൧൫ | ഞാ | ൪ | | ൮ | |
| 16 | M | ൧൬ | തി | ൫ | | ൯ | |
| 17 | Tu | ൧൭ | ചൊ | ൬ | | ൧൦ | |
| 18 | W | ൧൮ | ബു | ൭ | | ൧൧ | |
| 19 | Th | ൧൯ | വ്യാ | ൮ | | ൧൨ | |
| 20 | F | ൨൦ | വെ | ൯ | ☉ | ൧൩ | |
| 21 | S | ൨൧ | ശ | ൧൦ | | ൧൪ | |
| 22 | SUN | ൨൨ | ഞാ | ൧൧ | | ൧൫ | |
| 23 | M | ൨൩ | തി | ൧൨ | | ൧൬ | |
| 24 | Tu | ൨൪ | ചൊ | ൧൩ | | ൧൭ | |
| 25 | W | ൨൫ | ബു | ൧൪ | | ൧൮ | |
| 26 | Th | ൨൬ | വ്യാ | ൧൫ | | ൧൯ | |
| 27 | F | ൨൭ | വെ | ൧൬ | | ൨൦ | |
| 28 | S | ൨൮ | ശ | ൧൭ | | ൨൧ | |
| 29 | SUN | ൨൯ | ഞാ | ൧൮ | | ൨൨ | |
| 30 | M | ൩൦ | തി | ൧൯ | | ൨൩ | |

കൊല്ലം ൧൦൬൯

| നക്ഷത്രം | നാ. വിനാ. |
|---|---|
| തി | ൨൩-൪൨ |
| അ | ൨൮-൫ |
| ച | ൩൨-൦ |
| പൂ | ൩൪-൯ |
| ഉ | ൩൫-൧൮ |
| രേ | ൩൫-൨൦ |
| അ | ൩൫-൪൨ |
| ഭ | ൩൪-൩ |
| കാ | ൩൧-൩൦ |
| രോ | ൨൮-൭ |
| മ | ൨൪-൯ |
| തി | ൧൯-൫൭ |
| പു | ൧൫-൧ |
| പൂ | ൧൧-൧൫ |
| ആ | ൭-൩൦ |
| മ | ൪-൨൧ |
| പൂ | ൨-൧ |
| ഉ | ൦-൪൫ |
| അ | ൦-൩൬ |
| ചി | ൧-൩൯ |
| ചോ | ൩-൯ |
| വി | ൭-൧൭ |
| അ | ൧൧-൨൯ |
| തൃ | ൧൬-൨൬ |
| മൂ | ൨൧-൫൯ |
| പൂ | ൨൭-൪൫ |
| ഉ | ൩൩-൩൨ |
| തി | ൩൯-൫ |
| അ | ൪൪-൧൧ |
| ച | ൪൮-൩൬ |

| തിഥി | നാ. വിനാ. |
|---|---|
| ദ | ൪-൫ |
| ഏ | ൯-൩൦ |
| ദ്വാ | ൯-൫൫ |
| ത്ര | ൧൧-൫ |
| ച | ൧൦-൫൫ |
| വ | ൧൦-൫ |
| പ്ര | ൮-൩൫ |
| ദ്വി | ൫-൦ |
| തൃ | ൦-൨൫ |
| പ | ൫൪-൫൫ |
| ഷ | ൪൮-൪൫ |
| സ | ൪൨-൧൩ |
| അ | ൩൫-൩൫ |
| ന | ൨൯-൫ |
| ദ | ൨൩-൬ |
| ഏ | ൧൭-൩ |
| ദ്വാ | ൧൩-൨൭ |
| ത്ര | ൧൦-൧൫ |
| ച | ൯-൫൬ |
| വ | ൭-൪൦ |
| പ്ര | ൮-൧൬ |
| ദ്വി | ൧൦-൨൦ |
| തൃ | ൧൩-൧൦ |
| ച | ൧൬-൬ |
| പ | ൨൧-൧൫ |
| ഷ | ൨൫-൬൦ |
| സ | ൩൦-൨൯ |
| അ | ൩൪-൪൨ |
| ന | ൩൮-൩൨ |
| ദ | ൪൧-൪൩ |

1894 ಏಪ್ರಿಲ್ 6ರಂದು ಹಿಜರಿ ಮಾಸ ರಮಝಾನ್ 28 ಎಂದು ಇಲ್ಲಿ ಕಾಣಬಹುದು. ಅಂದು ಸೂರ್ಯಗ್ರಹಣವಾಯಿತು.
(ಸೂರ್ಯಗ್ರಹಣವಾಗಲು ಸಾಧ್ಯತೆಯಿರುವ ಹಗಲುಗಳಲ್ಲಿ ಮಧ್ಯದ ಹಗಲು)

# 1894 ಎಪ್ರಿಲ್ 6ನೇ ಶುಕ್ರವಾರದ ಸೂರ್ಯಗ್ರಹಣವು

ಈ ವರ್ಷ ಇದೇ ಪಾಲ್ಗುನ ಬಹುಳ ಅಮಾವಾಸ್ಯೆ ಶುಕ್ರವಾರ (ಎಪ್ರಿಲ್ 6) ಸಂಭವಿಸಲಿಕ್ಕಿರುವ ಕಂಕಣ ಸೂರ್ಯಗ್ರಹಣವು (Annular Eclipse) ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡಿನಲ್ಲಿ (ಪಶ್ಚಿಮ ತೀರ) ಹಿಡಿದು (ಪೂರ್ವ ತೀರ) ವಿಶಾಖಪಟ್ಣದ ವರೆಗೆ ಮುಂದರಿಸಿ ಹೋಗುತ್ತದೆ. ಈ ಗೋಲರೇಖೆಯ ಮಧ್ಯದಿಂದ ಆಚೆಗೂ ಈಚೆಗೂ ಉತ್ತರ ದಕ್ಷಿಣ ಎರಡು ಎರಡೂವರೆ ಹರದಾರಿಯೊಳಗೆ ಇರುವವರಿಗೆ ಕಂಕಣಾಕೃತಿಯೇ ತೋರುವುದು. ಕಾಸರಗೋಡಿನಲ್ಲಿ ಮದ್ರಾಸ್ ಸಮಯ ಘಂಟೆ 7 ನಿಮಿಷ 57 ಸೆಕುಂದ 6ಕ್ಕೆ (ಕಿರಣಮಯ) ಕಂಕಣಾಕಾರವನ್ನೇ ಲಕ್ಷಿಸಬಹುದು. ಕಂಕಣಾರಂಭದಿಂದ ಕಂಕಣಾಂತವು 29 ಸೆಕುಂದ ಇದ್ದೀತು. ಮಂಗಳೂರಿಗೆ ಅದು ಕಂಕಣಾಕಾರವಲ್ಲ, ಸಪೂರವಾದ ಉತ್ತರಭಾಗದ ಸೂರ್ಯರೇಖೆಯು ಕಾಣಬರುವದು. ದಕ್ಷಿಣ ಭಾಗದಲ್ಲಿ ಸೂರ್ಯ ತೋರದು. ನೀಲೇಶ್ವರದಲ್ಲಿರುವವರಿಗೆ ಸೂರ್ಯನ ದಕ್ಷಿಣ ಭಾಗ ಸ್ವಲ್ಪ ಮಾತ್ರ ರೇಖಾಕೃತಿ ತೋರುವದು.

ಕಂಕಣಾರಂಭವು ಅರಬಿ ಸಮುದ್ರದಿಂದಾಗಿ ಕಾಸರಗೋಡಿನಲ್ಲಿ ಭೂಭಾಗಕ್ಕೆ ಮುಟ್ಟಿ, ಬೇವುಂಜೆ, ಕಾವು, ಕಡಬ, ಮರ್ದಾಳ, ಕುಂದ್ಯಾರು ಈ ಗ್ರಾಮಗಳನ್ನು ಸರಿಯಾಗಿ ದಾಟಿ, ಮೈಸೂರು ಸೀಮೆಯ ಎತ್ತರ ಭಾಗಕ್ಕೆ ಮುನ್ನಡದು, ಬಳ್ಳಾರಿಯ ಹತ್ತಿರವಾಗಿ ವಿಶಾಖಪಟ್ಟಣದ ವರೆಗೆ ಭೂಭಾಗಕ್ಕೆ, ಅಲ್ಲಿಂದ ಮುಂದೆ ಬಂಗಾಳಕೊಲ್ಲಿಗೆ, ಅಲ್ಲಿಂದ ಬರ್ಮ, ಚೀನ, ಉತ್ತರ ರುಷ್ಯಕ್ಕೆ ಹೋಗುವಾಗ ಛಾದಕವಾದ ಚಂದ್ರಬಿಂಬವು ಹೆಚ್ಚುತ್ತಾ ಪೂರ್ಣಗ್ರಹಣವಾಗಿ ತೋರುವುದೆಂಬುದಕ್ಕೆ ಸಂದೇಹವಿಲ್ಲ.

ಮಂಗಳೂರು — **P. Balappaya, Pandit**

ತಾರೀಕು 5 ಮಾರ್ಚ್ 1894

**(ಕ್ರೈಸ್ತ ಸಭಾಪತ್ರವು, ಎಪ್ರಿಲ್ 1894- ಪುಟ 158,159, Printed at the Basel Mision Press, Mangalore)**

## SOLAR ECLIPSE SEEN IN LAHORE

The eclipse was perfectly observed at Lahore yesterday between 7-30 and 9-30 A.M. While it lasted the sunlight was so much reduced as remind one of the pleasant sunshine only of an English summer's day.

**-The Civil and Military Gazette**
**Lahore- April 7, 1894.**

## ದೇವಾನ್ವೇಷಣೆಯ ಅವಶ್ಯಕತೆ (7ನೇ ಪುಟದಿಂದ)

ಸಾರಾಂಶಭಾವವನ್ನು ದೈವೀಪ್ರಕಾಶನ ಅದರ ವ್ಯಾಖ್ಯಾನದಿಂದ ವಿವರಿಸಿಕೊಡುವಂತೆ ತೋಚುವುದು. ಮನುಷ್ಯನ ಪ್ರಕೃತಿ ಮತ್ತು ಬುದ್ಧಿ ಹೇಳುವಂತೆ ದೇವನಿರಬಹುದು ಅಥವಾ ದೇವನಿರಬೇಕಾಗಿದೆ ಎಂದಲ್ಲ ಧರ್ಮ ಹೇಳುವುದು. ಬದಲು, ಧರ್ಮವು ದೃಢವಾಗಿ ಹೇಳುತ್ತದೆ: ನಮಗೊಬ್ಬ ದೇವನಿದ್ದಾನೆ; ಅವನು ನಮ್ಮ ಸೃಷ್ಟಿಕರ್ತ ಮತ್ತು ಒಡೆಯನಾಗಿದ್ದಾನೆ; ಅವನು ನಮ್ಮನ್ನು ವಿಶಿಷ್ಟ ಉದ್ದೇಶಾನುಸಾರ ಲೋಕಕ್ಕೆ ಕಳುಹಿಸಿದ್ದಾನೆ. ವಿವಿಧ ಧರ್ಮಗ್ರಂಥಗಳ ಅಧ್ಯಾಪನೆಗಳಲ್ಲಿ ಎಷ್ಟೇ ಭಿನ್ನತೆಗಳಿದ್ದರೂ ಈ ವಿಚಾರದಲ್ಲಿ ಅವು ಏಕಾಭಿಪ್ರಾಯ ಹೊಂದಿವೆ – ಈ ಬ್ರಹ್ಮಾಂಡಕ್ಕೆ ಒಬ್ಬ ಸೃಷ್ಟಿಕರ್ತನೂ ಒಡೆಯನೂ ಇದ್ದಾನೆ; ಅವನ ನಿಯಂತ್ರಣದಲ್ಲಿ ನಮ್ಮ ಜೀವವಿದೆ; ಅವನು ನಮ್ಮ ಜೀವಿತಕ್ಕೆ ಒಂದು ಗುರಿಯನ್ನು ನಿಶ್ಚಯಿಸಿದ್ದಾನೆ; ಅದನ್ನು ಸಾಧಿಸುವ ಮಾರ್ಗಗಳನ್ನು ಸಹ ಅವನೇ ನಮಗೆ ಹೇಳಿಕೊಟ್ಟಿದ್ದಾನೆ. ಮಾತ್ರವಲ್ಲ, ಮರಣದಿಂದ ಮನುಷ್ಯನ ಜೀವಿತ ಕೊನೆಗೊಳ್ಳುವುದಿಲ್ಲವೆಂದೂ ಅದರ ನಂತರ ಬೇರೊಂದು ಜೀವಿತವಿದೆಯೆಂದೂ ಅಲ್ಲಿ ಮನುಷ್ಯನು ಇಹಲೋಕ ಜೀವಿತದ ಕರ್ಮಗಳ ಪ್ರತಿಫಲವನ್ನು ಪಡೆಯುವನೆಂದೂ ಇತ್ಯಾದಿಯಾಗಿ ಆ ಧರ್ಮಗ್ರಂಥಗಳು ಹೇಳುತ್ತವೆ. ಧರ್ಮಗಳ ಈ ಏಕಕಂಠವಾದ ಸಾಕ್ಷ್ಯ ನಮ್ಮ ಮುಂದೆ ದೇವಾಸ್ತಿತ್ವಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು, ನಾವು ಅದರ ಅನ್ವೇಷಣೆಯಿಂದ ಯಾವ ರೀತಿಯಲ್ಲೂ ಹಿಂದೆ ಸರಿಯದ ರೀತಿಯಲ್ಲಿ ನಮ್ಮ ಮುಂದಿಡುತ್ತದೆ. ಒಂದು ತೀರ್ಮಾನಕ್ಕೆ ಬರುವ ತನಕ ಅದನ್ನು ಮುಂದುವರಿಸಲೇ ಬೇಕಾಗುತ್ತದೆ. ಕಾರಣವೇನೆಂದರೆ, ದೇವರ ಬಗ್ಗೆ ಧರ್ಮಗಳು ನಮ್ಮ ಮುಂದಿರಿಸುವ ವಿಚಾರಗಳು ಸತ್ಯವೆಂದಾದರೆ, ಆ ದೇವನನ್ನು ನಿರ್ಲಕ್ಷ್ಯ ಮಾಡುವುದೆಂಬುದು ನಮಗೆ ಈ ಲೋಕದಲ್ಲಿ ಉಂಟಾಗಲು ಸಾಧ್ಯತೆಯಿರುವ ಎಲ್ಲ ನಷ್ಟಗಳಿಗಿಂತ ದೊಡ್ಡದಾಗಿರಬಹುದು. ಅಂದರೆ, ಆ ಅಲಕ್ಷ್ಯದ ಅರ್ಥ, ನಮ್ಮ ಇಡೀ ಜೀವಿತ ನಿಷ್ಫಲವಾಯಿತೆಂದಾಗಿದೆ. ಆ ದೇವನನ್ನು ಕಂಡು ಹಿಡಿದು ಅವನೊಡನೆ ಸಂಬಂಧವನ್ನು ಸ್ಥಾಪಿಸುವುದು ಈ ಲೋಕದಲ್ಲಿ ಸಿಗಲು ಸಾಧ್ಯತೆಯಿರುವ ಎಲ್ಲ ಲಾಭಗಳಿಗಿಂತ ದೊಡ್ಡದಾಗಿರಬಹುದು. ಕಾರಣವೇನೆಂದರೆ, ದೇವನೊಡನಿರುವ ಆ ಸಂಬಂಧದ ಅರ್ಥ, ಯಾವ ಉದ್ದೇಶಾರ್ಥ ನಾವು ಇಲ್ಲಿಗೆ ಕಳುಹಿಸ ಲ್ಪಟ್ಟಿದ್ದೇವೋ ಆ ಉದ್ದೇಶವನ್ನು ನಾವು ಸಾಧಿಸಿದೆವು ಎಂದಾಗಿದೆ. ಸಂಕ್ಷಿಪ್ತದಲ್ಲಿ, ದೇವಾನ್ವೇಷಣೆ ಮಾಡುವುದು ಬಹಳ ಪ್ರಧಾನವಾದ ವಿಷಯವಾಗಿದೆ. ನಿಮಿಷಾರ್ಧ ಕಾಲಕ್ಕಾದರೂ ಇದನ್ನು ಅವಗಣಿಸಲು ಯಾವ ಬುದ್ಧಿವಂತನಿಗೂ ಸಾಧ್ಯವಿಲ್ಲ.

Quit A Rare Event:

**It Occured in Qadian**

# FREQUENCY OF ECLIPSES IN THE MONTH OF RAMAZAN

**SALEH MOHAMMED ALLADIN AND G. MOHAN BALLABH**

Centre of Advanced Study in Astronomy, Osmania University, Hyderabad- 500 007

**Abstract:** Astronomy has its contact with various branches of science on one hand and religion on the other. The present paper has been motivated by a prophecy found in Islamic literature according to which lunar and solar eclipses on particualr dates of Ramazan will serve as signs for a great Religious Reformer. It is found that in a period of about 22 years, we generally have two consecutive years in which both lunar and solar eclipses occur in the month of Ramazan over some part of the world or the other. But the occurence of both the eclipeses on the specified dates of Ramazan from a given place is quite rare.

The study of the frequency of eclipses dates back to ancient times. The ancient Bobylonians noted that eclipses occur in same sequence after a period of about 18 years; known as the Saros. The sequence of eclipses recurs after 18 years and 10 and 1/3 days or 11 and 1/3 days depending upon the number of leap years these contain. This period corresponds to nearly 243 lunations (a lunation is the interval between one new moon to the next new moon) and nearly 242 draconic months (a draconic month is the time taken by the moon to go from one node to the same node again.) Resonance betweeen these two periods produces the Saros period, after which the moon and the sun return very nearly to the same position. It also turns out that this interval is nearly equal to 239 anomalistic months (an anomalistic month is the interval between moon's two sucessive crossing of the perigee).

We appreciate the statement made by professor Das Gupta in the Inaugural Session that astronomy is a link between science and spirituality. We have been motivated to study the frequency of the eclipses in the month of Ramazan by a well known prophecy found in Islamic literature according to which lunar and solar eclipses on particular dates of Ramazan would serve as signs of a great Religious Reformer. Darqutani, an eminent authority on Hadees, i.e. Sayings of the Holy Prophet Muhammad (may peace and blessings of God be on him), who lived from 918 to 995 of the Christian Era (C.E.) had recorded that the Holy Prophet (peace and blessings of God be on him) said:

"For our Mahdi (Spiritual Reformer) there are two signs which have never appeared before since the creation of the heavens and the earth, namely the moon will be eclipsed in the first night in Ramazan (i.e. on the first of the nights on which lunar eclipses can occur) and the sun will be eclipsed on the middle day of Ramazan (i.e. on the middle one of the days on which solar eclipse can occur); and these signs have not appeared since the creation of the heavens and the earth."

There are prophecies in other religions also that eclipses will serve as signs for a great spiritual reformer.*[1]

A lunar eclipse occurs at full moon and a solar at new moon. The month of the Islamic Calendar begins with the sighting of the lunar crescent and from the new moon as given in astronomical almanacs. Hence the dates of the

Islamic Calendar may differ from place to place. If the Hijri Calendar is used, the dates on which a lunar eclipse can occur are 13, 14 and 15; and the dates on which a solar eclipse can occur are 27, 28 and 292.*2 The prophecy thus requires that the lunar eclipse should occur on the 13th Ramazan and the solar eclipse on the 28th Ramazan.

Hazrat Mirza Ghulam Ahmad, the Holy Founder of the Ahmadiyya Muslim Community (peace be on him) claimed to be the Promised Divine Reformer in the year 1891 in Qadian, Punjab, on the basis of Divine Revelations which he received. The prophesied eclipses occured in 1894 and he declared on oath that the lunar and solar eclipses were Divine Signs for him. The lunar and solar eclipses both occured in the month of Ramazan on the specified dates at Qadian in 1894 (1311 Hijri).

It should be noted that the prophecy does not say that lunar and solar eclipses never occurred on the specified dates of Ramazan in the past, but it does clearly say that such eclipses never occurred earlier as Signs. Nevertheless it is of interest to study how rare is the occurrence of the lunar and solar eclipses on the specified dates.

We have investigated the following questions:

(i) How often do lunar and solar eclipses both occur in Ramazan?

(ii) How ofteen do these eclipses occur on the specified dates of Ramazan at Qadian (75° 23'E, 31° 49'N)?

We have studied the eclipses of the two centuries 1800-2000. We used Prof. T.R. Von Oppolzer's Canon of Eclipses*3 to obtain the lunar and solar eclipses that occurred in Ramazan. The moon Tracker and the Sun Tracker Software of Zephyr Services*4 were used to obtain maps indicating the regions from which eclipses could be seen. The times of the new moon preceding Ramazan were taken from the U.S. Naval Observatory Circulars.*5 These were used to estimate the dates of Ramazan at eclipses at Qadian.

Our results are given in Table 1. It may be noted from the Table that in a period of about 22 years, we generally have two consecutive years in which both lunar and solar eclipses occur in the month of Ramazan over some part of the earth or the other. In the two centuries 1800-2000 C.E., both lunar and solar eclipses occured in the month of Ramazan 17 times. Out of these, 9 times neither the lunar eclipse nor the solar eclipse was visible from Qadian, 6 times the lunar eclipse was visible but the solar eclipse was not visible. Once the solar eclipse was visible but the lunar eclipse was not visible. Only in the year 1894, both the eclipses were visible from Qadian and these also occured at Qadian on the prophesied dates.

Our study thus shows that although eclipses are phenomena that occur frequently, the occurrence of lunar and solar eclipses on the specified dates of the Islamic Calendar at a specified place on the Earth is quite a rare event. The Holy Prophet (peace and blessings of God be on him) made such a marvellous prophecy which was exactly fulfilled in our age.

**References:**


*1. Saleh Mohammed Alladin, The Review of Religions (London) Vol. 86, No. 11, November 1989, pp. 3-24)

*2. Saleh Mohammed Alladin and G. Mohan Ballabh, Mahavisva (Calcutta) Vol. 2, No. 1, 1989, pp. 8-11.

*3. T.R. Von Oppolzer, Canon of Eclipses, Dover Publications, New York, 1962.

*4. The Moon Tracker and the Sun Tracker Software of Zephyr Services, 1900 Murray Ave, Dept. A, Pittsburgh, Pa 15217, U.S.A.

*5. U.S. Naval Observatory Circulars No. 112 (dated April 8, 1966) and No. 119 (dated February 23, 1968).


**Paper Presented on the National Symposium on Panchang in Feb. 1992 at Calcutta.**

# FREQUENCY OF ECLIPSES IN THE MONTH OF RAMAZAN

**TABLE 1**

**Pairs of Eclipses Occuring in the Month of Ramazan During 1800-2000 C.E.**

| S. No. | Eclipse | Date & Type | Date & time (IST) of New Moon Preceding Ramazan Month | Date of First Ramazan at Qadian after sunset | Whether visible From Qadian | Hijri Date of Eclipse if Visible |
|---|---|---|---|---|---|---|
| 1. | 1807 | Nov 15 L P | 1807 Oct. 31 05 : 06 | | No | |
| | | Nov 29 S T | | | No | |
| 2. | 1808 | Nov 03 L T | 1808 Oct 19 22:11 | | No | |
| | | Nov 18 S P | | | No | |
| 3. | 1829 | Mar 20 L P | 1829 Mar 05 18:17 | Mar 06 | No | |
| | | Apr 24 S T | | | Yes | 1244, 15 R |
| 4. | 1830 | Mar 09 L T | 1830 Feb 23 10 : 19 | Feb 24 | No | |
| | | Mar 24 S P | | | Yes | 1245, 14 R |
| 5. | 1851 | Jul 13 L P | 1851 Jan 29 11 : 54 | | No | |
| | | Jul 28 S T | | | No | |
| 6. | 1872 | Nov 15 L P | 1872 Nov 01 10 : 57 | | No | |
| | | Nov 30 S P | | | No | |
| 7. | 1873 | Nov 04 L T | 1873 Oct 21 16 : 25 | Oct 22 | No | |
| | | Nov 20 S P | | | Yes | 1290, 14 R |
| 8. | 1894 | Mar 21 L P | 1894 Mar 07 19 : 47 | Mar 09 | Yes | 1311, 13 R |
| | | Apr 06 S T (A) | | | Yes | 1311, 28 R |
| 9. | 1895 | Mar 11 L T | 1895 Feb 24 22 : 12 | | No | |
| | | Mar 26 S P | | | No | |
| 10. | 1916 | Jul 14 L P | 1916 Jun 30 16 : 13 | | No | |
| | | Jul 30 S A | | | No | |
| 11. | 1917 | Jul 05 L T | 1917 Jun 19 18 : 31 | Jun 21 | Yes | 1335, 14 R |
| | | Jul 19 S P | | | No | |
| 12. | 1937 | Nov 18 L P | 1937 Nov 03 09 : 45 | | No | |
| | | Dec. 02 S A | | | No | |
| 13. | 1938 | Nov 07 L T | 1938 Oct 23 14 : 11 | Oct 24 | Yes | 1357, 15 R |
| | | Nov 22 S P | | | No | |
| 14. | 1959 | Mar 25 L P | 1959 Mar 09 16 : 21 | Mar 10 | Yes | 1378, 15 R |
| | | Apr 08 S | | | No | |
| 15. | 1960 | Mar 13 L T | 1960 Feb 26 11 : 44 | | No | |
| | | Mar 27 S P | | | No | |
| 16. | 1981 | Jul 17 L P | 1981 Jul 02 00 : 33 | Jul 03 | No | |
| | | Jul 31 S T | | | Yes | 1401, 28 R |
| 17. | 1982 | Jul 06 L T | 1982 Jun 21 17 : 22 | | No | |
| | | Jul 20 S P | | | No | |

Abbreviations : L= Lunar; S=Solar; T = Total; P= Partial; A=Annular; R=Ramazan

ಪ್ರತಿಕ್ರಿಯೆ

# ವಹಾಬಿ-ಮೌದೂದಿ-ಖುರಾಫಿ-ಕಾದಿಯಾನಿ

ಜಮಾಅತೆ ಇಸ್ಲಾಮಿ ಪಂಗಡದವರು ಮಂಗಳೂರಿನಿಂದ ಪ್ರಕಟಿಸುವ 'ಸನ್ಮಾರ್ಗ' ಎಂಬ ವಾರಪತ್ರಿಕೆಯ 1998ನೇ ಅಕ್ಟೋಬರ್ 11-17ರ ಸಂಚಿಕೆಯಲ್ಲಿ ಪ್ರಕಟವಾದ ಒಂದು ಪ್ರಶ್ನೋತ್ತರಕ್ಕೆ ನೀಡಲಾದ ಶೀರ್ಷಿಕೆಯಿದು. ಪ್ರಶ್ನೆ ಈ ರೀತಿಯಿದೆ: "ಅಹ್ಲೆ ಹದೀಸ್‌ನವರನ್ನು ವಹಾಬಿಗಳೆಂದೂ ಜಮಾ ಅತೆ ಇಸ್ಲಾಮಿಯವರನ್ನು ಮೌದೂದಿಗಳೆಂದೂ ಸುನ್ನಿಗಳನ್ನು ಖುರಾಫಿಗಳೆಂದೂ ಅಹ್ಮದಿಯರನ್ನು ಕಾದಿಯಾನಿಗಳೆಂದೂ ಕರೆಯಬಹುದೆ?" ಈ ಪ್ರಶ್ನೆಗೆ 'ಸನ್ಮಾರ್ಗ'ದ 'ಮುಜೀಬ್' ಉದ್ದವಾದ ಉತ್ತರ ನೀಡಿದ್ದಾರೆ. "ಯಾರನ್ನೂ ಅವರಿಗಿಷ್ಟವಿಲ್ಲದ ಹೆಸರಿನಿಂದ ಕರೆಯಬಾರದು. ಅದು ಪಾಪವಾಗಿದೆ" ಎಂಬ ಪ್ರಸ್ತಾವನೆಯೊಂದಿಗೆ ಉತ್ತರ ಪ್ರಾರಂಭವಾಗುತ್ತದೆ. ನಂತರ ಅದರ ಸಮರ್ಥನೆಗಾಗಿ ಪವಿತ್ರ ಖುರ್‌ಆನಿನ ಸೂರಃ ಅಲ್‌ಹುಜರಾತ್‌ನಿಂದ ಒಂದು ವಚನವನ್ನು ಉಲ್ಲೇಖಿಸಲಾಗಿದೆ. "......ಪರಸ್ಪರರನ್ನು ನಿಂದಿಸಬೇಡಿರಿ. ಒಬ್ಬರು ಇನ್ನೊಬ್ಬರನ್ನು ಅಡ್ಡ ಹೆಸರಿನಿಂದ ಕರೆಯಬೇಡಿರಿ. ಸತ್ಯ ವಿಶ್ವಾಸ ಸ್ವೀಕರಿಸಿದ ಬಳಿಕ ಕರ್ಮಭ್ರಷ್ಟತೆಯಲ್ಲಿ ಹೆಸರು ಗಳಿಸುವುದು ಬಹಳ ಕೆಟ್ಟದು. ಈ ನಿಲುಮೆಯನ್ನು ತೊರೆಯದವರು ಅಕ್ರಮಿಗಳಾಗಿರುವರು. (ಅಲ್ ಹುಜರಾತ್-11)".

ಇದಿಷ್ಟನ್ನು ಓದುವಾಗ ಜಮಾಅತೆ ಇಸ್ಲಾಮಿಯವರು ಸರಿದಾರಿಗೆ ಬಂದರೇ ಎಂದು ಯಾರಾದರೂ ಸಂತಸಪಡಬಹುದು. ಆದರೆ, ಉತ್ತರದ ನಂತರದ ಭಾಗ ನಮ್ಮನ್ನು ನಿರಾಶೆಗೊಳಿಸುತ್ತದೆ. ಜಮಾಅತೆ ಇಸ್ಲಾಮಿಯವರನ್ನು "ಕಾಫಿರ್" ಎಂದು ಹೇಳಿ ಇತರ ಮುಸ್ಲಿಂ ವಿಭಾಗದವರು ಫತ್ವಾ (ಧರ್ಮವಿಧಿ) ಹೊರಡಿಸಿದ್ದಾರೆ. ಮುಸ್ಲಿಂ ಸಮುದಾಯದಲ್ಲಿರುವ ಎಲ್ಲ ವಿಭಾಗದವರೂ ಪರಸ್ಪರರನ್ನು ಧರ್ಮಭ್ರಷ್ಟರು ಎಂದು ಘೋಷಿಸಿದ 'ಅಭಿಯಾನ'ದಿಂದ ಪಾರಾಗಲು ಜಮಾತೇ ಇಸ್ಲಾಮಿಗಳಿಗೂ ಸಾಧ್ಯವಾಗಲಿಲ್ಲ. ಇತರರು ತಮ್ಮನ್ನು ಕಾಫಿರ್ ಎಂದು ಹೇಳುವಾಗ 'ಸನ್ಮಾರ್ಗ'ದವರಿಗೆ ಅದನ್ನು ಸಹಿಸಲು ಸಾಧ್ಯವಾಗುವದಿಲ್ಲ. "ಕಲಿಮ ಹೇಳುವ ಯಾರನ್ನೂ ಕಾಫಿರ್ ಎಂದು ಹೇಳಬಾರದು" ಎಂದು ಆಗ ಅವರು ಹೇಳುತ್ತಾರೆ. ಅದೇ ರೀತಿ ಅವರನ್ನು "ಮೌದೂದಿಗಳು" ಎಂದು ಇತರರು ಕರೆಯುವಾಗಲೂ ಅವರಿಗೆ ಪವಿತ್ರ ಖುರ್‌ಆನಿನ ವಚನ ನೆನಪಿಗೆ ಬರುತ್ತದೆ. (ಮರುಕ್ಷಣದಲ್ಲಿ ಅದು ಮರೆತೂ ಬಿಡುತ್ತದೆ). ಮುಜೀಬ್ ತನ್ನ ಉತ್ತರದಲ್ಲಿ ವಿವರಿಸುತ್ತಾರೆ - "ಸೈಯದ್ ಅಬುಲ್ ಆಲಾ ಮೌದೂದಿಯವರು ಆ ಸಮಗ್ರ ಇಸ್ಲಾಂ ಧರ್ಮದ ಉತ್ಥಾನಕ್ಕಾಗಿ 'ಜಮಾಅತೆ ಇಸ್ಲಾಮಿ' ಎಂಬ ಆಂದೋಲನವನ್ನು ಆರಂಭಿಸಿದರು. ಅದನ್ನು 'ಮೌದೂದಿ ಆಂದೋಲನ'ವೆಂದು ಅವರು ಹೆಸರಿಸಲಿಲ್ಲ. ಆದರೆ, ಜಮಾಅತ್ ಮತ್ತು ಮೌದೂದಿ ವಿರೋಧಿಗಳು ಜಮಾ ಅತ್‌ನವರನ್ನು ಕೀಳಾಗಿಸಲಿಕ್ಕಾಗಿ ಅವರನ್ನು ಮೌದೂದಿಗಳೆಂದು ಕರೆಯುತ್ತಾರೆ. ಹಾಗೆ ಕರೆಯುವುದು ಸರಿಯಲ್ಲ."

ಹೌದು, ಜಮಾಅತೆ ಇಸ್ಲಾಮಿಯವರನ್ನು "ಮೌದೂದಿಗಳು" ಎಂದು ಕರೆಯುವುದು ಸರಿಯಲ್ಲ. ಯಾಕೆಂದರೆ ಅದರ ಸಂಸ್ಥಾಪಕರಾದ ಅಬುಲ್ ಆಲಾ ಮೌದೂದಿ ಅವರ ಪಂಥವನ್ನು ಮೌದೂದಿ ಆಂದೋಲನ ಎಂದು ಹೆಸರಿಸಿಲ್ಲ. ಯಾರನ್ನಾದರೂ ಅವರಿಗೆ ಇಷ್ಟವಿಲ್ಲದ ಅಡ್ಡ ಹೆಸರಿನಿಂದ ಸಂಬೋಧಿಸಬಾರದು ಎಂದು ಪವಿತ್ರ ಖುರ್‌ಆನ್ ಆಜ್ಞಾಪಿಸುತ್ತಿರುವುದರಿಂದ ಇವರನ್ನು "ಮೌದೂದಿಗಳು" ಎಂದು ಕರೆಯುವುದು ಸರಿಯಲ್ಲ. ಇದು ಮುಜೀಬರ ವಾದ ಸರಣಿ-- ಸರಿ. ಆದರೆ, ನ್ಯಾಯದ ತಕ್ಕಡಿ ಯಾವಾಗಲೂ ಒಂದೇ ರೀತಿ ಇರಬೇಕೆಂಬ ಪ್ರಾಥಮಿಕವಾದ ನ್ಯಾಯನಿಷ್ಠೆ ಕೂಡ ಇವರಿಗೆ ಇಲ್ಲವೆಂದು ಕಾಣುವಾಗ ಆಶ್ಚರ್ಯವಾಗುತ್ತದೆ. ಒಂದು ವಿಭಾಗದವರೊಡನೆ ನಿಮಗೆ ದ್ವೇಷವಿದ್ದರೂ ಸಹ ಅವರೊಡನೆ ಅನ್ಯಾಯದಿಂದ ವರ್ತಿಸಬೇಡಿರಿ ಎಂದು ಪವಿತ್ರ ಖುರ್‌ಆನ್ ಆಜ್ಞಾಪಿಸುತ್ತದೆ (5:9). ಆದರೆ ಈ ಜಮಾಅತೆ ಇಸ್ಲಾಮಿಯವರಿಗೆ ಅದರ ಪರಿವೆಯೇ ಇಲ್ಲ. ಅಹ್ಮದಿಯಾ ಜಮಾಅತಿನ ಮೇಲೆ ಅವರಿಗೆ ಇರುವ ಅಡಗಿಸಲಾಗದ ವಿದ್ವೇಷವು ಅವರನ್ನು ಪವಿತ್ರ ಖುರ್‌ಆನ್ ಹೇಳುವಂತಹ "ಅಕ್ರಮಿ"ಗಳಾಗಿಸಿಬಿಟ್ಟಿವೆ.

ಮುಜೀಬ್ ತನ್ನ ಉತ್ತರವನ್ನು ಮುಂದುವರಿಸಿ ಈ ರೀತಿ ಬರೆಯುತ್ತಾರೆ: "ಎರಡು ವಿಭಾಗಗಳು ಅಹ್ಮದೀಯರಲ್ಲಿವೆ. ಕಾದಿಯಾನಿಗಳು ಮತ್ತು ಲಾಹೋರಿಗಳು ಎಂಬ ಈ ಎರಡು ಪಂಗಡಗಳಲ್ಲಿ ಕಾದಿಯಾನಿಗಳನ್ನು ಮಾತ್ರ ಮುಸ್ಲಿಮೇತರರೆಂದು ಘೋಷಿಸಲಾಗಿದೆ. ಆ ಹೆಸರಿನಿಂದಲೇ ಅವರು ತಮ್ಮನ್ನು ಗುರುತಿಸಿಕೊಳ್ಳುತ್ತಾರೆ. ಲಾಹೋರಿಗಳನ್ನು ಹಾಗೆ ಕರೆಯಲಾಗುವುದಿಲ್ಲ. ಕಾದಿಯಾನಿಗಳು ಆ ಹೆಸರನ್ನು ತಮಗೇ ಇಷ್ಟಪಟ್ಟಿರುವುದರಿಂದ ಅವರನ್ನು ಆ ಹೆಸರಿನಲ್ಲಿ ಕರೆಯುವುದರಲ್ಲಿ ತಪ್ಪಿಲ್ಲ."

ಮುಜೀಬ್ ಸಾಹೇಬರೇ, ನೀವು ಬರೆದಿರುವುದು ಸಂಪೂರ್ಣ ತಪ್ಪು. ಲಾಹೋರಿಗಳು ಎಂದು ನೀವು ಯಾರ ಕುರಿತು ಹೇಳುತ್ತೀರೋ ಅವರು ಸ್ವಯಂ ಇಟ್ಟುಕೊಂಡ ಹೆಸರು ಅದಲ್ಲ. "ಅಂಜುಮನ್ ಇಶಾಅತೆ ಇಸ್ಲಾಂ" ಎಂಬುದು ಆ ವಿಭಾಗದವರ ಹೆಸರು. ಕಾದಿಯಾನಿಗಳು ಎಂದು ನೀವು ಕರೆಯುತ್ತಿರುವವರು ಅವರಿಗಾಗಿ ಸ್ವೀಕರಿಸಿಕೊಂಡ ಹೆಸರು "ಅಂಜುಮನ್ ಅಹ್ಮದಿಯಾ" ಎಂದಾಗಿದೆ. ಆದುದರಿಂದ ನೀವು ಹೇಳಿದ ಎರಡು ಹೆಸರುಗಳೂ ತಪ್ಪಾಗಿರುತ್ತವೆ. ಇನ್ನು, "ಆ ಹೆಸರಿನಿಂದಲೇ ಅವರು ತಮ್ಮನ್ನು ಗುರುತಿಸಿಕೊಳ್ಳುತ್ತಾರೆ" ಮತ್ತು "ಕಾದಿಯಾನಿಗಳು ಆ ಹೆಸರನ್ನು ತಮಗೇ ಇಷ್ಟಪಟ್ಟಿರುವುದರಿಂದ" ಎಂಬ ನಿಮ್ಮ ಹೇಳಿಕೆ ಸರಿಯೆಂದಾದರೆ ನೀವು ಅದನ್ನು ಆಧಾರ ಸಹಿತ ನಿರೂಪಿಸಬೇಕಾಗಿದೆ. ಅಹ್ಮದಿಯಾ ಜಮಾಅತಿನ ಯಾವ ಕೃತಿಯಲ್ಲಿ ಯಾರು ಆ ರೀತಿ ಬರೆದಿದ್ದಾರೆ ಎಂಬುದನ್ನು ದಯವಿಟ್ಟು ತೋರಿಸಿಕೊಡಿ. ಇಲ್ಲವೆಂದಾದರೆ ನೀವು ಹೇಳಿರುವುದು ಶುದ್ಧ ಸುಳ್ಳು ಎಂದು ಜನರು ತಿಳಿದುಕೊಳ್ಳುವರು. "ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪ ಬೀಳಲಿ" (ಪವಿತ್ರ ಖುರ್‌ಆನ್ 3:62).

'ಸನ್ಮಾರ್ಗ' ವಾರ ಪತ್ರಿಕೆಯ ಸಂಪಾದಕರ ಗಮನವನ್ನು ನಾನು ಸುಮಾರು ಇಪ್ಪತ್ತು ವರ್ಷಗಳ ಹಿಂದಿನ, ಅಂದರೆ, 1979ನೇ ಇಸವಿ ಮಾರ್ಚ್ 2ನೇ ತಾರೀಕಿನ 'ಸನ್ಮಾರ್ಗ' ಪತ್ರಿಕೆಯ ಕಡೆಗೆ ಸೆಳೆಯ ಬಯಸುತ್ತೇನೆ. ಆ ಸಂಚಿಕೆಯಲ್ಲಿ ಪ್ರಕಟವಾದ ಒಂದು ಲೇಖನದಲ್ಲಿ ಅಹ್ಮದಿಯಾ ಜಮಾಅತಿನವರಾದ ನಮ್ಮನ್ನು "ಕಾದಿಯಾನಿ ಧರ್ಮದವರು" ಎಂದು ಬರೆಯಲಾಗಿತ್ತು. ಅದಕ್ಕೆ ಪ್ರತಿಕ್ರಿಯೆಯಾಗಿ ನಾನು 'ಸನ್ಮಾರ್ಗ' ಪತ್ರಿಕೆಯ ಸಂಪಾದಕರಿಗೆ ಒಂದು ಪತ್ರ ಬರೆದಿದ್ದೆ. 8-3-79ರಂದು ನಾನು

ಪತ್ರಿಕೆಯ ಸಂಪಾದಕರಿಗೆ ಒಂದು ಪತ್ರ ಬರೆದಿದ್ದೆ. 8-3-79ರಂದು ನಾನು ಬರೆದ ಆ ಪತ್ರದ ಒಂದು ಭಾಗ ಈ ರೀತಿಯಿದೆ: "ಖಾದಿಯಾನಿ ಧರ್ಮದವರು ಎಂದು ಸನ್ಮಾರ್ಗದಲ್ಲಿ ಬರೆದಿರುವುದು ಅಹ್ಮದಿಯಾ ಸಂಘಟನೆಯ ಕುರಿತಾಗಿದೆ ಎಂದು ನಾನು ಭಾವಿಸುತ್ತೇನೆ. ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಜ್ರತ್ ಮಿರ್ಜಾ ಗುಲಾಂ ಅಹ್ಮದ್ ಸಾಹೇಬರು ಖಾದಿಯಾನ್ ಎಂಬಲ್ಲಿ ಜನಿಸಿದವರಾಗಿದ್ದಾರೆ. ತಿಳುವಳಿಕೆಯಿಲ್ಲದ ಸಾಮಾನ್ಯ ಜನರು ಅಹ್ಮದೀಯರೆಲ್ಲರೂ ಖಾದಿಯಾನಿಗಳು ಎಂದು ಕರೆಯುವುದಿದೆ. ಆದರೆ, ಅಹ್ಮದೀಯರೆಲ್ಲರನ್ನೂ ಖಾದಿಯಾನಿಗಳಲ್ಲ. ಖಾದಿಯಾನಿಗಳೆಂದು ಕರೆಯಿಸಿಕೊಳ್ಳುವುದನ್ನು ಅಹ್ಮದೀಯರು ಇಷ್ಟಪಡುವುದಿಲ್ಲ. ಒಬ್ಬರನ್ನು ಅವರಿಗೆ ಇಷ್ಟವಲ್ಲದ ವಕ್ರನಾಮದಲ್ಲಿ ಕರೆಯುವುದನ್ನು ಪವಿತ್ರ ಖುರ್‌ಆನ್ ವಿರೋಧಿಸಿದೆ. ಆದರೆ, ಖಾದಿಯಾನಿಗಳೆಂದು ಕರೆಯುವುದು ನಮಗಿಷ್ಟವಿಲ್ಲವೆಂದೂ ಸಂಘಟನೆಯ ಹೆಸರನ್ನೇ ಹೇಳಬೇಕೆಂದಿದ್ದರೆ ಅಹ್ಮದೀಯರೆಂದು ಕರೆಯಬಹುದೆಂದೂ ಎಷ್ಟು ಹೇಳಿದರೂ ಸಾಮಾನ್ಯ ಮುಸ್ಲಿಮರಲ್ಲಿ ಬಹುಪಾಲು ಜನರು ಪವಿತ್ರ ಖುರ್‌ಆನಿನ ಆಜ್ಞೆಯನ್ನು ಧಿಕ್ಕರಿಸಿ ಅಹ್ಮದೀಯರನ್ನು ಖಾದಿಯಾನಿಗಳೆಂದೇ ಕರೆಯುತ್ತಾರೆ. ಆದರೆ ಈ ಪ್ರಯೋಗವು ಆಕ್ಷೇಪಾರ್ಹವಾಗಿರುವುದೆಂದೂ ಇನ್ನು ಮುಂದಕ್ಕಾದರೂ 'ಸನ್ಮಾರ್ಗ'ವು ಪವಿತ್ರ ಖುರ್‌ಆನಿನ ಪ್ರಬೋಧನೆಗೆ ವಿರುದ್ಧವಾದ ಈ ಶೈಲಿಯನ್ನು ಕೈಬಿಡಬೇಕೆಂದೂ ತಿಳಿಸಲು ಬಯಸುತ್ತೇನೆ" ಎಂಬುದಾಗಿ ಆ ಪತ್ರದಲ್ಲಿ ನಾನು ಬರೆದಿದ್ದೆ. ನನ್ನ ಆ ಪ್ರತಿಕ್ರಿಯೆಯನ್ನು ಸನ್ಮಾರ್ಗದ ಸಂಪಾದಕರು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಿಲ್ಲ. ಆದುದರಿಂದ ಅದನ್ನು "ಯುಗರಶ್ಮಿ"ಯಲ್ಲಿ ಪ್ರಕಟಿಸಲಾಯಿತು (ನೋಡಿರಿ- ಯುಗರಶ್ಮಿ 1979 ಮಾರ್ಚ್ ಸಂಚಿಕೆ).

ಸಂಗತಿ ಈಗ ಸ್ಪಷ್ಟವಾಗಿದೆ. ಅಂದರೆ 20 ವರ್ಷಗಳ ಹಿಂದೆಯೇ ಸನ್ಮಾರ್ಗದವರಿಗೆ ನೇರವಾಗಿ ಈ ವಿಷಯವನ್ನು ತಿಳಿಸಲಾಗಿದೆ. ಹಾಗಿದ್ದೂ "ಆ ಹೆಸರಿನಿಂದಲೇ ಅವರು ತಮ್ಮನ್ನು ಗುರುತಿಸಿಕೊಳ್ಳುತ್ತಾರೆ" ಎಂದೂ "ಖಾದಿಯಾನಿಗಳು ಆ ಹೆಸರನ್ನು ತಮಗೇ ಇಷ್ಟಪಟ್ಟಿರುವುದರಿಂದ ಅವರನ್ನು ಆ ಹೆಸರಿನಿಂದ ಕರೆಯುವುದರಲ್ಲಿ ತಪ್ಪಿಲ್ಲ" ಎಂದೂ ಈಗ 'ಸನ್ಮಾರ್ಗ' ಪತ್ರಿಕೆ ಬರೆದಿರುವುದು ಶುದ್ಧ ಅಸಂಬದ್ಧವೂ ಸತ್ಯಕ್ಕೆ ದೂರವಾದ ಸಂಗತಿಯೂ ಆಗಿದೆ. ಆದುದರಿಂದ ಪವಿತ್ರ ಖುರ್‌ಆನ್ ಹೇಳುವಂತೆ "ಕರ್ಮ ಭ್ರಷ್ಟತೆಯಲ್ಲಿ ಹೆಸರು ಗಳಿಸುವುದು ಬಹಳ ಕೆಟ್ಟದು. ಈ ನಿಲುವೆಯನ್ನು ತೊರೆಯದವರು ಅಕ್ರಮಿಗಳಾಗಿರುವರು" ಎಂಬ ಅಲ್ಲಾಹನ ವಾಗ್ದಂಡನೆಗೆ 'ಸನ್ಮಾರ್ಗ' ಪತ್ರಿಕೆಯ ಸಂಪಾದಕರೂ ಅದರ ಬಳಗದವರೂ ಗುರಿಯಾಗುತ್ತಾರೆ. (ಪಶ್ಚಾತ್ತಾಪ ಪಟ್ಟು ತಿದ್ದಿಕೊಳ್ಳುವವರನ್ನು ಹೊರತು.)

"ವಮಾ ಅಲೈನಾ ಇಲ್ಲಲ್ ಬಲಾಗುಲ್ ಮುಬೀನ್."

-ಎಂ.ಪಿ. ಇಬ್ರಾಹಿಂ

(ಮುಂದುವರಿಯುವುದು)

## ದೇವನೂ ಸೃಷ್ಟಿಯೂ (9ನೇ ಪುಟದಿಂದ)

ಯಾವುದೇ ರೀತಿಯ ಅಭಿವೃದ್ಧಿ ಮನುಷ್ಯನಿಗೆ ಪ್ರಾಪ್ತವಾಗದಷ್ಟೆ. ಯಾವುದೇ ಶಿಶು ಸಹ ಪರಿಶುದ್ಧ ಸ್ವಭಾವದೊಂದಿಗೆ ಜನಿಸುತ್ತದೆಂದು ಪೈಗಂಬರರು ನುಡಿದಿದ್ದಾರೆ. ಅದು ಒಬ್ಬ ಮುಸ್ಲಿಮನ ಶಿಶುವಾದ ಕಾರಣದಿಂದಲ್ಲ, ಮನುಷ್ಯ ಪ್ರಜೆಯಾದ ಕಾರಣದಿಂದಲೇ ಎಂದು ಪ್ರವಾದಿವರ್ಯರು ಹೇಳಿದ್ದಾರೆ.

ಮನುಷ್ಯನಲ್ಲಿ ಜನ್ಮಸಿದ್ಧವಾಗಿ ಪಾಪವು ಲೀನವಾಗಿಲ್ಲವೆಂದು ಪವಿತ್ರ ಖುರ್‌ಆನ್ ಪ್ರಸ್ತಾಪಿಸಿರುತ್ತದೆ. ಅವನು ಬಹಳ ಉತ್ತಮವಾದ ರೀತಿಯಲ್ಲಿ ಸೃಷ್ಟಿಸಲ್ಪಟ್ಟಿರುವನೆಂದೂ ಆ ಪವಿತ್ರ ಗ್ರಂಥ ಘೋಷಿಸುತ್ತದೆ. ಹಾಗಿರುವಾಗ ಮನುಷ್ಯನ ಸ್ವಂತ ಪ್ರವರ್ತನೆಗಳ ಕಾರಣದಿಂದ ಪಾಪವು ಅವನಲ್ಲಿ ಉಂಟಾಗುತ್ತದೆ. ಒಂದೋ ಅವನು ತನ್ನ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸದ ಕಾರಣದಿಂದ ಅಥವಾ ತಪ್ಪಾದ ಕಾರ್ಯಗಳನ್ನು ಮಾಡುವುದರಿಂದ ಪಾಪ ಉಂಟಾಗುತ್ತದೆ. ಹಾಗೆ ತಪ್ಪುಗಳು ಪುನರಾವರ್ತಿಸಿ ಅವನು ತನ್ನಲ್ಲಿ ಪಾಪವನ್ನು ಬೆಳೆಸುತ್ತಾನೆ. ನೈತಿಕ, ಧಾರ್ಮಿಕ, ಆಧ್ಯಾತ್ಮಿಕ ನಿಯಮಗಳನ್ನು ಉಲ್ಲಂಘಿಸುವುದರ ಮೂಲಕ ಪಾಪಕರವಾದ ಪ್ರಕ್ರಿಯೆಗಳು ಅವನಿಂದ ಘಟಿಸುತ್ತವೆ. ಖಂಡಿತವಾಗಿಯೂ ಮನುಷ್ಯನು ಒಳಿತು-ಕೆಡುಕುಗಳ ಪ್ರೇರಣೆಗೆ ಗುರಿಯಾಗುತ್ತಾನೆ. ಒಳ್ಳೆಯ ಮತ್ತು ಕೆಟ್ಟ ಕೃತ್ಯಗಳು ಮಲಕುಗಳು (ದೇವದೂತರು) ಮತ್ತು ಸೈತಾನನ ಪ್ರೇರಣೆಯಿಂದ ಸಂಭವಿಸುತ್ತವೆ ಎಂದು ಹೇಳಬಹುದು. ಸೈತಾನ ಮತ್ತು ಮನುಷ್ಯನ ಪರಸ್ಪರ ಸಂಬಂಧಗಳ ಬಗ್ಗೆ ಮತ್ತು ಪೈಶಾಚಿಕವಾದ ಪ್ರೇರಣಶಕ್ತಿಗಳಿಂದ ರಕ್ಷೆಹೊಂದುವ ಮಾರ್ಗಗಳ ಕುರಿತು ಪವಿತ್ರ ಖುರ್‌ಆನ್ ನಮಗೆ ವಿವರಿಸಿ ಕೊಡುತ್ತದೆ. ದೇವದೂತರು ಸದಾ ಮನುಷ್ಯನನ್ನು ಒಳಿತು ಮಾಡಲು ಪ್ರಚೋದಿಸುತ್ತಾರೆಂದೂ ಸೈತಾನ ಸದಾ ಕೆಡುಕಿನೆಡೆಗೆ ಮನುಷ್ಯನನ್ನು ಕೊಂಡೊಯ್ಯುತ್ತಾನೆಂದೂ ಪವಿತ್ರ ಖುರ್‌ಆನ್ ಹೇಳುತ್ತದೆ. ದೇವದೂತರ ಸತ್ಪಥದ ಕಡೆಗಿರುವ ಪ್ರೇರಣೆಯನ್ನು ಸ್ವೀಕರಿಸಲಿಕ್ಕೂ ನಿರಾಕರಿಸಲಿಕ್ಕೂ ಮನುಷ್ಯನಿಗೆ ಸ್ವಾತಂತ್ರ್ಯವಿದೆ. ಅದೇ ಪ್ರಕಾರ ಸೈತಾನನ ದುಷ್ಪ್ರೇರಣೆಯನ್ನು ಸ್ವೀಕರಿಸಲಿಕ್ಕೂ ನಿರಾಕರಿಸಲಿಕ್ಕೂ ಅವನಿಗೆ ಸ್ವಾತಂತ್ರ್ಯವಿದೆ. ಈ ಎರಡು ವಿಧ ಪ್ರೇರಣೆಗಳ ಸಾನ್ನಿಧ್ಯ ಮನುಷ್ಯನು ಪೂರ್ಣತೆಯನ್ನು ಗಳಿಸುವರೆ ಸಹಾಯಕವಾಗುವ ತರದಲ್ಲಿದೆ. ಮಾತ್ರವಲ್ಲ, ಈ ಮೂಲಕ ಮನುಷ್ಯನ ಅಸ್ತಿತ್ವದ ನೈಜ ದರ್ಶನವೂ ಆಗುತ್ತದೆ. ಪೈಶಾಚಿಕ ಅಥವಾ ದೈವಿಕ ಪ್ರೇರೇಪಣೆಗಳು ಇಲ್ಲವಾದರೆ ಮನುಷ್ಯನಿಗೆ ಯಾವುದಾದರೂ ರೀತಿಯ ಶಿಕ್ಷೆಗೆ ಅಥವಾ ಪ್ರತಿಫಲಾನುಗ್ರಹಕ್ಕೆ ಪಾತ್ರನಾಗಲು ಅಸಾಧ್ಯವಾಗಬಹುದು. ಪೈಶಾಚಿಕ ಪ್ರೇರಣೆಗೆ ವಿರುದ್ಧವಾದ ಒಬ್ಬನ ಹೋರಾಟ ಅತನನ್ನು ದೇವಾನುಗ್ರಹಗಳಿಗೂ ದೈವಿಕವಾದ ಪ್ರತಿಫಲಗಳಿಗೂ ಹಕ್ಕುದಾರನನ್ನಾಗಿ ಮಾಡುತ್ತದೆ. ಅಷ್ಟೇ ಅಲ್ಲ, ಅದು ಅವನನ್ನು ಅಭಿವೃದ್ಧಿಯೆಡೆಗೆ ಕೊಂಡೊಯ್ಯುತ್ತದೆ. ಆದರೆ ಅವನು ದೈವಿಕ ಪ್ರೇರಣೆಗಳಿಗೆ ವಿಧೇಯನಾಗದೆ ಪೈಶಾಚಿಕವಾದ ಪ್ರಚೋದನೆಗಳಿಗೆ ಒಳಗಾಗಿ ವರ್ತಿಸಿದರೆ ಶಿಕ್ಷೆಗೆ ಗುರಿಯಾಗುವನು.

ಒಳಿತು-ಕೆಡುಕುಗಳ ಬಗ್ಗೆ ಪವಿತ್ರ ಖುರ್‌ಆನ್ ಸಮಗ್ರವಾಗಿ ಚರ್ಚಿಸಿ ಅವುಗಳ ಕುರಿತು ಸರಿಯಾದ ವ್ಯಾಖ್ಯೆಯನ್ನು ನೀಡಿದೆ. ಕೆಡುಕುಗಳು ಹೇಗೆ ತ್ಯಜಿಸಲ್ಪಡಬೇಕೆಂದೂ ಉನ್ನತವಾದ ನೈತಿಕ ಗುಣಗಳನ್ನೂ ಒಳಿತುಗಳನ್ನೂ ಹೇಗೆ ಕರಗತ ಮಾಡಬೇಕೆಂದೂ ಪವಿತ್ರ ಖುರ್‌ಆನ್ ವಿವರಿಸಿಕೊಡುತ್ತದೆ. ಒಳಿತು ಮತ್ತು ಕೆಡುಕಿನ ಉದ್ಭವಸ್ಥಾನದ ಬಗ್ಗೆ ಖುರ್‌ಆನ್ ಬೆಳಕು ಚೆಲ್ಲುತ್ತದೆ. ಕೆಡುಕಿನ ಹುಟ್ಟಡಗಿಸಲು ಪವಿತ್ರ ಖುರ್‌ಆನ್ ಶಕ್ತಿಯುತವಾದ ಭಾಷೆಯಲ್ಲಿ ನಿರ್ದೇಶನಗಳನ್ನು ನೀಡಿದೆ. ಸಂಕ್ಷಿಪ್ತದಲ್ಲಿ, ಮನುಷ್ಯನು ಅವನ ಸ್ವಂತ ವರ್ತನೆಗಳ ಮೂಲಕವೇ ಪಾಪಿಯಾಗುತ್ತಾನೆ ಹೊರತು ಜನ್ಮ ಮೂಲಕ ಯಾರೂ ಪಾಪಿಯಾಗುವುದಿಲ್ಲವೆಂದು ಪವಿತ್ರ ಖುರ್‌ಆನ್ ಸಾಬೀತು ಮಾಡಿದೆ.

# ಇಸ್ಮುಹು ಅಹ್ಮದ್

*ಈಸಬ್ನು ಮರ್‌ಯಂ ಹೇಳಿದ ಸಂದರ್ಭ (ಸ್ಮರಿಸಿರಿ): ಇಸ್ರಾಈಲ್ ಸಂತತಿಗಳೇ ನಾನು ನಿಮಗಾಗಿ ನಿಯೋಗಿಸಲ್ಪಟ್ಟ ದೇವ ಸಂದೇಶ ವಾಹಕನಾಗಿರುವೆನು- ನನ್ನ ಮುಂದೆ ಇರುವ ತೌರಾತನ್ನು ಸತ್ಯಪಡಿಸಲಿಕ್ಕೂ ನನ್ನ ನಂತರ ಆಗಮಿಸಲಿರುವ ಅಹ್ಮದ್ ಎಂಬ ಹೆಸರಿನ ಓರ್ವ ಪ್ರವಾದಿಯ ಕುರಿತು ನಿಮಗೆ ಶುಭ ವಾರ್ತೆ ನೀಡಲಿಕ್ಕಾಗಿಯೂ (ನಾನು ನಿಯೋಜಿತನಾಗಿರುವೆನು).*

-ಪವಿತ್ರ ಖುರ್‌ಆನ್ (61:7)

وَإِذْ قَالَ عِيسَى ابْنُ مَرْيَمَ يٰبَنِيٓ إِسْرَآءِيلَ إِنِّي
رَسُولُ اللهِ إِلَيْكُمْ مُّصَدِّقًا لِّمَا بَيْنَ يَدَيَّ مِنَ
التَّوْرٰىةِ وَمُبَشِّرًا بِرَسُولٍ يَّأْتِي مِنْ بَعْدِي
اسْمُهُۥٓ أَحْمَدُ

ಎಂ.ಪಿ. ಇಬ್ರಾಹಿಂ, ಮಂಜೇಶ್ವರ

**ಮಂಗಳೂರಿನಿಂದ ಇತ್ತೀಚೆಗೆ ಪ್ರಕಟಣೆ ಪ್ರಾರಂಭಿಸಿರುವ 'ಪವಿತ್ರ ಸಂದೇಶ' ಎಂಬ ಪಾಕ್ಷಿಕದ 1998ನೇ ಸಪ್ಟೆಂಬರ್ 16-30ರ ಸಂಚಿಕೆಯಲ್ಲಿ "ಇಸ್ಮುಹು ಅಹ್ಮದ್" ಎಂಬ ಒಂದು ತುಂಡು ಲೇಖನ ಪ್ರಕಟವಾಗಿದೆ. ಅದರಲ್ಲಿ ಪ್ರತಿಪಾದಿಸಿದ ವಿಷಯಗಳು ಹುರುಳಿಲ್ಲದ್ದು. ಅಂತೆಯೇ ಬರವಣಿಗೆಯ ಶೈಲಿ ಕೂಡ ಅತ್ಯಂತ ಕಳಪೆ ಮಟ್ಟದ್ದು. ಹೆಚ್ಚೇಕೆ, ಆ ಲೇಖನದ ಲೇಖಕ ಯಾರೆಂದು ಸಹ ಅದರಲ್ಲಿ ತಿಳಿಸಲಾಗಿಲ್ಲ. ಧಾರ್ಮಿಕ ವಿಚಾರಗಳನ್ನು ಅನುಯೋಜ್ಯವಾದ ರೀತಿಯಲ್ಲಿ ಪರಿಶೀಲಿಸಿ ಸರಿಯಾಗಿ ಮನವರಿಕೆ ಮಾಡಿಕೊಳ್ಳದೆ ಬಹಳ ಲಘುವಾಗಿ ಕಾಣುವ ಈ ಪತ್ರಿಕೆಯ ನಿಲುವು ದುರದೃಷ್ಟಕರ. ಪವಿತ್ರ ಖುರ್‌ಆನಿನಲ್ಲಿ ಉಲ್ಲೇಖಿತವಾಗಿರುವ "ಅಹ್ಮದ್ ಎಂಬ ಹೆಸರಿನ" ಪ್ರವಾದಿಯ ಆಗಮನದ ಕುರಿತು ಭವಿಷ್ಯವಾಣಿಯು ಹಝ್ರತ್ "ಮಿರ್ಝಾ ಗುಲಾಂ ಅಹ್ಮದ್" ಅವರ ಬರುವಿಕೆಯೊಂದಿಗೆ ಅತ್ಯಂತ ಸ್ಪಷ್ಟವಾಗಿ ಪೂರ್ತಿಯಾಗಿದೆ ಎಂದು ಅಹ್ಮದಿಯಾ ಮುಸ್ಲಿಮರು ನಂಬುತ್ತಾರೆ. ಅಂತೆಯೇ ಆ ಭವಿಷ್ಯವಾಣಿ ಪ್ರವಾದಿ ಶ್ರೇಷ್ಠರಾದ ಮುಹಮ್ಮದ್ ಪೈಗಂಬರ್(ಸ)ರಲ್ಲಿ ಸಹ ಸಾಕ್ಷಾತ್ಕಾರಗೊಂಡಿದೆಯೆಂದು ಅವರು ನಂಬುತ್ತಾರೆ. ಇದನ್ನು ಕೂಲಂಕಷವಾಗಿ ಪರಿಶೀಲಿಸದೆ ಅಥವಾ ಹೇಳಿಕೆಗಳ ಪೂರ್ಣ ತಾತ್ಪರ್ಯವನ್ನು ಸರಿಯಾಗಿ ಗ್ರಹಿಸದೆ, ಅರ್ಥಂಬರ್ಥ ಉಲ್ಲೇಖಗಳನ್ನು ನೀಡುತ್ತಾ 'ಪವಿತ್ರ ಸಂದೇಶ'ದ ಲೇಖಕ ಏನನ್ನೋ ಕಂಡು ಹಿಡಿದವನಂತೆ ಕುಣಿದಾಡುವುದು ನೋಡಿದರೆ ಆ ಅನಾಮಧೇಯ ಲೇಖಕನ ಬಗ್ಗೆ ಹಾಗೂ ಆ ಪತ್ರಿಕೆಯ ಮೇಲೆ ಕನಿಕರ ತೋರುತ್ತದೆ. ಲೇಖನದಲ್ಲಿ ಬರೆದಿರುವ ಸಂಗತಿಗಳು ಮತ್ತು ವಿವರಣಾ ಶೈಲಿ ಪ್ರತಿಕ್ರಿಯೆಗೆ ಅನರ್ಹವಾದ ಕಾರಣ ಆ ಲೇಖನದ ಒಟ್ಟು ಸಾರಾಂಶವಾದ "ಇಸ್ಮುಹು ಅಹ್ಮದ್" ಎಂಬ ಬಗ್ಗೆ ಮಾತ್ರ ಇಲ್ಲಿ ಚರ್ಚಿಸಲಾಗಿದೆ - ಭವಿಷ್ಯವಾಣಿಯ ಕುರಿತು ಹಾಗೂ ಅದರ ಪೂರ್ತೀಕರಣದ ಕುರಿತು ವಾಚಕರು ಸತ್ಯವನ್ನು ಗ್ರಹಿಸಿಕೊಳ್ಳಲಿ ಎಂಬ ಉದ್ದೇಶದಿಂದ.**

ಪವಿತ್ರ ಖುರ್‌ಆನಿನ ಸೂರತುಸ್ಸಪ್ಫ್‌ನಲ್ಲಿರುವ ಈ ಮೇಲಿನ ವಚನದಲ್ಲಿ ಹಝ್ರತ್ ಈಸಾ(ಅ) ತನ್ನ ನಂತರ ಆಗಮಿಸಲಿರುವ ಓರ್ವ ಪ್ರವಾದಿಯ ಕುರಿತು ನೀಡಿದ ಭವಿಷ್ಯವಾಣಿ ರೂಪದ ಶುಭ ವಾರ್ತೆಯು ಉಲ್ಲೇಖಿತವಾಗಿದೆ.

ಆಗಮಿಸಲಿರುವ ಆ ಪ್ರವಾದಿಯ ಕುರಿತು ಇಲ್ಲಿ "ಇಸ್ಮುಹು ಅಹ್ಮದ್" (ಅವರ ಹೆಸರು ಅಹ್ಮದ್ ಎಂದಾಗಿರುವುದು) ಎಂದು ಹೇಳಲ್ಪಟ್ಟಿದೆ. ಪ್ರವಾದಿ ಈಸಾ (ಅ) ಅವರು ನುಡಿದಿರುವ ಈ ಭವಿಷ್ಯವಾಣಿ ಯಾರ ಕುರಿತು? ಇದು ಯಾರಲ್ಲಿ ಸಾಕ್ಷಾತ್ಕರಿಸಲ್ಪಟ್ಟಿದೆ? ಎಂಬುದನ್ನು ಸಂಕ್ಷಿಪ್ತವಾಗಿ ಈ ಲೇಖನದಲ್ಲಿ ನಿರೂಪಿಸಬಯಸುತ್ತೇನೆ.

**ಪ್ರವಾದಿ ನಿಯೋಗದ ವೃತ್ತಾಂತ**

ಲೋಕದಲ್ಲಿ ಸತ್ಯ ವಿಶ್ವಾಸವೂ ಸತ್ಕರ್ಮಗಳೂ ಕಣ್ಮರೆಯಾಗಿ, ಜನರೆಡೆಯಲ್ಲಿ ಅಂಧವಿಶ್ವಾಸವೂ ಅನಾಚಾರಗಳೂ ಸರ್ವತ್ರ ವ್ಯಾಪಿಸುವ ಕಾಲದಲ್ಲಿ ಕರುಣಾಮಯನಾದ ಸೃಷ್ಟಿಕರ್ತನು ಜನರ ಧಾರ್ಮಿಕ ಉದ್ಧಾರಕ್ಕಾಗಿ ಅವರೆಡೆಯಲ್ಲಿ ಪ್ರವಾದಿಗಳನ್ನು ನಿಯೋಗಿಸುತ್ತಾನೆಂದು ಎಲ್ಲ ಧರ್ಮ ಗ್ರಂಥಗಳಲ್ಲೂ ವಿಶಿಷ್ಟವಾಗಿ ಪವಿತ್ರ ಖುರ್‌ಆನಿನಲ್ಲೂ ಪ್ರತಿಪಾದಿಸಲ್ಪಟ್ಟಿದೆ. ಈ ರೀತಿ ನಿಯೋಗಿಸಲ್ಪಡುವ ಪ್ರವಾದಿಗಳ ಮೂಲಕ ಲೋಕದಲ್ಲಿ ಪುನಃ ಸತ್ಯಧರ್ಮದ ಸಂಸ್ಥಾಪನೆಯಾಗುವುದೆಂದೂ ಅಂಧಕಾರವೂ ದುರಾಚಾರಗಳೂ ಅವರ ಮುಖಾಂತರ ದೂರೀಕರಿಸಲ್ಪಡುವುವೆಂದೂ ವಿವರಿಸಲಾಗಿದೆ. ಇಂತಹ ಪ್ರವಾದಿಗಳನ್ನೂ ಉದ್ಧಾರಕರನ್ನೂ ಪ್ರತಿಯೊಂದು ಜನಾಂಗದವರಲ್ಲೂ ಪ್ರತಿಯೊಂದು ಪ್ರದೇಶದಲ್ಲೂ ಪ್ರತಿಕಾಲದಲ್ಲೂ ಆಯ್ಕೆ ಮಾಡಿರುವುದಾಗಿ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಪ್ರತಿಪಾದಿಸಿದ್ದಾನೆ.

**ಪ್ರವಾದಿಗಳೆಲ್ಲರೂ ನಿರಾಕರಿಸಲ್ಪಟ್ಟರು**

ಆದರೆ, ಜನರ ಧಾರ್ಮಿಕ ಉತ್ಥಾನಕ್ಕಾಗಿ ನಿಯೋಗಿಸಲ್ಪಡುವ ಆ ಮಹಾತ್ಮರುಗಳನ್ನು ಜನರು ಸ್ವೀಕರಿಸಿ ನಂಬಿ ಆದರಿಸಲಿಲ್ಲ. ಬದಲಾಗಿ, ಒಂದೊಂದು ಕಾರಣಗಳನ್ನೂ ಕುತರ್ಕಗಳನ್ನೂ ಮುಂದಿಡುತ್ತಾ ಆಯಾಕಾಲದ ಜನರಲ್ಲಿ ಬಹು ಸಂಖ್ಯಾತರೂ ಅವರ ಮತ ಪಂಡಿತರೂ ಆ ದೇವ ನಿಯುಕ್ತ ಸಂದೇಶವಾಹಕರನ್ನು ತಿರಸ್ಕರಿಸಿ ಬಿಟ್ಟರೆಂದು ಪವಿತ್ರ ಖುರ್‌ಆನ್ ವಿವರಿಸುತ್ತದೆ. ಈ ರೀತಿ ಜನರಿಂದ ತಿರಸ್ಕರಿಸಲ್ಪಟ್ಟು ಪರಿಹಾಸ್ಯಕ್ಕೆ ಗುರಿಯಾಗದ ಯಾವ ಪ್ರವಾದಿಯಾಗಲೀ ಈ ಲೋಕದಲ್ಲಿ ಅವತರಿಸಿಲ್ಲ. ಆಯಾ ಕಾಲದ ಮತ ಪಂಡಿತರು ಅವರನ್ನು ಕಳ್ಳ ಪ್ರವಾದಿಯೆಂದೂ ವಂಚಕನೆಂದೂ ದೇವದೂಷಕನೆಂದೂ ಧರ್ಮಭ್ರಷ್ಟನೆಂದೂ ಇನ್ನೂ ಏನೇನೆಲ್ಲಾ ರೀತಿಯಲ್ಲಿ ದೂಷಿಸಿ ಜನರು ಅವರಿಂದ ದೂರ ಸರಿಯುವಂತೆ ಮಾಡಿದರು. ಆದರೆ ಆ ರೀತಿ ದೇವ ನಿಯೋಗಿತ ದಿವ್ಯ ಪುರುಷರನ್ನು ಎದುರಿಸಿದ ಜನಾಂಗಗಳು ದೇವರ ಕೋಪಕ್ಕೆ ಈಡಾಗಿ ಕೊನೆಗೆ

ನಾಶ ಹೊಂದಿದವು ಎಂದು ಸಹ ಪವಿತ್ರ ಖುರ್‌ಆನ್ ನಮಗೆ ತಿಳಿಸಿಕೊಡುತ್ತದೆ. ಪೂರ್ವ ಇತಿಹಾಸದಿಂದಲೂ ಇದು ನಮಗೆ ವೇದ್ಯವಾಗುತ್ತದೆ. ಪ್ರವಾದಿಗಳನ್ನು ನಿರಾಕರಿಸಿದ ಅಂತಹ ಶಾಪಗ್ರಸ್ತ ಸಮುದಾಯಗಳಿಗೆ, ತಾವು ಮಾಡಿದ ಯಾವ ತಪ್ಪಿಗಾಗಿ ಈ ರೀತಿಯ ದೇವಶಿಕ್ಷೆಯು ತಮ್ಮ ಮೇಲೆ ಎರಗಿತು ಎಂದು ಮನವರಿಕೆ ಮಾಡಿಕೊಳ್ಳಲು ಕೂಡ ಸಾಧ್ಯವಾಗಲಿಲ್ಲ.

### ಪ್ರವಾದಿಗಳನ್ನು ನಿರಾಕರಿಸಿದವರು ಉಲ್ಲೇಖಿಸಿದ ಕಾರಣಗಳು

ಪ್ರವಾದಿಗಳ ನಿಯೋಗವೇ ಉಂಟಾಗಲಾರದು; ಆದುದರಿಂದ ಯಾವ ಪ್ರವಾದಿಯಲ್ಲೂ ನಂಬಿಕೆಯಿಡಬೇಕಾಗಿಲ್ಲ ಎಂದು ಕೆಲವು ಜನಾಂಗದವರು ವಾದಿಸಿದರು ಎಂಬುದಾಗಿ ಪವಿತ್ರ ಖುರ್‌ಆನ್ ಹೇಳುತ್ತದೆ. ಇನ್ನು ಕೆಲವರು, ತಮ್ಮ ಸಮುದಾಯದಲ್ಲಿ ಮಾತ್ರವೇ ದೇವರು ಪ್ರವಾದಿಗಳನ್ನು ಕಳುಹಿಸಿದ್ದಾನೆಂದೂ ಇತರ ಜನಾಂಗದಲ್ಲಿ ಆಗತರಾದವರನ್ನು ನಾವು ನಂಬಲಾರೆವು ಎಂದೂ ಹೇಳಿದರು. ಕೆಲವರು, ಅಲ್ಲಾಹನು ಆರಿಸಿದ ಪ್ರವಾದಿಗಳ ಮೇಲೆ ವೈಯಕ್ತಿಕವಾಗಿ ಆರೋಪ ಹೊರಿಸಿ ಅವರ ಯೋಗ್ಯತೆಯ ಬಗ್ಗೆ ಸವಾಲು ಹಾಕಿದರು. ಈತನು ಪ್ರವಾದಿಯಾಗಲು ಯೋಗ್ಯನೇ? ಎಂದು ಅವರು ಅಪಹಾಸ್ಯ ಮಾಡಿದರು. ಮತ್ತೆ ಕೆಲವರು, ಪ್ರವಾದಿಗಳ ನಿಯೋಗ ಒಂದು ನಿರ್ದಿಷ್ಟ ಕಾಲದ ನಂತರ ಸ್ಥಗಿತಗೊಂಡಿದೆ. ಇನ್ನು ಮೇಲೆ ಯಾರೂ ಪ್ರವಾದಿಗಳು ಬರಲಾರರು ಎಂಬ ಮೊಂಡುವಾದವನ್ನು ಮುಂದಿಟ್ಟರು ಎಂಬುದಾಗಿಯೂ ಪವಿತ್ರ ಖುರ್‌ಆನ್ ವಿವರಿಸುತ್ತದೆ.

ಈ ಎಲ್ಲಾ ವಾದಗಳನ್ನೂ ಪವಿತ್ರ ಖುರ್‌ಆನ್ ಖಂಡಿಸುತ್ತಾ ಈ ರೀತಿಯ ನಂಬಿಕೆಯವರೆಲ್ಲರೂ ಮಾರ್ಗಭ್ರಂಶರೆಂದೂ ಅಲ್ಲಾಹನ ಕೋಪಕ್ಕೆ ಗುರಿಯಾದವರೆಂದೂ ಹೇಳಿ ಮುಸ್ಲಿಂ ಸಮುದಾಯವನ್ನು ಅದು ಜಾಗೃತಗೊಳಿಸಿದೆ. ಜನರ ಮಾರ್ಗದರ್ಶನಕ್ಕಾಗಿ ಅಲ್ಲಾಹನು ನಿಯೋಗಿಸುವ ಪ್ರವಾದಿಗಳನ್ನು ಈ ರೀತಿಯ ಉದ್ಧಟತನದಿಂದ ಏನೇನೆಲ್ಲಾ ಕಾರಣಗಳನ್ನು ತೋರಿಸಿ ನಿರಾಕರಿಸುವುದು, ತಮ್ಮ ಪಾಂಡಿತ್ಯದಲ್ಲಿ ಅಹಂಭಾವ ತೋರಿಸುತ್ತಾ ಅಲ್ಲಾಹನ ಪ್ರವಾದಿಗಳನ್ನು ಅಲ್ಲಗಳೆಯುವುದು ದೇವಕೋಪಕ್ಕೆ ಬಲಿಯಾಗುವ ದೌರ್ಭಾಗ್ಯದ ಕೆಲಸವೆಂದು ಪವಿತ್ರ ಖುರ್‌ಆನ್ ವಿವರಿಸುತ್ತದೆ. ಅಂತಹವರಿಗೆ ಅಲ್ಲಾಹನಿಂದ ನಿಯೋಗಿತರಾಗುವ ಮಹಾತ್ಮರನ್ನು ಸ್ವೀಕರಿಸಲು ಸಾಧ್ಯವಾಗಲಿಲ್ಲ. ಎಲ್ಲ ಪ್ರವಾದಿಗಳಲ್ಲೂ ನಂಬಿಕೆಯಿಡಬೇಕೆಂದು ಆ ಪವಿತ್ರ ಗ್ರಂಥ ಅದರ ಅನುಯಾಯಿಗಳೊಡನೆ ಆಜ್ಞಾಪಿಸುತ್ತದೆ. ನಂಬಿಕೆಯ ವಿಷಯದಲ್ಲಿ ಅವರ ಮಧ್ಯೆ ವ್ಯತ್ಯಾಸ ಕಲ್ಪಿಸಬಾರದೆಂದು ಕಲಿಸುವ ಪವಿತ್ರ ಖುರ್‌ಆನ್, ಅಲ್ಲಾಹನ ಆಯ್ಕೆಯು ಅತ್ಯಂತ ಸೂಕ್ತವಾಗಿರುವುದೆಂದೂ ಪ್ರವಾದಿಗಳ ನಿಯೋಗವು ಸ್ಥಗಿತಗೊಂಡಿಲ್ಲವೆಂದೂ ಸಹ ಒತ್ತಿ ಹೇಳುತ್ತದೆ.

### ಮುಸ್ಲಿಂ ಸಮುದಾಯದ ಅಧಃಪತನದ ಕುರಿತು ಭವಿಷ್ಯ ನುಡಿ

ಹಿಂದಿನ ಸಮುದಾಯಗಳಲ್ಲಿ ಉಂಟಾದಂತೆ ಮುಸ್ಲಿಮರಲ್ಲೂ ಧರ್ಮಚ್ಯುತಿ ಉಂಟಾಗುವುದೆಂದು ಪವಿತ್ರ ಖುರ್‌ಆನಿನಲ್ಲಿ ಸೂಚನೆಗಳಿವೆ. ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ತನ್ನ ಸಮುದಾಯದ ಅಧಃ ಪತನದ ಕುರಿತು ಬಹಳ ಸ್ಪಷ್ಟವಾಗಿ ಭವಿಷ್ಯ ನುಡಿದಿದ್ದಾರೆ. ಇದರಿಂದ ತಿಳಿದು ಬರುವುದೇನೆಂದರೆ, ಮುಸ್ಲಿಮರು ಸಹ ಒಂದು ಕಾಲದಲ್ಲಿ ಪೂರ್ವ ಸಮುದಾಯಗಳಂತೆ ಅಧರ್ಮಿಗಳಾಗುವರೆಂದೂ ಆ ಕಾಲದಲ್ಲಿ ಅವರ ಉದ್ಧಾರಕ್ಕಾಗಿಯೂ ಇಸ್ಲಾಮಿನ ಸತ್ಯತೆಯನ್ನು ಲೋಕದಲ್ಲಿ ಪ್ರಕಟಪಡಿಸಲಿಕ್ಕೂ ಅಲ್ಲಾಹನು ಓರ್ವ ಮಹಾ ಪುರುಷನನ್ನು ನಿಯೋಗಿಸುವನೆಂದೂ, ಆದರೆ ಅವರಲ್ಲಿ ಹೆಚ್ಚಿನವರು ಆ ದಿವ್ಯಾತ್ಮರನ್ನು ತಿರಸ್ಕರಿಸಿ ತಮಗೆ ಅಂತಹ ಯಾವ ಪ್ರವಾದಿಯ ಆವಶ್ಯಕತೆಯೂ ಇಲ್ಲವೆಂದು ಹೇಳಿ ನಿರಾಕರಿಸಿ ಬಿಡುವರೆಂದೂ ಆಗಿದೆ.

### ಇಸ್ಮುಹು ಅಹ್ಮದ್

ಮುಸ್ಲಿಂ ಸಮುದಾಯದ ಅವನತಿಯು ಹದಿಮೂರು ಶತಮಾನಗಳ ಬಳಿಕ ಪರಾಕಾಷ್ಠೆಗೆ ತಲುಪುವುದೆಂದೂ ಹದಿನಾಲ್ಕನೆಯ ಶತಮಾನದ ಆದಿಯಲ್ಲಿ ಈ ಸಮುದಾಯದ ಉದ್ಧಾರಕ್ಕಾಗಿಯೂ ಪ್ರಪಂಚದ ಎಲ್ಲಾ ಜನಾಂಗಗಳ ಮಾರ್ಗದರ್ಶನಕ್ಕಾಗಿಯೂ ಮುಹಮ್ಮದ್ ಪೈಗಂಬರ್ (ಸ.ಅ)ರವರ ಪ್ರತಿನಿಧಿಯಾಗಿ, ಇಸ್ಲಾಂ ಧರ್ಮದ ಉದ್ಧಾರಕ್ಕಾಗಿ ಇಮಾಂ ಮಹ್‌ದಿ (ಅ)ರವರ ಆಗಮನವಾಗುವುದೆಂದೂ ಹದೀಸ್ ಗ್ರಂಥಗಳಲ್ಲಿ ಉಲ್ಲೇಖಗಳಿವೆ. ಕಾಲಜ್ಞಾನಿಗಳಾದ ಪೂರ್ವಿಕ ಮುಸ್ಲಿಂ ಮೇಧಾವಿಗಳು ಸಹ ಇದನ್ನು ತಮ್ಮ ಗ್ರಂಥಗಳಲ್ಲಿ ಪ್ರಸ್ತಾಪಿಸಿದ್ದಾರೆ. ಆ ಮಹಾಪುರುಷ ಭಾರತದಲ್ಲಿ ಅವತರಿಸುವರೆಂದೂ ಅವರ ಹೆಸರು "ಅಹ್ಮದ್" ಆಗಿರುವುದೆಂದು ("ಇಸ್ಮುಹು ಅಹ್ಮದ್") ಸಹ ಮುಹಮ್ಮದ್ ಪೈಗಂಬರ್ (ಸ.) ರವರು ಭವಿಷ್ಯ ನುಡಿದಿದ್ದಾರೆ.

ಪ್ರವಾದಿ ಈಸಾ (ಅ) ತಾನು ಪುನಃ ಬರುವೆನೆಂದು ಹೇಳಿರುವುದಾಗಿ ಇಂಜೀಲ್‌ನಲ್ಲಿ ಪ್ರಸ್ತಾಪವಿದೆ. ತನ್ನ ನಂತರ ಅಹ್ಮದ್ ಎಂಬ ಹೆಸರಿನ ಓರ್ವ ಪ್ರವಾದಿ ಬರಲಿರುವರೆಂದು ಅವರು ಹೇಳಿದ್ದಾಗಿ ಪವಿತ್ರ ಖುರ್‌ಆನಿನಲ್ಲಿ ಸಹ ಪ್ರತಿಪಾದಿಸಲಾಗಿದೆ. ಪ್ರವಾದಿ ಈಸಾ (ಯೇಸು ಕ್ರಿಸ್ತರು) ಭವಿಷ್ಯ ನುಡಿದಿರುವ ಅಹ್ಮದ್ ಎಂಬ ಪ್ರವಾದಿ ಯಾರು ಎಂಬುದಾಗಿ ನಾವು ಅವಲೋಕನ ನಡೆಸಿದರೆ ಪ್ರವಾದಿ ಈಸಾರ ನಂತರ ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ಅವರಲ್ಲದೆ ಅಹ್ಮದ್ ಎಂಬ ಹೆಸರಿನ ಬೇರೆ ಯಾರು ಸಹ ದೇವ ನಿಯುಕ್ತವಾದಿಯಾಗಿ ಅವತರಿಸಿಲ್ಲವೆಂದು ನಮಗೆ ತಿಳಿದು ಬರುತ್ತದೆ. ಪ್ರವಾದಿ ಈಸಾ (ಅ) ಮತ್ತು ಪ್ರವಾದಿ ಮುಹಮ್ಮದ್ ಮುಸ್ತಫಾ (ಸ.ಅ) ರವರು ಪ್ರವಾದನಗಳಲ್ಲಿ ಸೂಚಿಸಿರುವ ಎಲ್ಲಾ ಲಕ್ಷಣಗಳೂ ಹಝ್ರತ್ ಅಹ್ಮದ್‌ರಲ್ಲಿ ಸಾಕ್ಷಾತ್ಕಾರಗೊಂಡಿವೆ. ಅವರು ಕ್ರಿಸ್ತಶಕ 19ನೇ ಶತಮಾನದಲ್ಲಿ (ಹಿಜ್‌ರಿ 14ನೇ ಶತಮಾನದ ಪ್ರಾರಂಭ) ಭಾರತದ ಪಂಜಾಬ್ ಪ್ರಾಂತ್ಯದ ಖಾದಿಯಾನ್ ಎಂಬಲ್ಲಿ ಜನ್ಮ ತಾಳಿದರು. ಧಾರ್ಮಿಕ ಅವನತಿಯಿಂದ ಸರ್ವ ಸಮುದಾಯಗಳನ್ನೂ ಉದ್ಧರಿಸುವುದು ಹಾಗೂ ಅವರಿಗೆ ತಮ್ಮ ಸೃಷ್ಟಿಕರ್ತನ ಬಗ್ಗೆ ಯಥಾರ್ಥ ಜ್ಞಾನವನ್ನು ನೀಡುವುದು ತನ್ನ ಆಗಮನದ ಉದ್ದೇಶವೆಂದು ಅವರು ಹೇಳಿದರು.

ಅವರ ಆಗಮನದ ಕಾಲದಲ್ಲಿ ಇಸ್ಲಾಂ ಧರ್ಮದ ಅನುಯಾಯಿಗಳು ಸಹ ಧಾರ್ಮಿಕವಾಗಿ ಅತ್ಯಂತ ಶೋಚನೀಯ ಸ್ಥಿತಿಗೆ ತಲಪಿದ್ದರು. ಮುಹಮ್ಮದ್ ಪೈಗಂಬರ್ (ಸ) ರ ಭವಿಷ್ಯವಾಣಿಗಳಲ್ಲಿ ವಿವರಿಸಿರುವ ಪ್ರಕಾರ ಅನೇಕಾನೇಕ ಅಂಧವಿಶ್ವಾಸಗಳೂ ದುರಾಚಾರಗಳೂ ಮುಸ್ಲಿಂ ಸಮುದಾಯವನ್ನು ಆವರಿಸಿದ್ದವು. ಅವರು ಆಂತರಿಕವಾಗಿಯೂ

ಬಾಹ್ಯವಾಗಿಯೂ ಅಧಃಪತನಗೊಂಡು ಅವನತಿಯ ಅಂಚಿನಲ್ಲಿದ್ದರು. ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಅಹ್ಮದ್ (ಅ) ಅವರು ತಾನು ಮುಹಮ್ಮದ್ ಮುಸ್ತಫಾ (ಸ.ಅ.)ರ ಭವಿಷ್ಯವಾಣಿ ಪ್ರಕಾರ ಲೋಕೋದ್ಧಾರಕ್ಕಾಗಿ ಆಗತನಾದ ಮಹ್‌ದೀ ಮಸೀಹ್ ಆಗಿರುವೆನೆಂದು ವಾದಿಸಿದರು.

ಈಸಾ ಮಸೀಹ್ ಪುನಃ ಬರುವರೆಂಬ ಭವಿಷ್ಯವಾಣಿಯ ತಾತ್ಪರ್ಯ ತನ್ನ ಬರುವಿಕೆಯ ಕುರಿತಾಗಿದೆ ಎಂದೂ ತನ್ನ ಕುರಿತು ಪ್ರವಾದಿ ಈಸಾ (ಅ) ಸಹ ಭವಿಷ್ಯ ನುಡಿದಿರುವುದಾಗಿಯೂ ತನ್ನ ಹೆಸರು ಅಹ್ಮದ್ ಆಗಿರುವುದೆಂದೂ ಅವರು ಹೇಳಿದರು. ಆದುದರಿಂದ ಪ್ರವಾದಿ ಈಸಾ (ಅ) ತನ್ನ ನಂತರ ಅಹ್ಮದ್ ಎಂಬ ನಾಮದ ಓರ್ವ ದೇವನಿಯೋಗ ವಾದಿ ಅವತರಿಸುವರೆಂದು ಭವಿಷ್ಯ ನುಡಿದಿರುವುದಾಗಿ ಪವಿತ್ರ ಖುರ್‌ಆನಿನಲ್ಲಿ ಉಲ್ಲೇಖವಿರುವುದು ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಅಹ್ಮದ್ (ಅ) ಅವರ ಕುರಿತಾಗಿದೆ ಎಂದು ಸ್ಪಷ್ಟವಾಗುತ್ತದೆ.

### ಎರಡು ರೀತಿಯಲ್ಲಿ ಪೂರ್ತೀಕರಣಗೊಂಡ ಭವಿಷ್ಯವಾಣಿ

ಪವಿತ್ರ ಖುರ್‌ಆನಿನಲ್ಲಿರುವ ಪ್ರಸ್ತುತ ಉಲ್ಲೇಖವು ಹಝ್ರತ್ ಮುಹಮ್ಮದ್ ಪೈಗಂಬರರ ಕುರಿತಾಗಿದೆ ಎಂದು ಕೆಲವು ಪೂರ್ವಿಕ ಖುರ್‌ಆನ್ ಭಾಷ್ಯಕಾರರೂ ಪಂಡಿತರೂ ಪ್ರತಿಪಾದಿಸಿರುವರು. ಪ್ರಸ್ತುತ ಭವಿಷ್ಯವಾಣಿ ಪ್ರಥಮವಾಗಿ ಸಾಕ್ಷಾತ್ಕಾರಗೊಂಡುದು ಸಯ್ಯದುನಾ ಹಝ್ರತ್ ಮುಹಮ್ಮದ್ ಮುಸ್ತಫಾ (ಸಲ್ಲಲ್ಲಾಹು ಅಲೈಹಿ ವ ಸಲ್ಲಂ) ಅವರಲ್ಲಾಗಿತ್ತು ಎಂಬ ಸತ್ಯವನ್ನು ನಾವು ನಿರಾಕರಿಸುವುದಿಲ್ಲ. ಹಝ್ರತ್ ಅಹ್ಮದ್ (ಅ) ತಾನು ಮುಹಮ್ಮದ್ ಪೈಗಂಬರರ ಶಿಷ್ಯನೂ ಅವರ ಪ್ರತಿಬಿಂಬವೂ ಆಗಿರುವೆನೆಂದು ವಾದಿಸಿದವರಾಗಿದ್ದಾರೆ. ಅವರ ಗುರುವರ್ಯರೂ ಯಜಮಾನರೂ ಆದ ಮುಹಮ್ಮದ್ ಪೈಗಂಬರರಲ್ಲಿ ಇಲ್ಲದೆ ಇರುವ ಯಾವ ಗುಣ ಮಹಾತ್ಮೆಗಳೂ ಆಧ್ಯಾತ್ಮಿಕ ಸ್ಥಾನಮಾನಗಳೂ ಶಿಷ್ಯ ಪ್ರವಾದಿಯಾದ ಹಝ್ರತ್ ಅಹ್ಮದ್‌ರಲ್ಲಿರಲು ಸಾಧ್ಯವಿಲ್ಲ. ತನಗೆ ಲಭಿಸಿದ ಸರ್ವ ಅನುಗ್ರಹಗಳೂ ಸ್ಥಾನಮಾನಗಳೂ ತನ್ನ ಗುರುವರ್ಯರೂ ನೇತಾರರೂ ಯಜಮಾನರೂ ಆದ ಖಾತಮುಲ್ ಅಂಬಿಯಾ ಮುಹಮ್ಮದ್ ಮುಸ್ತಫಾ (ಸ.ಅ.) ರವರ ಮುಖಾಂತರ ಮಾತ್ರವೇ ತನಗೆ ಲಭಿಸಿರುತ್ತದೆ ಎಂದು ಅವರು ಅತ್ಯಂತ ಸ್ಪಷ್ಟವಾಗಿಯೂ ಪದೇಪದೇ ಪುನರಾವರ್ತಿಸಿಯೂ ಪ್ರತಿಪಾದಿಸಿರುತ್ತಾರೆ. ಆದುದರಿಂದ ಪ್ರವಾದಿ ಈಸಾ (ಅ) ಭವಿಷ್ಯ ನುಡಿದ ಅಹ್ಮದ್ ಎಂಬ ಸಂದೇಶವಾಹಕನ ಆಗಮನವು ಮೂಲತಃ ಹಝ್ರತ್ ಮುಹಮ್ಮದ್ ಪೈಗಂಬರರಲ್ಲಿ ಒಂದೊಮ್ಮೆ ಸಾಕ್ಷಾತ್ಕಾರಗೊಂಡರೆ, ಅವರ ಪ್ರತಿಬಿಂಬವೂ ನೆರಳೂ ಆಗಿರುವ ಹಝ್ರತ್ ಅಹ್ಮದ್‌ರಲ್ಲಿ ಅದು ಅಕ್ಷರಾರ್ಥದಲ್ಲಿಯೂ ಪ್ರತಿಬಿಂಬಾತ್ಮಕವಾಗಿಯೂ ಮತ್ತೊಮ್ಮೆ ಸಾಕ್ಷಾತ್ಕಾರಗೊಂಡಿತು. ❑


# MINARET

QUARTERLY JOURNAL

Ahmadiyya English Organ

**Annual Subscription : Rs. 40/-**

Write to:
The Manager
**Minaret Quarterly**
Royal Agency, Kannur - 670 001 (Kerala)

# BADR Weekly

**Ahmadiyya Urdu Organ**

**Annual Subscription : Rs. 40/-**

**Writ to : The Manager, Badr Weekly, Qadian - 143516 (Punjab)**

# ಒಂದು ವರ್ಷದಲ್ಲಿ ಐವತ್ತು ಲಕ್ಷ ನವ ಅಹ್ಮದಿಯರು

ಇಸ್ಲಾಮಾಬಾದ್ (ಟಿಲ್‌ಫೋರ್ಡ್, ಲಂಡನ್): ಕಳೆದ ಒಂದು ವರ್ಷದಲ್ಲಿ 93 ದೇಶಗಳ 223 ಜನಾಂಗಗಳ 50 ಲಕ್ಷದ 4 ಸಾವಿರದ 591 ಮಂದಿ ಅಹ್ಮದಿಯಾ ಸಂಘಟನೆಗೆ ಸೇರಿದ್ದಾರೆಂದು ಅಹ್ಮದಿಯಾ ಖಲೀಫರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ಹೇಳಿದ್ದಾರೆ. ಕಳೆದ ಜುಲಾಯಿ 31ರಿಂದ ಅಗೋಸ್ತು 2ರ ವರೆಗೆ ಜರಗಿದ ಬ್ರಿಟನಿನ 33ನೇ ಅಹ್ಮದಿಯಾ ವಾರ್ಷಿಕ ಸಮ್ಮೇಳನದ ದ್ವಿತೀಯ ದಿನದ ತನ್ನ ಭಾಷಣದಲ್ಲಿ ಇದನ್ನು ಅವರು ಬಹಿರಂಗಪಡಿಸಿದರು.

ಪ್ರಪಂಚದಲ್ಲೆಡೆ ವ್ಯಾಪಿಸುತ್ತಿರುವ ಅಹ್ಮದಿಯಾ ಸಂಘಟನೆಯ ಸಾಧನೆಗಳನ್ನು ಅವರು ವಿವರಿಸುತ್ತಿದ್ದರು. ಅವರು ನುಡಿದರು: "ದೇವಾನುಗ್ರಹದಿಂದ ಐವರಿಕೋಸ್ಟ್‌ನಲ್ಲಿ 584 ಹೊಸ ಸ್ಥಳಗಳಲ್ಲಿ ಜಮಾಅತ್ ಸ್ಥಾಪಿಸಲ್ಪಟ್ಟಿದೆ. ಅಲ್ಲಿ 377 ಮಸೀದಿಗಳು. ನಮಗೆ ದೊರೆತಿವೆ. ಇವುಗಳ ಪೈಕಿ ಒಂದು ಮಸೀದಿಯನ್ನು ಮಾತ್ರ ನಾವು ನಿರ್ಮಿಸಿದ್ದು. ಬಾಕಿ ಎಲ್ಲ ಮಸೀದಿಗಳು, ಜನರು ಗುಂಪು ಗುಂಪಾಗಿ ಅಹ್ಮದಿಯಾ ಜಮಾಅತಿಗೆ ಸೇರಿದ ಕಾರಣದಿಂದ ನಮಗೆ ದೊರೆತವು. ಅಲ್ಲಿ 42 ಗ್ರಾಮಗಳ ನಿವಾಸಿಗಳು ಅಹ್ಮದಿಯಾ ಸಂಘಟನೆಗೆ ಸೇರಿದ್ದಾರೆ. ತೂಬಾ ಎಂಬ ಗ್ರಾಮ ವಾಸಿಗಳೆಲ್ಲರೂ ಅಹ್ಮದಿಯರಾಗಿದ್ದಾರೆ. ನಿಕರಾಗುವಾದಲ್ಲಿ ಸುಶಕ್ತವಾದ ರೀತಿಯಲ್ಲಿ ಸಂಘಟನೆಯು ಸ್ಥಾಪಿಸಲ್ಪಟ್ಟಿದೆ.

"ಘಾನದಲ್ಲಿ 152 ಹೊಸ ಸ್ಥಳಗಳಲ್ಲಿ ಜಮಾಅತ್ ರೂಪುಗೊಂಡಿದೆ. ಅಲ್ಲಿ 17 ಮಸೀದಿಗಳು ನಮಗೆ ದೊರೆತಿವೆ. 28 ಮಸೀದಿಗಳನ್ನು ನಾವು ನಿರ್ಮಿಸಿದ್ದೇವೆ. ಟಾಂಜನಿಯಾದಲ್ಲಿ 2,50,000 ಮಂದಿ ಅಹ್ಮದಿಯತ್ ಸ್ವೀಕರಿಸಿದ್ದಾರೆ. ಕೆನ್ಯಾದಲ್ಲಿ 55 ಹೊಸ ಸ್ಥಳಗಳಲ್ಲಿ ಸಂಘಟನೆಯ ಶಾಖೆಗಳು ಸ್ಥಾಪಿಸಲ್ಪಟ್ಟಿವೆ.

"ಕಳೆದ ಒಂದು ವರ್ಷದಲ್ಲಿ ಅಲ್ಲಾಹನ ಅನುಗ್ರಹದಿಂದ 2562 ಹೊಸ ಸ್ಥಳಗಳಲ್ಲಿ ಜಮಾಅತ್ ಶಾಖೆಗಳು ಸ್ಥಾಪಿಸಲ್ಪಟ್ಟಿವೆ. 1984 ಎಪ್ರಿಲ್ ಮೊದಲ್ಗೊಂಡು ಇಷ್ಟರವರೆಗೆ ಪಾಕಿಸ್ತಾನದ ಹೊರಗೆ 10,919 ಜಮಾಅತ್ ಶಾಖೆಗಳು ಸ್ಥಾಪಿಸಲ್ಪಟ್ಟಿವೆ. ಈ ವರ್ಷ 1066 ಮಸೀದಿಗಳ ಹೆಚ್ಚಳವಾಗಿದೆ. ಅವುಗಳಲ್ಲಿ 118 ಮಸೀದಿಗಳು ನಾವು ನಿರ್ಮಿಸಿದ್ದು; 948 ಮಸೀದಿಗಳು ನಮಗೆ ದೊರೆತದ್ದು.

"ಐದು ವರ್ಷಗಳ ಮೊದಲು ಫ್ರೆಂಚ್ ಭಾಷೆ ಮಾತನಾಡುವ ದೇಶಗಳಲ್ಲಿ ಅಹ್ಮದಿಯಾ ಸಂಘಟನೆಗೆ ಉಂಟಾಗುವ ಮಹತ್ತರವಾದ ಅಭಿವೃದ್ಧಿಯ ಬಗ್ಗೆ ನಾನು ಕಂಡ ಒಂದು ಸ್ವಪ್ನವನ್ನು ಜಮಾಅತಿಗೆ ನಾನು ತಿಳಿಸಿದ್ದೆ. ಕಳೆದ ಐದು ವರ್ಷಗಳಲ್ಲಿ ಅಲ್ಲಿ 70 ಲಕ್ಷದ 50 ಸಾವಿರದ 511 ಮಂದಿ ಅಹ್ಮದಿಯಾ ಸಂಘಟನೆಗೆ ಸೇರಿದ್ದಾರೆ. ಈ ವರ್ಷ ಭಾರತದಲ್ಲಿ 6 ಲಕ್ಷದ 49 ಸಾವಿರದ 449 ಮಂದಿ ಅಹ್ಮದಿಯತ್ ಸ್ವೀಕರಿಸಿದ್ದಾರೆ.

"ಅಮೇರಿಕದಲ್ಲಿ 36 ಮತ್ತು ಕೆನಡಾದಲ್ಲಿ 10 ಪ್ರಚಾರ ಕೇಂದ್ರಗಳನ್ನು ಈ ವರ್ಷ ಸ್ಥಾಪಿಸಲಾಗಿದೆ. ಭಾರತದಲ್ಲಿ 923 ಹೊಸ ಸ್ಥಳಗಳಲ್ಲಿ ಸಂಘಟನೆಯ ಶಾಖೆಗಳು ರೂಪುಗೊಂಡಿವೆ. 45 ಮಸೀದಿಗಳು ನಮಗೆ ಲಭಿಸಿವೆ.

"ಈ ವರ್ಷ ವಿವಿಧ ದೇಶಗಳಲ್ಲಿ 140 ಎಕ್ಸಿಬಿಷನ್‌ಗಳನ್ನು ಏರ್ಪಡಿಸಲು ನಮಗೆ ಭಾಗ್ಯ ಲಭಿಸಿದೆ. ಹಾಗೆಯೇ 2426 ಬುಕ್‌ಸ್ಟಾಲ್‌ಗಳನ್ನು ಸ್ಥಾಪಿಸಲಾಯಿತು. ಈ ಮೂಲಕ ಲಕ್ಷಾಂತರ ಜನರಿಗೆ ಅಹ್ಮದಿಯಾ ಸಂದೇಶವನ್ನು ತಲುಪಿಸಲು ಸಾಧ್ಯವಾಯಿತು.

"110 ಯುವ ಸ್ವಯಂ ಸೇವಕರಿರುವ ಒಂದು ತಂಡವು ದಿನಂಪ್ರತಿ 24 ಗಂಟೆ ಕಾಲ ಮುಸ್ಲಿಂ ಟೆಲಿವಿಶನ್ ಅಹ್ಮದಿಯಾ ಇಂಟರ್‌ನೇಶನಲ್ (MTAI)ಗೋಸ್ಕರ ಕಾರ್ಯನಿರತವಾಗಿದೆ. ಈ ಮೂಲಕ ನಮ್ಮ ಪ್ರಚಾರ ಕಾರ್ಯ ಶಕ್ತಿಯುತವಾಗಿ 5 ಭೂಖಂಡಗಳಲ್ಲೂ ಮುನ್ನೇರುತ್ತಿದೆ.

"ಲೋಕದ ವಿವಿಧ ಭಾಗಗಳಲ್ಲಿ ನಮ್ಮ ಆಸ್ಪತ್ರೆಗಳು ಕಾರ್ಯನಿರತವಾಗಿವೆ. 10 ಆಫ್ರಿಕನ್ ದೇಶಗಳಲ್ಲಿ 31 ದೊಡ್ಡ ಆಸ್ಪತ್ರೆಗಳು ಸೇವೆ ಸಲ್ಲಿಸುತ್ತಿವೆ. ಅಲ್ಲಿ ಅಲೋಪಥಿಕ್ ಚಿಕಿತ್ಸೆ ಮಾಡಲಾಗುತ್ತದೆ. ಈ ದೊಡ್ಡ ಆಸ್ಪತ್ರೆಗಳಲ್ಲದೆ, ಸಣ್ಣ ಸಣ್ಣ ಶುಶ್ರೂಷಾ ಕೇಂದ್ರಗಳೂ ಡಿಸ್ಪೆನ್ಸರಿಗಳೂ ಹಲವೆಡೆಗಳಲ್ಲಿ ಸ್ಥಾಪಿಸಲ್ಪಟ್ಟಿವೆ. ಇಂಡೋನೇಶ್ಯದಲ್ಲಿ 93 ಹೋಮಿಯೋ ಡಿಸ್ಪೆನ್ಸರಿಗಳನ್ನು ತೆರೆಯಲಾಗಿದೆ. ಉಚಿತವಾಗಿಯೂ ಮದ್ದುಗಳನ್ನು ನೀಡಲಾಗುತ್ತದೆ. ನಮ್ಮ ಆಸ್ಪತ್ರೆಗಳಲ್ಲೆಲ್ಲ ಬಡವರಿಗೆ ದೊಡ್ಡ ಶಸ್ತ್ರ ಚಿಕಿತ್ಸೆಗಳನ್ನೂ ಉಚಿತವಾಗಿ ಮಾಡಲಾಗುತ್ತದೆ."

"ಇಷ್ಟರ ವರೆಗೆ 52 ಭಾಷೆಗಳಲ್ಲಿ ಖುರ್‌ಆನ್ ಅನುವಾದಗಳು ಪ್ರಕಟಗೊಂಡಿವೆ. ಈ ವರ್ಷ ನಾಲ್ಕು ಭಾಷೆಗಳಲ್ಲಿ ಖುರ್‌ಆನ್ ಭಾಷಾಂತರಗಳು ಪೂರ್ಣಗೊಂಡಿವೆ. 1. ಕಿಕ್ಕಾಮಂಬ (ಕೆನ್ಯಾದಲ್ಲಿರುವ ಒಂದು ಭಾಷೆ). 2. ಖಮೀರ್ (ಕಂಬೋಡಿಯಾದಲ್ಲಿರುವ ಒಂದು ಭಾಷೆ) 3.ಕಾಶ್ಮೀರಿ. 4. ಹಂಗೇರಿಯನ್. ಬೇರೆ 20 ಭಾಷೆಗಳಲ್ಲಿ ಭಾಷಾಂತರ ಕಾರ್ಯ ನಡೆಯುತ್ತಿದೆ. 8 ಭಾಷೆಗಳಲ್ಲಿ ಭಾಷಾಂತರ ಆರಂಭಿಸಲಿಕ್ಕೆ ಏರ್ಪಾಡು ಮಾಡಲಾಗಿದೆ".

ಸುಮಾರು 15 ಸಾವಿರ ಮಂದಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

# ದಕ್ಷಿಣ ಭಾರತ ಅಹ್ಮದಿಯಾ ಸಮ್ಮೇಳನ

ದಕ್ಷಿಣ ಭಾರತ 5ನೇ ಅಹ್ಮದಿಯಾ ಸಮ್ಮೇಳನವು ಕಳೆದ ಮೇ 9, 10 ದಿನಾಂಕಗಳಂದು ಶಿವಮೊಗ್ಗ ನಗರದ ಕುವೆಂಪು ರಂಗಮಂದಿರದಲ್ಲಿ ಸಮಾವೇಶಗೊಂಡಿತು. ಕರ್ನಾಟಕ, ಕೇರಳ, ತಮಿಳುನಾಡು ಮತ್ತು ಆಂಧ್ರಪ್ರದೇಶದ ಅಹ್ಮದಿ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

## ಸರ್ವಧರ್ಮ ಸಮ್ಮೇಳನ

ಪ್ರಥಮ ದಿನ ಜರಗಿದ ಸರ್ವ ಧರ್ಮ ಸಮ್ಮೇಳನದ ಅಧ್ಯಕ್ಷತೆಯನ್ನು ಅಹ್ಮದಿಯಾ ಖಲೀಫರ ಪ್ರತಿನಿಧಿಯಾಗಿ ಆಗಮಿಸಿದ ಭಾರತದ ಅಹ್ಮದಿಯಾ ಕೇಂದ್ರ ಸಂಸ್ಥೆಯ ಶಿಕ್ಷಣ ಮೇಲಧಿಕಾರಿಯಾದ ಜನಾಬ್ ಜಮೀಲ್ ಅಹ್ಮದ್ ನಾಸಿರ್ ಸಾಹೇಬರು ವಹಿಸಿದ್ದರು. ಧರ್ಮಾನುಯಾಯಿಗಳು ತಂತಮ್ಮ ಧರ್ಮಗಳಲ್ಲಿರುವ ಮೂಲ ತತ್ತ್ವಾದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿದರೆ ಮಾತ್ರವೇ ವಿವಿಧ ಧರ್ಮೀಯರೊಳಗೆ ಪರಸ್ಪರ ಸೌಹಾರ್ದ ಮತ್ತು ಸಾಮರಸ್ಯ ಸಾಧ್ಯವೆಂದು ಅವರು ಹೇಳಿದರು. ಮನಸ್ಸಿನೊಳಗೆ ವಿದ್ವೇಷವನ್ನಿಟ್ಟುಕೊಂಡು ಕೋಮು ಸೌಹಾರ್ದದ ಸೋಗು ಹಾಕಿ ಪರಸ್ಪರ ಮೈತ್ರಿ ಸಾಧಿಸುವುದು ಅಸಾಧ್ಯವೆಂದೂ, ದೇವರ ಸಮಸ್ತ ಸೃಷ್ಟಿಗಳನ್ನು ಪ್ರಾಮಾಣಿಕವಾಗಿ ಪ್ರೀತಿಸುವುದರಿಂದ ಮಾತ್ರ ಜಗತ್ತಿನಲ್ಲಿ ಶಾಂತಿ ಸ್ಥಾಪನೆ ಸಾಧ್ಯವಾಗುವುದೆಂದೂ ಅವರು ವಿವರಿಸಿ ಹೇಳಿದರು.

ಸಮ್ಮೇಳನವನ್ನು ಉದ್ಘಾಟಿಸಿದ ಅಹ್ಮದಿಯಾ ಮುಸ್ಲಿಂ ಸಂಘಟನೆಯ ಕರ್ನಾಟಕ ರಾಜ್ಯದ ಅಧ್ಯಕ್ಷರಾದ ಜನಾಬ್ ಮುಹಮ್ಮದ್ ಶಫೀಉಲ್ಲಾ ಸಾಹೇಬರು, ಕೋಮು ಸೌಹಾರ್ದಕ್ಕಾಗಿ ಅಹ್ಮದಿಯಾ ಸಂಘಟನೆಯು ಹಮ್ಮಿಕೊಂಡಿರುವ ಕಾರ್ಯಕ್ರಮಗಳನ್ನು ವಿವರಿಸಿದರು. ಅಹ್ಮದಿಯಾ ಸಂಘಟನೆ ಸ್ಥಾಪಿತವಾಗಿರುವ ಜಗತ್ತಿನ 160 ರಾಷ್ಟ್ರಗಳಲ್ಲೂ ಈ ಸಂಘಟನೆ ಧರ್ಮ ಸಾಮರಸ್ಯಕ್ಕಾಗಿ ಶಕ್ತಿಮೀರಿ ಶ್ರಮಿಸುತ್ತದೆಂದು ಅವರು ನುಡಿದರು.

ಜ| ಎಂ.ಪಿ. ಇಬ್ರಾಹಿಂ ಸಾಹೇಬ್ (ಮಂಜೇಶ್ವರ), ಫಾದರ್ ಫೆಲಿಕ್ಸ್ ಜೋಸೆಫ್ ನರೊನ್ಹ (ಪಾರಿಶ್ ಪ್ರೀಸ್ಟ್, ಸೇಕ್ರೆಡ್ ಹಾರ್ಟ್ ಕ್ಯಾಥಡ್ರಲ್, ಶಿವಮೊಗ್ಗ), ಶ್ರೀ ಪಾರ್ಶ್ವನಾಥ್, ಶ್ರೀ ಬಿ.ಎಸ್. ಬಹದ್ದೂರ್ ಸಿಂಗ್ ಸಾಹೇಬ್ ತ್ರೆಹೆನ್ (ಗುರುದ್ವಾರ, ಗುರುನಾನಕ್ ದರ್ಬಾರ್, ಶಿವಮೊಗ್ಗ), ಪ್ರೊ| ಅಬ್ದುಲ್ ಜಲೀಲ್ ಸಾಹೇಬ್ (ಕರುನಾಗಪಳ್ಳಿ), ಜ| ಮುಹಮ್ಮದ್ ಉಮರ್ ಸಾಹೇಬ್ (ಅಹ್ಮದಿಯಾ ಚೀಫ್ ಮಿಶನರಿ, ಕೇರಳ) ಮತ್ತು ಶ್ರೀ ತರಳಬಾಳು ಜಗದ್ಗುರು ಡಾ| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ (ಬೃಹನ್ಮಠ, ಸಿರಿಗೆರೆ) ವಿವಿಧ ಧರ್ಮಗಳ ತತ್ತ್ವಗಳನ್ನೂ ಉಪದೇಶಗಳನ್ನೂ ವಿವರಿಸುತ್ತಾ ಭಾಷಣ ಮಾಡಿದರು.

ಧರ್ಮಾನುಯಾಯಿಗಳು ಧರ್ಮಾನುಷ್ಠಾನಗಳನ್ನು ತ್ಯಜಿಸಿ ಅಶಾಂತಿಗೆ ಕಾರಣವುಂಟಾಗುವುದರ ಬಗ್ಗೆ ಸ್ವಾಮೀಜಿಯವರು ಖೇದ ವ್ಯಕ್ತಪಡಿಸಿದರು. ಅಹ್ಮದಿಯಾ ಸಂಘಟನೆ ಈ ನಿಟ್ಟಿನಲ್ಲಿ ಉತ್ತಮವಾದ ಮಾದರಿಯನ್ನು ತೋರಿಸಿದೆಯೆಂದೂ ಈ ರೀತಿಯ ಸರ್ವಧರ್ಮ ಸಮ್ಮೇಳನಗಳು ಕೋಮು ಸೌಹಾರ್ದಕ್ಕೆ ಬಹಳ ಉಪಯುಕ್ತವಾಗಿವೆ ಎಂದೂ ಹೇಳುತ್ತಾ ಸಭೆಯ ಸಂಘಟಕರನ್ನು ಸ್ವಾಮೀಜಿಯವರು ಮುಕ್ತಕಂಠವಾಗಿ ಶ್ಲಾಘಿಸಿದರು.

ಭಾರತದ ಅಹ್ಮದಿಯಾ ಪ್ರಚಾರ ಕಾರ್ಯ ಮೇಲಧಿಕಾರಿ ಜ| ಮೌಲವಿ ಮುಹಮ್ಮದ್ ಇನಾಮ್ ಸಾಹೇಬ್ ಘೋರಿ ವಿಶಿಷ್ಟ ಅತಿಥಿಯಾಗಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಜ| ಟಿ. ಅಹ್ಮದ್ ಸಈದ್ ಸಾಹೇಬ್ (ಕಲ್ಲಿಕೋಟೆ)ರವರು ಖುರ್‌ಆನ್ ಪಾರಾಯಣ ಮಾಡಿದರು. ಶಿವಮೊಗ್ಗ, ಅಹ್ಮದಿಯಾ ಘಟಕದ ಉಪ ಅಧ್ಯಕ್ಷರಾದ ಮೀರ್ ಅತಾಉರ್ರಹ್ಮಾನ್ ಸಾಹೇಬ್‌ರವರು ವೇದಿಕೆಯಲ್ಲಿದ್ದ ಗಣ್ಯರಿಗೆ ಹಾರಾರ್ಪಣೆ ಮಾಡಿದರು. ಜ| ಮುಹಮ್ಮದ್ ಯೂಸುಫ್ ಸಾಹೇಬ್ (ಸಂಪಾದಕ, "ಯುಗರಶ್ಮಿ") ಕಾರ್ಯಕ್ರಮವನ್ನು ನಿರೂಪಿಸಿದರು.

## ಸೀರತುನ್ನಬಿ ಸಭೆ

ದ್ವಿತೀಯ ದಿನದ ಸೀರತುನ್ನಬಿ ಸಭೆಯು ಜ| ಎ.ಪಿ. ಕುಞ್ಞಾಮು ಸಾಹೇಬ್ (ಕೇರಳ ಅಹ್ಮದಿಯಾ ಅಮೀರ್)ರವರ ಅಧ್ಯಕ್ಷತೆಯಲ್ಲಿ ಸಂಜೆ 5 ಗಂಟೆಗೆ ಸಮಾವೇಶಗೊಂಡಿತು. ಮೌಲವಿ ಕೆ. ಮಹ್‌ಮೂದ್ ಅಹ್ಮದ್ ಸಾಹೇಬ್ ಖುರ್‌ಆನ್ ಪಾರಾಯಣ ಮಾಡಿದರು.

ಮುಖ್ಯ ಅತಿಥಿಯಾದ ಪ್ರೊ| ಪಿ. ವೆಂಕಟರಾಮಯ್ಯ (ಉಪಕುಲಪತಿ, ಕುವೆಂಪು ವಿಶ್ವವಿದ್ಯಾಲಯ)ರವರು ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರ ಶ್ರೇಷ್ಠತೆಯನ್ನು ಕೊಂಡಾಡಿದರು. "ಸನ್ಮಾರ್ಗ ದರ್ಶಕ" ಎಂಬ ಪುಸ್ತಕವನ್ನು ಅವರು ಬಿಡುಗಡೆಗೊಳಿಸಿದರು. ಮೌಲವಿ ಮುಹಮ್ಮದ್ ಇನಾಂ ಘೋರಿ ಸಾಹೇಬ್, ಮೌ| ಮುಹಮ್ಮದ್ ಉಮರ್ ಸಾಹೇಬ್, ಪ್ರೊಫೆಸರ್ ಹಾಫಿಝ್ ಸಾಲಿಹ್ ಮುಹಮ್ಮದ್ ಅಲ್ಲಾದ್ದೀನ್ ಸಾಹೇಬ್ (ಸಿಕಂದರಾಬಾದ್), ಮೌ| ಮುಹಮ್ಮದ್ ಅಯ್ಯೂಬ್ ಸಾಹೇಬ್ ಮತ್ತು ಜ| ಮುಹಮ್ಮದ್ ಯೂಸುಫ್ ಸಾಹೇಬ್ (ಸಂಪಾದಕ, "ಯುಗರಶ್ಮಿ") ಹಝ್ರತ್ ಮುಹಮ್ಮದ್ ಪೈಗಂಬರರ ಜೀವನದ ವಿವಿಧ ಘಟ್ಟಗಳ ಬಗ್ಗೆ ಮತ್ತು ಮನುಷ್ಯ ವಂಶಕ್ಕೆ ಅವರು ನೀಡಿದ ಉಪದೇಶಗಳ ಕುರಿತು ಭಾಷಣ ಮಾಡಿದರು. ಕೊನೆಗೆ ಮೌಲವಿ ಮುಹಮ್ಮದ್ ಇನಾಂ ಘೋರಿ ಸಾಹೇಬರು ಕೃತಜ್ಞತೆ ಸಲ್ಲಿಸಿದರು.

ಕ್ಲೋಸ್ ಸರ್ಕಿಟ್ ಟಿ.ವಿ. ಮೂಲಕ ಸಮ್ಮೇಳನದ ಕಾರ್ಯಕ್ರಮಗಳನ್ನು ವೀಕ್ಷಿಸಲು ಮಹಿಳೆಯರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿತ್ತು.

ಬೆಳಿಗ್ಗೆ 10 ಗಂಟೆಗೆ ಜ| ಮೆಹರುದ್ದೀನ್ ಸಾಹೇಬ್ (ಅಮೀರ್, ಸಿಕಂದರಾಬಾದ್)ರವರ ಅಧ್ಯಕ್ಷತೆಯಲ್ಲಿ ಶಿಕ್ಷಣ ಸಭೆ ಜರಗಿತು. ಹಲವು ಅಹ್ಮದಿಯಾ ವಿದ್ವಾಂಸರು ಶಿಕ್ಷಣಪರವಾದ ವಿವಿಧ ವಿಷಯಗಳ ಕುರಿತು ಭಾಷಣ ಮಾಡಿದರು.

# 107ನೇ ಅಹ್ಮದಿಯಾ ವಾರ್ಷಿಕ ಮಹಾ ಸಮ್ಮೇಳನ

ಭಾರತದ ಅಹ್ಮದಿಯಾ ಪ್ರಧಾನ ಕೇಂದ್ರವಾದ ಖಾದಿಯಾನಿನಲ್ಲಿ ಕಳೆದ ಡಿಸೆಂಬರ್ 5, 6, 7 ದಿನಾಂಕಗಳಂದು 107ನೇ ವಾರ್ಷಿಕ ಮಹಾಸಮ್ಮೇಳನ (ಜಲ್ಸ ಸಾಲಾನ) ಜರಗಿತು. ಪಾಕಿಸ್ತಾನ, ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ, ಭೂತಾನ, ಯು.ಕೆ., ಜರ್ಮನಿ, ಕೆನಡಾ, ಅಮೇರಿಕ, ಮೊರಿಷ್ಯಸ್, ಆಸ್ಟ್ರೇಲಿಯಾ, ಸ್ವೀಡನ್, ನೋರ್ವೆ, ಈಜಿಪ್ಟ್, ಸೌದಿ ಅರೇಬಿಯಾ, ನ್ಯೂಝಿಲೇಂಡ್, ಗ್ರೀಸ್, ಖತರ್, ಫೆಲಸ್ತೀನ್ ಮುಂತಾದ 26 ರಾಷ್ಟ್ರಗಳಿಂದಿರುವ ಪ್ರತಿನಿಧಿಗಳು ಸಹಿತ ಸುಮಾರು ಹತ್ತು ಸಾವಿರ ಮಂದಿ ಸಮ್ಮೇಳನದಲ್ಲಿ ಭಾಗವಹಿಸಿದರು.

ಉದ್ಘಾಟನಾ ಅಧಿವೇಶನ ಖಾರಿ ನವಾಬ್ ಅಹ್ಮದ್ ಸಾಹೇಬರ ಖುರ್‌ಆನ್ ಪಾರಾಯಣದೊಂದಿಗೆ ಆರಂಭವಾಯಿತು. ಅಹ್ಮದಿಯಾ ಖಲೀಫರ ವಿಶೇಷ ಪ್ರತಿನಿಧಿ ಮೌಲಾನ ಹಕೀಂ ಮುಹಮ್ಮದುದ್ದೀನ್ ಸಾಹೇಬ್ ಅಧ್ಯಕ್ಷತೆ ವಹಿಸಿದರು.

ಲಂಡನಿನಿಂದ ಖಲೀಫರು ಮಾಡಿದ ಉದ್ಘಾಟನಾ ಭಾಷಣವನ್ನು "ಮುಸ್ಲಿಂ ಟೆಲಿವಿಶನ್ ಅಹ್ಮದಿಯಾ" ಮೂಲಕ ಮತ್ತು ಇಂಟರ್‌ನೆಟ್ ಮೂಲಕ ಲೋಕದಲ್ಲಿಡೀ ಅದೇ ಸಮಯ ಬಿತ್ತರಿಸಲಾಯಿತು. ಖಲೀಫರು ಹೇಳಿದರು: "ಈ ಸಮ್ಮೇಳನದ ಉದ್ದೇಶ ಮಾನವರನ್ನು ದೇವಪಥದೆಡೆಗೆ ಕೊಂಡೊಯ್ಯುವುದಾಗಿದೆ. ದೇವಾಸ್ತಿತ್ವದ ಬಗ್ಗೆ ಅರಿವು ಅದಕ್ಕೆ ಅನಿವಾರ್ಯ. ಬೇರೆ ಯಾವುದರಲ್ಲೂ ಇಲ್ಲದಂತಹ ಮಮತೆ ನಮಗೆ ದೇವನೊಡನಿರಬೇಕಾಗಿದೆ. ಅವನ ಆಜ್ಞಾನುಸಾರ ನಮ್ಮ ಜೀವನ ನಡೆಸಬೇಕಾಗಿದೆ. ಎಲ್ಲ ಧರ್ಮೀಯರೊಡನೆ ಸೌಹಾರ್ದದಿಂದ ವರ್ತಿಸಬೇಕಾಗಿದೆ".

ಅವರು ಮುಂದುವರಿಸಿ ಹೇಳಿದರು: "ರಾಜಸ್ಥಾನ, ಉತ್ತರಪ್ರದೇಶ, ಆಂಧ್ರಪ್ರದೇಶ, ಹಿಮಾಚಲ ಪ್ರದೇಶ ಮುಂತಾದ ಸ್ಥಳಗಳಿಂದ ಸಮ್ಮೇಳನಕ್ಕೆ ಬರುವವರನ್ನು ಕೆಲವು ಮುಲ್ಲಾಗಳೂ ಅವರ ಸಹಚರರೂ ತಡೆದಿದ್ದರು. ಅವರ ವಿರೋಧವನ್ನು ಕಡೆಗಣಿಸಿ ಸಾವಿರಗಟ್ಟಲೆ ನವ ಅಹ್ಮದೀಯರು ಈ ಸಮ್ಮೇಳನಕ್ಕೆ ಆಗಮಿಸಿದ್ದಾರೆ. ಇದು ಅಲ್ಲಾಹನಿಂದ ಸ್ಥಾಪಿತವಾದ ಜಮಾಅತಾಗಿದೆ. ಲೋಕವಿಡೀ ಒಟ್ಟು ಸೇರಿ ಇದನ್ನು ನಿರ್ಮೂಲನ ಮಾಡಲು ಪ್ರಯತ್ನಿಸಿದರೂ ಅದು ನಾಶವಾಗದೆಂದು ಅಲ್ಲಾಹನು ಮುನ್ಸೂಚನೆ ನೀಡಿದ್ದಾನೆ. ಅಲ್ಲಾಹನು ಇಚ್ಛಿಸಿದರೆ ಸದ್ಯೋಭವಿಷ್ಯದಲ್ಲೇ ಅಹ್ಮದಿಯಾ ಕಾರ್ಯರಂಗದಲ್ಲಿ ಪಾಕಿಸ್ತಾನವನ್ನು ಭಾರತ ಹಿಂದೆ ಹಾಕುವುದು.

ಇಂಗ್ಲಿಷ್, ಅರಬಿ, ಜರ್ಮನ್, ಬಂಗಾಳಿ, ಹಿಂದಿ, ಮಲಯಾಳಂ, ತಮಿಳು, ತೆಲುಗು, ಕನ್ನಡ ಎಂಬೀ ಭಾಷೆಗಳಲ್ಲಿ ಖಲೀಫರ ಭಾಷಣದ ಅನುವಾದಗಳನ್ನು ತತ್ಸಮಯದಲ್ಲೇ ಕೇಳಿಸಲಾಯಿತು.

ಪಂಜಾಬ್ ಆರೋಗ್ಯ ಸಚಿವ ಶ್ರೀ ಸೇವಾಸಿಂಗ್ ಸೀಖ್‌ವಾನ್, ಉದ್ಯಮ ಸಚಿವ ಸಚ್ಚಾಸಿಂಗ್ ಲಂಗಾಹ್, ಡಿ.ಎಸ್.ಪಿ. ಸತಂದರ್ ಸಿಂಗ್, ಮಾಜಿ ವಿದೇಶ ಸಚಿವ ಘೋಂದನ್‌ಲಾಲ್ ಭಾಟಿಯಾ, ಎಂ.ಎಲ್.ಎ. ಸರ್ದಾರ್ ಬಲ್‌ಬೀರ್‌ಸಿಂಗ್, ಮಾಜಿ ಸಚಿವ ತರ್ಪತ್ ರಾಜೇಂದರ್ ಸಿಂಗ್ ಮೊದಲಾದ ಗಣ್ಯರು ಸಮ್ಮೇಳನದಲ್ಲಿ ಉಪಸ್ಥಿತರಿದ್ದರು.

ಸಮ್ಮೇಳನಕ್ಕೆ ಶುಭಾಶಯಗಳನ್ನು ಹಾರೈಸಿ ಪಂಜಾಬ್ ಮುಖ್ಯಮಂತ್ರಿ ಶ್ರೀ ಪ್ರಕಾಶ್‌ಸಿಂಗ್ ಬಾದಲ್, ಹಿಮಾಚಲ್ ಪ್ರದೇಶ ಮುಖ್ಯಮಂತ್ರಿ ಶ್ರೀ ಪ್ರೇಂ ಕುಮಾರ್ ಧೋವಲ್, ಹರಿಯಾಣ ಮುಖ್ಯಮಂತ್ರಿ ಶ್ರೀ ಬನ್ಸಿಲಾಲ್ ಮೊದಲಾದವರು ಸಂದೇಶಗಳನ್ನು ಕಳುಹಿಸಿದ್ದರು.

ಮೌಲಾನ ಕರೀಮುದ್ದೀನ್ ಸಾಹೇಬ್ ಶಾಹಿದ್ (ಪ್ರಿನ್ಸಿಪಾಲ್, ಜಾಮಿಅ ಅಹ್ಮದಿಯಾ ಖಾದಿಯಾನ್) ತನ್ನ ಭಾಷಣದಲ್ಲಿ ಸ್ತ್ರೀಯರ ಹಕ್ಕುಗಳನ್ನು ಪರಾಮರ್ಶಿಸಿ ಮಾತನಾಡಿದರು: "ಕೇವಲ ಒಂದು ರಾಜ್ಯದ ನಿಯಮದಲ್ಲಿ ಬದಲಾವಣೆ ಮಾಡುವುದರಿಂದಾಗಲಿ ಮಸೂದೆಯನ್ನು ಅಂಗೀಕರಿಸುವುದರಿಂದಾಗಲಿ 1400 ವರ್ಷಗಳಿಗಿಂತ ಮುಂಚೆಯೇ ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಸ್ತ್ರೀಯರಿಗೆ ನೀಡಿದಂತಹ ಹಕ್ಕುಗಳನ್ನು ಯಾವುದೇ ಸರಕಾರಕ್ಕೂ ನೀಡಲು ಸಾಧ್ಯವಿಲ್ಲ. ಮಹಿಳೆಯರ ಹಕ್ಕುಗಳ ಬಗ್ಗೆ ಪವಿತ್ರ ಖುರ್‌ಆನ್ ಸವಿಸ್ತಾರವಾಗಿ ಪ್ರತಿಪಾದಿಸಿರುತ್ತದೆ. ಪುರುಷನಂತೆ ಸ್ತ್ರೀಗೂ ವಿವಾಹ ವಿಚ್ಛೇದನದ ಹಕ್ಕಿದೆ" ಎಂದು ಅವರು ನುಡಿದರು.

ಜಾಮಿಅ ಅಹ್ಮದಿಯಾದ ಪ್ರೊಫೆಸರ್ ಹಮೀದ್ ಕೌಸರ್ ಸಾಹೇಬ್ ಖುರ್‌ಆನ್ ಮತ್ತು ಹದೀಸ್‌ಗಳನ್ನು ಉದ್ಧರಿಸುತ್ತಾ ಹೇಳಿದರು : "ಇಮಾಂ ಮಹ್‌ದಿಯ ಸತ್ಯತೆಯನ್ನು ಬಹಿರಂಗಪಡಿಸಲು ಅಲ್ಲಾಹನು ದೃಷ್ಟಾಂತಗಳನ್ನು ತೋರಿಸಿದನು. ಅದರ ಪ್ರಕಾರ ಇಮಾಂ ಮಹ್‌ದಿಯ ಆವಿರ್ಭಾವವಾಗಿದೆ. ಮುಹಮ್ಮದ್ ಪೈಗಂಬರ್ (ಸ)ರವರ ಪ್ರವಾದನೆಯಂತೆಯೇ 1894ರಲ್ಲಿ ರಮಝಾನ್ ಮಾಸದಲ್ಲಿ, ನಿರ್ದಿಷ್ಟ ದಿನಾಂಕಗಳಂದೇ ಸೂರ್ಯ-ಚಂದ್ರ ಗ್ರಹಣಗಳಾದವು".

ಉಪಗ್ರಹ ಮೂಲಕ ಖಲೀಫರು ನಡೆಸಿದ ಸಮಾರೋಪ ಭಾಷಣದಲ್ಲಿ ಭಾರತ ಸರಕಾರಕ್ಕೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಿದರು.

# ಕೂಡಾಳಿಯಲ್ಲಿ ಮಸೀದಿ ಉದ್ಘಾಟನೆ

ಕೇರಳದ ಕಣ್ಣೂರ್ ಸಮೀಪದ ಕೂಡಾಳಿಯಲ್ಲಿ ನಿರ್ಮಿಸಲ್ಪಟ್ಟ ಅಹ್ಮದಿಯಾ ಮಸೀದಿಯನ್ನು ಕಳೆದ ಡಿಸೆಂಬರ್ 18ರಂದು (ಶುಕ್ರವಾರ) ಕೇರಳ ಅಹ್ಮದಿಯಾ ಅಮೀರ್ ಎ.ಪಿ. ಕುಞ್ಞಾಮು ಸಾಹೇಬರು ಉದ್ಘಾಟಿಸಿದರು. ಮೌಲಾನ ಮುಹಮ್ಮದ್ ಉಮರ್ ಸಾಹೇಬರ ನೇತೃತ್ವದಲ್ಲಿ ಜುಮುಅ ನಮಾಝ್ ನಿರ್ವಹಿಸಲ್ಪಟ್ಟಿತು.

ಜುಮುಅ ನಮಾಝ್ ಬಳಿಕ ಮೌಲಾನ ಮುಹಮ್ಮದ್ ಉಮರ್ ಸಾಹೇಬರ ಅಧ್ಯಕ್ಷತೆಯಲ್ಲಿ ಉದ್ಘಾಟನಾ ಸಭೆ ಜರಗಿತು. ಅಮೀರ್ ಎ.ಪಿ. ಕುಞ್ಞಾಮು ಸಾಹೇಬರು ತನ್ನ ಉದ್ಘಾಟನಾ ಭಾಷಣದಲ್ಲಿ, ಏಕದೇವ ವಿಶ್ವಾಸಿಯಾದ ಯಾರೂ ಇಲ್ಲಿ ಆರಾಧನೆ ಮಾಡಬಹುದೆಂದು ಸಾರಿದರು. ಬಿ.ಎಂ. ಕೋಯ, ಎನ್. ಅಬ್ದುರ್ರಹೀಂ, ಡಾ| ಮನ್ಸೂರ್ ಅಹ್ಮದ್, ಎಂ.ಎ. ಮುಹಮ್ಮದ್, ಇಂಬಿಚ್ಚಿಕೋಯಟ್ಟಿ, ಸಿ.ಎಚ್. ಅಬ್ದುರ್ರಹ್ಮಾನ್, ಕೆ. ಅಬ್ದುಸ್ಸಲಾಮ್ ಮೊದಲಾದವರು ಶುಭಾಶಂಸನೆಗಳನ್ನು ಹಾರೈಸಿದರು.

ಸಿ. ಮುನೀರ್ ಅಹ್ಮದ್ ಸಾಹೇಬರ ಖುರ್‌ಆನ್ ಪಾರಾಯಣದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಕೂಡಾಳಿ ಜಮಾಅತಿನ ಅಧ್ಯಕ್ಷರಾದ ಸಿ. ಮುಬಾರಕ್ ಅಹ್ಮದ್ ಸಾಹೇಬರು ಸ್ವಾಗತಿಸಿದರು. ಯು. ಸಫೀರ್ ಅಹ್ಮದ್ ವರದಿ ಓದಿದರು. ಇ.ಪಿ. ಅಬ್ದುಲ್ ಕರೀಂ ಸಾಹೇಬ್ ಕೃತಜ್ಞತೆ ಸಲ್ಲಿಸಿದರು.

ಮೊದಲಿದ್ದ ಮಸೀದಿಯಲ್ಲಿ ಸ್ಥಳಾಭಾವವಿದ್ದ ಕಾರಣ ಜನಾಬ್ ಡಾ| ಮನ್‌ಸೂರ್ ಅಹ್ಮದ್ ಸಾಹೇಬ್ (ನಾಇಬ್ ಅಮೀರ್, ಕೇರಳ) ಹೊಸ ಮಸೀದಿ ನಿರ್ಮಾಣಕ್ಕೆ ನಿವೇಶನವನ್ನು ವಕ್ಫ್ ಮಾಡಿದ್ದರು. ಕೂಡಾಳಿಯ ಸರ್ವ ಅಹ್ಮದಿಯಾ ಸಹೋದರ ಸಹೋದರಿಯರು ತನುಮನ ಧನಗಳಿಂದ ಮಸೀದಿ ನಿರ್ಮಾಣದಲ್ಲಿ ಭಾಗವಹಿಸಿದ್ದರು. ಈ ಪೈಕಿ ಜ| ಎ.ಪಿ. ಅಬ್ದುಲ್ ಜಲೀಲ್ ಸಾಹೇಬರ ಪಾತ್ರ ಸ್ತುತ್ಯರ್ಹವಾಗಿದೆ.

### "ಅನ್ಸಾರ್" ರಮಝಾನ್ ವಿಶೇಷಾಂಕ

ಇದೇ ಸಂದರ್ಭದಲ್ಲಿ, ಕೇರಳ ಮಜ್‌ಲಿಸ್ ಅನ್ಸಾರುಲ್ಲಾಹ್ ಪ್ರಕಟಿಸಿದ "ಅನ್ಸಾರ್" ತ್ರೈಮಾಸಿಕ ಪತ್ರಿಕೆಯ ರಮಝಾನ್ ವಿಶೇಷ ಸಂಚಿಕೆಯನ್ನು ಕೇರಳ ಅಮೀರ್ ಸಾಹೇಬರು ಬಿಡುಗಡೆಗೊಳಿಸಿದರು.

## ಕೇರಳ ಚೀಫ್ ಮಿಶನರಿಗೆ ಬೀಳ್ಕೊಡುಗೆ

**ಕೂಡಾಳಿ :** ಅಹ್ಮದಿಯಾ ಖಲೀಫರ ಆಜ್ಞಾನುಸಾರ ಪ್ಯಾಲಸ್ತೀನಕ್ಕೆ ಧರ್ಮ ಪ್ರಚಾರಕ್ಕಾಗಿ ಹೋಗುವ ಕೇರಳ ಅಹ್ಮದಿಯಾ ಚೀಫ್ ಮಿಶನರಿ ಮೌಲಾನ ಮುಹಮ್ಮದ್ ಉಮರ್ ಸಾಹೇಬರಿಗೆ ಡಿಸೆಂಬರ್ 18ರಂದು ಕೂಡಾಳಿಯಲ್ಲಿ ಸೇರಿದ ಕೇರಳ ರಾಜ್ಯ ಕಾರ್ಯಕಾರಿ ಸಮಿತಿ ಹಾರ್ದಿಕವಾದ ಬೀಳ್ಕೊಡುಗೆಯನ್ನು ನೀಡಿತು. ಅಮೀರ್ ಎ.ಪಿ. ಕುಞ್ಞಾಮು ಸಾಹೇಬ್ ಬೀಳ್ಕೊಡುಗೆ ಸಭೆಯ ಅಧ್ಯಕ್ಷತೆ ವಹಿಸಿದರು. ನಾಇಬ್ ಅಮೀರ್, ಡಾ| ಮನ್ಸೂರ್ ಅಹ್ಮದ್, ಯು. ಮನ್ಸೂರ್ ಅಹ್ಮದ್, ಬಿಚ್ಚಿಕೋಯಟ್ಟಿ, ಎಂ.ಎ. ಮುಹಮ್ಮದ್, ಪಿ.ಎಂ. ಅಬ್ದುಲ್ಲ, ಎನ್. ಅಬ್ದುರ್ರಹೀಂ, ಬಿ.ಎಂ. ಕೋಯ, ಟಿ.ಕೆ. ಮಹ್ಮೂದ್, ಎಚ್. ಸುಲೈಮಾನ್ ಮೊದಲಾದವರು ಭಾಷಣ ಮಾಡಿದರು.

ಮೌಲಾನ ಮುಹಮ್ಮದ್ ಉಮರ್ ಸಾಹೇಬರು ತನ್ನ ಭಾಷಣದಲ್ಲಿ ಜಮಾಅತಿನ ಸದಸ್ಯರಿಂದ ದೊರೆತ ನಿಸ್ಸೀಮವಾದ ಸಹಕಾರಕ್ಕೆ ಕೃತಜ್ಞತೆ ಸಲ್ಲಿಸಿದರು.

**ಕಲ್ಲಿಕೋಟೆ:** ಎಂಟು ವರ್ಷಗಳ ಕಾಲ ಕೇರಳದಲ್ಲಿ ಪ್ರಧಾನ ಪ್ರಚಾರಕರಾಗಿ ಸೇವೆ ಸಲ್ಲಿಸಿದ ಮೌಲಾನ ಮುಹಮ್ಮದ್ ಉಮರ್ ಸಾಹೇಬರಿಗೆ ಕಲ್ಲಿಕೋಟೆ ಅಹ್ಮದಿಯಾ ಮುಸ್ಲಿಂ ಜಮಾಅತ್‌ನ ವತಿಯಿಂದ ಡಿಸೆಂಬರ್ 20ರಂದು ಬೀಳ್ಕೊಡುಗೆ ನೀಡಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಕೇರಳ ಅಮೀರ್ ಸಾಹೇಬರು ವಹಿಸಿದರು. ಕೊಡಿಯತ್ತೂರ್ ಜಮಾಅತ್ ಅಧ್ಯಕ್ಷರಾದ ಎಂ.ಎ. ಮುಹಮ್ಮದ್ ಸಾಹೇಬ್, ಸಈದ್ ಅಹ್ಮದ್ ಸಾಹೇಬ್, ಎ.ಎಂ. ಸಲೀಂ ಸಾಹೇಬ್ ಮೊಧಲಾದವರು ಭಾಷಣ ಮಾಡಿದರು. ತನಗೆ ಸಹಕಾರ ನೀಡಿದ ಎಲ್ಲರಿಗೂ ಮೌಲಾನ ಸಾಹೇಬ್ ಕೃತಜ್ಞತೆ ಸೂಚಿಸಿದರು.

## ಓದಿದ್ದು.....!

ಮದ್ರಾಸಿಗೆ ಸಮೀಪವಾದ ಸೈದಾಪೇಟೆಯಲ್ಲಿ ಏಳು ವರ್ಷದ ಒಬ್ಬ ಹುಡುಗನು ನಾಲ್ಕು ಆಣೆ ಕದ್ದನೆಂದು ಪೊಲೀಸಿನವರು ಅವನನ್ನು ಮೆಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಮೆಜಿಸ್ಟ್ರೇಟರು ಹುಡುಗನನ್ನು ವಿಚಾರಿಸಿ ಅವನು ಈ ಮೊದಲು ಸಹಾ ಕಳವು ಮಾಡಿದ್ದುಂಟು ಎಂದು ತಿಳಿದು ಅವನಿಗೆ ಆರು ತಿಂಗಳು ಸೆರೆಮನೆಯಲ್ಲಿರಿಸಬೇಕೆಂದು ವಿಧಿಸಿದರು. ಹೈಕೋರ್ಟಿನವರು ಈ ವಿಷಯವನ್ನು ಪುನಃ ಶೋಧಿಸಿ ಹುಡುಗನಿಗೆ ಮೆಜಿಸ್ಟ್ರೇಟರು ವಿಧಿಸಿದ ಶಿಕ್ಷೆ ಹೆಚ್ಚಾಯಿತು, ಅವನಿಗೆ ಛಡಿ ಹೊಡಿಸಿ ಬಿಟ್ಟು ಬಿಡಬೇಕು ಎಂದು ಅಪ್ಪಣೆ ಮಾಡಿದರು.

-ಕ್ರೈಸ್ತ ಸಭಾಪತ್ರವು
ಮಾರ್ಚ್ 1894


# SATHYADOOTHAM

**MONTHLY**

**Ahmadiyya Malayalam Organ**

*Annual Subscription : Rs. 50/-*
*Single Copy : Rs. 5/-*

Write to : The Manager
Sathyadootham
Thavakkara
Kannur - 670 001

# SAMADHANA VAZHI

**MONTHLY**

**Ahmadiyya Tamil Organ**

*Annual Subscription : Rs. 45/-*

Write to : The Editor
Samadhana Vazhi
3, First Main Road,
U.I. Colony,
Kodambakkam,
Chennai - 24

## ದೇವಾಸ್ತಿತ್ವವನ್ನು ರುಜುಗೊಳಿಸುವ, ಧರ್ಮಗಳ ಆವಶ್ಯಕತೆಯನ್ನು ಸಾರುವ, ಆಧ್ಯಾತ್ಮಿಕ ಜ್ಞಾನವನ್ನು ಜನರ ಹೃದಯಗಳಲ್ಲಿ ಮೂಡಿಸುವ ಒಂದು ಉತ್ಕೃಷ್ಟ ತ್ರೈಮಾಸ ಪತ್ರಿಕೆ

# ಯುಗರಶ್ಮಿ

ಯಥಾರ್ಥ ಇಸ್ಲಾಂ ಮತ್ತು ಅಹ್ಮದಿಯಾ ಸಂಘಟನೆಯ ಸೇವೆಗಾಗಿ ಮೀಸಲಾಗಿರಿಸಿದ "ಯುಗರಶ್ಮಿ" ತ್ರೈಮಾಸಿಕವು ವಿವಿಧ ಧರ್ಮಗಳ ತುಲನಾತ್ಮಕ ಪಠನಾಸಕ್ತರಿಗೆ ಒಂದು ಉತ್ತಮ ಪತ್ರಿಕೆಯಾಗಿದೆ.

ದೇವಾಸ್ತಿತ್ವ, ಇತರ ಧರ್ಮ ಮತ್ತು ಧರ್ಮಾಚಾರ್ಯರ ಕುರಿತು ಇಸ್ಲಾಮಿನ ವೀಕ್ಷಣೆ, ಕೋಮು ಸೌಹಾರ್ದದ ಮಾರ್ಗಗಳು, ಇಸ್ಲಾಮಿನ ತತ್ತ್ವೋಪದೇಶಗಳು, ಮಾನವ ಕುಲದ ಏಳಿಗೆಗೆ ಇಸ್ಲಾಮಿನ ಕೊಡುಗೆ, ಇಂದಿನ ಆಧ್ಯಾತ್ಮಿಕ ಅಧಃಪತನ ಮತ್ತು ಪುನರುಜ್ಜೀವನ ಮಾರ್ಗಗಳು ಮೊದಲಾದ ವಿಷಯಗಳ ಕುರಿತು ಲೇಖನ ಪರಾಮರ್ಶೆಗಳನ್ನು ಈ ಪತ್ರಿಕೆಯ ಪ್ರತಿ ಸಂಚಿಕೆಯಲ್ಲೂ ಕಾಣಬಹುದು.

| ಬಿಡಿ ಪ್ರತಿ: ರೂ. 5-00 | ವಾರ್ಷಿಕ ಚಂದಾ : ರೂ. 20-00 | ಅಂಚೆ ಮೂಲಕ : ರೂ. 25-00 |
|---|---|---|

ವ್ಯವಹರಿಸಿರಿ:

**The Editor**
**YUGARASHMI**
**Kannada Quarterly**
10-23-1008/1, I Floor, Ansari Road
Bunder, Mangalore - 575 001

**ಈ ವರ್ಷದ "ಯುಗರಶ್ಮಿ"ಯ ಉಚಿತ ಪ್ರತಿಗಳನ್ನು ವಿತರಣೆ ಮಾಡಲು ಸಹಾಯಧನ ನೀಡಿದ ಉದಾರಶೀಲರು.**

| | | ಪ್ರತಿಗಳು |
|---|---|---|
| 1. | ಜನಾಬ್ ಕೆ.ಕೆ. ಬದ್ರುದ್ದೀನ್ ಸಾಹೇಬ್, ಕರಂಬಾರ್ | 280 |
| 2. | ಜನಾಬ್ ಕೆ.ಎಂ. ಅಲಿ ಸಾಹೇಬ್, ಹಳೆಯಂಗಡಿ | 40 |
| 3. | ಜನಾಬ್ ಬಿ.ಎಸ್.ಎ. ರಹೀಂ ಸಾಹೇಬ್, ಪುತ್ತೂರು | 40 |
| 4. | ಜನಾಬ್ ಮುಹಮ್ಮದ್ ಯೂಸುಫ್ ಸಾಹೇಬ್, ಮಂಗಳೂರು | 40 |
| 5. | ಜನಾಬ್ ರಶೀದ್ ಅಹ್ಮದ್ ಸಿದ್ದೀಖ್ ಸಾಹೇಬ್, ಮಂಗಳೂರು | 40 |
| 6. | ತಾಹಿರ ಸಿದ್ದೀಖ ಸಾಹಿಬ, ಮಂಗಳೂರು | 40 |

ದಿನಂಪ್ರತಿ 24 ಗಂಟೆಗಳ ಕಾಲ ಪ್ರಸಾರಗೊಳ್ಳುತ್ತಿರುವ

ಏಕೈಕ ಟಿ.ವಿ. ಚ್ಯಾನೆಲ್

# ಮುಸ್ಲಿಂ ಟೆಲಿವಿಶನ್ ಅಹ್ಮದಿಯಾ ಇಂಟರ್‌ನೇಶನಲ್

# THE FIRST ISLAMIC SATELLITE CHANNEL

**BROADCASTING ROUND THE CLOCK**

| AUDIO FREQUENCY | | |
|---|---|---|
| URDU | : | 6.50 |
| ENGLISH | : | 7.02 |
| ARABIC | : | 7.20 |
| BENGALI | : | 7.38 |
| FRENCH | : | 7.56 |
| DUTCH | : | 7.74 |
| TURKISH | : | 8.10 |

| | | |
|---|---|---|
| SATELLITE | : | INTELSAT 703 IS-703 AT 57* E |
| DECODER | : | C Band |
| POSITION | : | 57* East |
| POLARITY | : | Left Hand Circular |
| DISH SIZE | : | Max 8.Ft. |
| VIDEO FREQUENCY | : | 4177.5 Mhz |
| AUDIO FREQUENCY | : | 6.50 Mhz |

E Mail : mta @ bitinternet.com

INTERNET CODE : http://www.alislam.org/mta

**MTA International,** P.O. Box 12926, London SW 18 4ZN

Tel : 44-181 870 0922 Fax : 44-181 875 0249

Internet Code: http://www.alislam.org/mta

Regd. with the Registrar of Newspapers for India No. R.N. 27354/75
YUGARASHMI Kannada Quarterly, January - March 1999


# ಸ್ಟಾಂಡರ್ಡ್ ಟೈಲರಿ

ಕಡೂರು, ಚಿಕ್ಕಮಗಳೂರು ಜಿಲ್ಲೆ

## ರಾಜಾ ಮಾರ್ಕಿನ ಹಂಚುಗಳು

ಚಾವಣಿ ಹಂಚು, ಮೂಲೆ ಹಂಚು, ಗೋಡೆ ಹಂಚು, ಹಾಸು ಹಂಚು,
ಮೆತ್ತಡ ಹಂಚು, ಆಲಂಕಾರಿಕ ಹಂಚು ಮೊದಲಾದ
ಎಲ್ಲ ತರದ ಆವೆಮಣ್ಣಿನ ಉತ್ಪನ್ನಗಳು ದೊರೆಯುತ್ತವೆ.

# STANDARD TILERY

**KADUR,**

CHICKMAGALUR DISTRICT

**RAJA MARK**

Roofing Tiles, Ridges, Wall Tiles, Span Tiles,
Floorings, Decorative Tiles, Ceillings Etc., Etc.

**ALL CLAY PRODUCTS AVAILABLE.**


Edited and Published by **Mohammad Yusuf** on behalf of Jamath Ahmadiyya at 10-23-1008/1, I Floor, Ansari Road, Mangalore - 575 001.
Printed at **Manorama Offsets**, Mangalore on behalf of Jubilee Printing Press, Mangalore.
Typeset at **Madhuban Graphics**, Alake, Mangalore - 575 003